ಸಂಪುಟ: 05 ಸಂಚಿಕೆ: 265 ಪುಟಗಳು: 08 ಮಂಗಳವಾರ 09 ಡಿಸೆಂಬರ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**


ಮರದ ಮೇಲೆ ಕುಳಿತ ಹಕ್ಕಿಗೆ ಕೊಂಬೆ ಮುರಿದು ಬೀಳುವ ಭಯವಿರದು. ಏಕೆಂದರೆ ಅದು ನಂಬಿರುವುದು ತನ್ನ ರೆಕ್ಕೆಗಳನ್ನೇ ಹೊರತು ಕೊಂಬೆಯನ್ನಲ್ಲ. ಹಾಗೆಯೇ ನಮ್ಮ ಸಾಮರ್ಥ್ಯದ ಮೇಲೆ ನಮಗೆ ಸದಾ ಆತ್ಮವಿಶ್ವಾಸವಿರಲಿ

# ವರುಣಾ ಕ್ಷೇತ್ರ ಚುನಾವಣಾ ಅಕ್ರಮ ಆರೋಪ

## ಸಿಎಂ ಸಿದ್ದರಾಮಯ್ಯಗೆ ನೋಟಿಸ್ ಜಾರಿಗೊಳಿಸಿದ ಸುಪ್ರೀಂ ಕೋರ್ಟ್!

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2023ರಲ್ಲಿ ವರುಣ ಕ್ಷೇತ್ರದಿಂದ ಆಯ್ಕೆಯಾಗಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಿದೆ. ಈ ಸಂಬಂಧ ಸಿದ್ದರಾಮಯ್ಯ ಅವರಿಗೆ ನೋಟಿಸ್ ಜಾರಿಗೊಳಿಸಿದೆ.



ಸಿದ್ದರಾಮಯ್ಯ ಅವರು ಆಯ್ಕೆಯನ್ನು ಅಸಿಂಧುಗೊಳಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ವಜಾಗೊಳಿಸಿತ್ತು. ಆದರೆ, ಇದೀಗ ಸುಪ್ರೀಂ ಕೋರ್ಟ್‌ನಲ್ಲಿ ಈ ಪ್ರಕರಣ ಮರುಜೀವ ಪಡೆದಿದೆ. ಅರ್ಜಿದಾರರಾದ ಶಂಕರ್ ಅವರು, ಸಿದ್ದರಾಮಯ್ಯ ಅವರು ಜನಪ್ರತಿನಿಧಿ ಕಾಯ್ದೆ, 1951ರ ಅಡಿಯಲ್ಲಿ ಭ್ರಷ್ಟಾಚಾರ ಎಸಗಿದ್ದಾರೆ ಎಂದು ಆರೋಪಿಸಿದ್ದಾರೆ ಎಂದು ಲೈವ್ ಲಾವ್ ವರದಿ ಮಾಡಿದೆ.

**ರಾಜಕೀಯ ವಲಯದಲ್ಲಿ ಕುತೂಹಲ:** ಹೈಕೋರ್ಟ್ ಈ ಹಿಂದೆ ಅವರ ಅರ್ಜಿಯನ್ನು ವಜಾಗೊಳಿಸಿದ್ದರೂ, ಈಗ ಸುಪ್ರೀಂ ಕೋರ್ಟ್ ಈ ವಿಚಾರವಾಗಿ ಮುಖ್ಯಮಂತ್ರಿಗಳ ಪ್ರತಿಕ್ರಿಯೆಯನ್ನು ಕೋರಿದೆ. ಈ ಬೆಳವಣಿಗೆ ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ.

ಮ್ಯಾನಿಫೆಸ್ಟೋ ಘೋಷಣೆಗಳು ಹೇಗೆ ಚುನಾವಣಾ ದುರುಪಯೋಗ ಆಗುತ್ತವೆ? ಎಂದು ನ್ಯಾಯಮೂರ್ತಿ ನಾಥ್ ವಿಚಾರಣೆ ವೇಳೆ ಪ್ರಶ್ನಿಸಿದರು. ಆರಂಭದಲ್ಲಿ ಅರ್ಜಿಯನ್ನು ವಜಾಗೊಳಿಸಲು ನ್ಯಾಯಾಲಯ ಮುಂದಾಗಿದ್ದರೂ, ಚುನಾವಣೆಗೂ ಮುನ್ನ ನೀಡಿದ ಭರವಸೆಗಳು ಚುನಾವಣಾ ದುರುಪಯೋಗವಾಗುತ್ತವೆಯೇ ಎಂಬ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ಬಾಕಿ ಇರುವ ಪ್ರಕರಣ ಹಾಗೂ ಮತ್ತೊಂದು ಪ್ರಕರಣಕ್ಕೆ ಈಗಾಗಲೇ ಪೀಠವು ನೋಟಿಸ್ ಜಾರಿ ಮಾಡಿರುವುದನ್ನು ಗಮನಿಸಿ ಈ ಕ್ರಮ ಕೈಗೊಂಡಿದೆ.

**ಅರ್ಜಿದಾರರ ವಾದ ಏನು?:** ಕಾಂಗ್ರೆಸ್ ನಾಯಕ ಚುನಾವಣಾ ಅಕ್ರಮ ಎಸಗಿದ್ದಾರೆ ಎಂದು ಅರ್ಜಿದಾರರು ಆರೋಪಿಸಿದ್ದರು. ಕಾಂಗ್ರೆಸ್ ಪಕ್ಷವು ಐದು ಗ್ಯಾರಂಟಿಗಳನ್ನು ಜನರಿಗೆ ನೀಡಿತ್ತು. ಈ 'ಉಚಿತ ಯೋಜನೆ'ಗಳ ಭರವಸೆಗಳು ಚುನಾವಣಾ ದುರುಪಯೋಗ ಎಂದು ಅರ್ಜಿದಾರರು ವಾದಿಸಿದರು.

ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ (ಶಕ್ತಿ ಯೋಜನೆ) ನೀಡುವಂತಹ ಯೋಜನೆಗಳು ಸಂವಿಧಾನದ 14ನೇ ವಿಧಿಯನ್ನು ಉಲ್ಲಂಘಿಸುತ್ತವೆ ಮತ್ತು ಪುರುಷರ ವಿರುದ್ಧ ತಾರತಮ್ಯ ಎಸಗುತ್ತವೆ ಎಂದು ಅವರು ವಾದಿಸಿದರು. ಸಿದ್ದರಾಮಯ್ಯ ಅವರ ಚುನಾವಣೆಯನ್ನು ಅಸಿಂಧುಗೊಳಿಸಬೇಕು ಮತ್ತು ಅವರನ್ನು ಆರು ವರ್ಷಗಳ ಕಾಲ ಚುನಾವಣೆಗೆ ಸ್ಪರ್ಧಿಸದಂತೆ ನಿಷೇಧಿಸಬೇಕು ಎಂದು ಅರ್ಜಿದಾರರು ಕೋರಿದ್ದರು.

ಸುಪ್ರೀಂ ಕೋರ್ಟ್‌ನ ಈ ಆದೇಶವು ಚುನಾವಣೆಗೂ ಮುನ್ನ ನೀಡುವ ಉಚಿತ ಯೋಜನೆಗಳ ಕುರಿತು ಮಹತ್ವದ ಚರ್ಚೆಗೆ ಕಾರಣವಾಗಿದೆ. ಈ ವಿಚಾರವಾಗಿ ಸುಪ್ರೀಂ ಕೋರ್ಟ್‌ನ ಮುಂದಿನ ಆದೇಶಗಳು ಚುನಾವಣಾ ನೀತಿ ಮತ್ತು ಭರವಸೆಗಳ ಮೇಲೆ ದೊಡ್ಡ ಪರಿಣಾಮ ಬೀರಬಹುದು. ಈ ಪ್ರಕರಣದ ವಿಚಾರಣೆ ಮುಂದುವರೆಯಲಿದ್ದು, ಜನಸಾಮಾನ್ಯರ ಗಮನ ಸೆಳೆದಿದೆ.

## ಶಾಸಕ ವಿನಯ ಕುಲಕರ್ಣಿ ಜಾಮೀನು ಅರ್ಜಿ ವಜಾ

• ಉದಯವಾಹಿನಿ, ಬೆಂಗಳೂರು

ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದ ಆರೋಪಿಯಾದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಅವರಿಗೆ ಜಾಮೀನು ನೀಡಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನಿರಾಕರಿಸಿದೆ. ಈ ಸಂಬಂಧ ವಿನಯ ಕುಲಕರ್ಣಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು, ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಸೋಮವಾರ ಪ್ರಕಟಿಸಿದರು.

**ಪ್ರಕರಣವೇನು?:** ಧಾರವಾಡ ಉಪನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2016ರ ಜೂನ್ 15ರಂದು ಯೋಗೀಶ್‌ಗೌಡ ಗೌರ್ಡ ಕೊಲೆ ನಡೆದಿತ್ತು.

ಈ ಪ್ರಕರಣವನ್ನು ಸಿಬಿಐ ತನಿಖೆ ನಡೆಸಿದ್ದು, ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದೆ. ಪ್ರಕರಣದ ಪ್ರಮುಖ ಆರೋಪಿ ವಿನಯ ಕುಲಕರ್ಣಿ ಅವರು 2025ರ ಜೂನ್ 13ರಿಂದ ನ್ಯಾಯಾಂಗ ಬಂಧನದಲ್ಲಿದ್ದು ಪ್ರಕರಣದ ವಿಚಾರಣೆ ಎದುರಿಸುತ್ತಿದ್ದಾರೆ.

## ಹೈದರಾಬಾದ್ ಬೆಂಗಳೂರಿಗೆ ಸ್ಪರ್ಧಿಯಲ್ಲ: ಡಿಕೆ ಶಿವಕುಮಾರ

• ಉದಯವಾಹಿನಿ, ಬೆಂಗಳೂರು

'ದೇಶದ ಐಟಿ ರಫ್ತಿನಲ್ಲಿ ಬೆಂಗಳೂರು ಶೇ 43ರಷ್ಟು ಪಾಲು ಹೊಂದಿದೆ. ತೆಲಂಗಾಣ ಈ ವಿಚಾರದಲ್ಲಿ ಕಡಿಮೆ ಇದ್ದರೂ ಈ ರಾಜ್ಯದ ದೂರದೃಷ್ಟಿ, ಆಲೋಚನೆ ಬಹಳ ದೊಡ್ಡದಾಗಿದೆ. ಕೆಲವರು, ಬೆಂಗಳೂರಿಗೆ ಹೈದರಾಬಾದ್ ಪ್ರತಿಸ್ಪರ್ಧಿ ಎಂದು ಬಿಂಬಿಸುವ ಪ್ರಯತ್ನ ಮಾಡುತ್ತಿದ್ದಾರೆ. ನಾವು ಸ್ಪರ್ಧಿಗಳಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ಹೈದರಾಬಾದ್‌ನಲ್ಲಿ ಸೋಮವಾರ ನಡೆದ 'ತೆಲಂಗಾಣ ರೈಸಿಂಗ್' ಜಾಗತಿಕ ಸಮ್ಮೇಳನದಲ್ಲಿ ಮಾತನಾಡಿದ ಅವರು, 'ತೆಲಂಗಾಣವು ಬೆಂಗಳೂರು ಹಾಗೂ ಕರ್ನಾಟಕದ ಜೊತೆ ಸ್ಪರ್ಧಿಸುತ್ತಿದೆಯೇನೋ ಎಂದು ಅಂದುಕೊಂಡಿದ್ದೆ. ಆದರೆ ಜಾಗತಿಕ ಮಟ್ಟದಲ್ಲಿ ತೆಲಂಗಾಣ ಗುರುತಿಸಿಕೊಳ್ಳುತ್ತಿದೆ' ಎಂದರು.

'ಅಭಿವೃದ್ಧಿ ಎಂಬುದು ಮ್ಯಾಜಿಕ್ ಮೂಲಕ ಸಾಧಿಸುವುದಲ್ಲ, ಸುಸ್ಥಿರ ಯೋಜನೆ, ಪರಿಶ್ರಮ, ಪ್ರಾಮಾಣಿಕತೆಯಿಂದ ಸಾಧಿಸುವುದಾಗಿದೆ ಎಂದರು. 'ಈ ಸಮ್ಮೇಳನ ಭವಿಷ್ಯದ ಬಗ್ಗೆ ಚಿಂತನೆ ನಡೆಸಿದೆ. 10 ವರ್ಷಗಳ ನಂತರ ತೆಲಂಗಾಣದಲ್ಲಿ ಕಾಂಗ್ರೆಸ್ ಸರ್ಕಾರವನ್ನು ಜನ್ ಆಯ್ಕೆ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಇಂದಿನಿಂದ ವಿಧಾನ ಮಂಡಲ ಅಧಿವೇಶನ ಆರಂಭವಾಗಿದ್ದರೂ ಇಲ್ಲಿಗೆ ಬಂದಿದ್ದೇನೆ. ಇಡೀ ದಕ್ಷಿಣ ಭಾರತ ತೆಲಂಗಾಣ ರಾಜ್ಯದ ಬೆನ್ನಿಗೆ ನಿಲ್ಲುವ ಮೂಲಕ ದೇಶದ ಪ್ರಗತಿಗೆ ಶ್ರಮಿಸಲಿದೆ. ನಾನು ಇಲ್ಲಿ ಕರ್ನಾಟಕದ ಉಪ ಮುಖ್ಯಮಂತ್ರಿಯಾಗಿ ಮಾತ್ರ ಬಂದಿಲ್ಲ. ದಕ್ಷಿಣ ಭಾರತದ ಧ್ವನಿಯಾಗಿ ಬಂದಿದ್ದೇನೆ. ದೇಶದ ಪ್ರಗತಿಯಲ್ಲಿ ದಕ್ಷಿಣ ಭಾರತದ ಕೊಡುಗೆ ಅಪಾರ' ಎಂದರು.

## ತಾಂತ್ರಿಕ ಮೌಲ್ಯಮಾಪನ ಆಯೋಗಕ್ಕೆ ರಾಜ್ಯ ಪತ್ರ

• ಉದಯವಾಹಿನಿ, ಬೆಂಗಳೂರು

ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಸಮತೋಲನ ಜಲಾಶಯ ನಿರ್ಮಿಸುವ ಪ್ರಸ್ತಾವಿತ ಮೇಕೆದಾಟು ಯೋಜನೆಯ ತಾಂತ್ರಿಕ-ಆರ್ಥಿಕ ಮೌಲ್ಯಮಾಪನ ನಡೆಸುವಂತೆ ಕರ್ನಾಟಕ ಸರ್ಕಾರವು ಕೇಂದ್ರ ಜಲ ಆಯೋಗಕ್ಕೆ ಪತ್ರ ಬರೆದಿದೆ.ಯೋಜನೆಗೆ ಆಕ್ಷೇಪ ವ್ಯಕ್ತಪಡಿಸಿ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿತ್ತು. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಲಹೆಗಳನ್ನು ಪಡೆದು ಕೇಂದ್ರ ಜಲ ಆಯೋಗ ಮುಂದಿನ ತೀರ್ಮಾನ ತೆಗೆದುಕೊಳ್ಳಬಹುದು ಎಂದು ಸೂಚ್ಯವಾಗಿ ಹೇಳಿತ್ತು. ಇದೀಗ, ರಾಜ್ಯ ಸರ್ಕಾರವು ಆಯೋಗಕ್ಕೆ ಪತ್ರ ಬರೆದು ತ್ವರಿತವಾಗಿ ಈ ಪ್ರಕ್ರಿಯೆ ಮುಗಿಸುವಂತೆ ಒತ್ತಡ ಹೇರಿದೆ. ಯೋಜನೆಯ ತಾಂತ್ರಿಕ-ಆರ್ಥಿಕ ಸಾಧ್ಯತೆಗಳ ಪರಾಮರ್ಶೆ ನಡೆಸುವಂತೆ ಆಯೋಗಕ್ಕೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ಕಳೆದ ವರ್ಷ ಫೆಬ್ರುವರಿಯಲ್ಲಿ ಪ್ರಸ್ತಾವ ವಾಪಸ್ ಕಳುಹಿಸಿತ್ತು. ಜಲ ಆಯೋಗ ಪ್ರಸ್ತಾವದ ಮೌಲ್ಯಮಾಪನ ನಡೆಸಿರಲಿಲ್ಲ. ಆಯೋಗವು ಎಂಟು ಹಂತದಲ್ಲಿ ಮೌಲ್ಯಮಾಪನ ನಡೆಸಲಿದ್ದು, ಇದಕ್ಕೆ ಕನಿಷ್ಠ ಆರು ತಿಂಗಳು ಬೇಕಾಗಲಿದೆ.

**ಬೆಳಗಾವಿಯಿಂದ ಬಸ್ ಸಂಚಾರ ಸ್ಥಗಿತ, ಪ್ರಯಾಣಿಕರ ಪರದಾಟ**

**ಅನುಮತಿ ನಿರಾಕರಣೆ ಹಿನ್ನೆಲೆ ಪ್ರತಿಭಟನೆ**

# ಮಹಾ ಪುಂಡಾಟ ಪ್ರಯಾಣಿಕರ ಪರದಾಟ






## ಜೈ ಮಹಾರಾಷ್ಟ್ರ ಸ್ಟಿಕರ್ ಅಂಟಿಸಿದ ಪುಂಡರು!

1 ಬೆಳಗಾವಿಯಲ್ಲಿ ಎಂಇಎಸ್ ಮಹಾಮೇಳಾವ್‌ಗೆ ಅನುಮತಿ ನಿರಾಕರಣೆ

2 ಪುಣೆಯಿಂದಹೊರಟಿದ್ದ ಕೆಎಸ್‌ಆರ್‌ಟಿಸಿ ಬಸ್ ತಡೆದು ಜೈ ಮಹಾರಾಷ್ಟ್ರ ಸ್ಟಿಕರ್ ಅಂಟಿಸಿದ ಪುಂಡರು

3 ಬೆಳಗಾವಿಯಿಂದ ಮಹಾರಾಷ್ಟ್ರಕ್ಕೆ ತೆರಳುವ ಎಲ್ಲಾ ಬಸ್ ಸಂಚಾರ ಸ್ಥಗಿತ

• ಉದಯವಾಹಿನಿ, ಬೆಳಗಾವಿ

ಜಿಲ್ಲೆಯಲ್ಲಿ ಚಳಿಗಾಲದ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ, ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಆಯೋಜಿಸಿದ್ದ ಮಹಾಮೇಳಾವಕ್ಕೆ ಪೊಲೀಸ್ ಅನುಮತಿ ನಿರಾಕರಣೆ ಹಿನ್ನೆಲೆಯಲ್ಲಿ ನಗರದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ. ಅನುಮತಿ ಸಿಕ್ಕಿಲ್ಲವೆಂಬ ಕಾರಣಕ್ಕೆ ಸೋಮವಾರ ಬೆಳಗ್ಗಿನಿಂದಲೇ ಎಂಇಎಸ್ ಮುಖಂಡರು ಹಾಗೂ ಕಾರ್ಯಕರ್ತರು ಗುಂಪು ಗುಂಪಾಗಿ ಜಮಾಯಿಸಿ ಪ್ರತಿಭಟನೆಗೆ ಮುಂದಾದರು. ಪ್ರತಿಭಟನೆ ತೀವ್ರ ಸ್ವರೂಪ ಪಡೆದ ಹಿನ್ನೆಲೆಯಲ್ಲಿ ಪೊಲೀಸರು ಹಲವು ಕಡೆ ಹಸ್ತಕ್ಷೇಪ ನಡೆಸಿ, ಈಗಾಗಲೇ 20ಕ್ಕೂ ಹೆಚ್ಚು ಮುಖಂಡರನ್ನು ವಶಕ್ಕೆ ಪಡೆದಿದ್ದಾರೆ. ವಶಕ್ಕೆ ಒಳಗಾದವರಲ್ಲಿ ಮಾಜಿ ಶಾಸಕ ಮನೋಹರ್ ಕೀಣೆಕರ್, ರಮಾಕಾಂತ ಕೊಂಡೊಸ್ಕರ್, ಪ್ರಕಾಶ ಮರಗಾಳೆ, ಮಾಲೋಜಿ ಅಷ್ಟೇಕರ್, ಶುಭಂ ಶಳಕೆ ಸೇರಿದಂತೆ ಪ್ರಮುಖ ಎಂಇಎಸ್ ಮುಖಂಡರು ಸೇರಿದ್ದಾರೆ. ಪ್ರತಿಭಟನೆ ತೀವ್ರಗೊಳ್ಳುತ್ತಿದ್ದಂತೆ, ಬೆಳಗಾವಿ ಕರವೇ ಸಂಘಟನೆಯ ಮುಖಂಡ ಸುರೇಶ ಗವಣ್ಣವರ್ ಸಹ ಪೊಲೀಸರ ವಶಕ್ಕೆ ಒಳಗಾದರು.

ವಿಶೇಷವೆಂದರೆ, ಅವರು ಎಂಇಎಸ್ ವಿರುದ್ದ ಪ್ರತಿಭಟಿಸಲು ಬಂದಿದ್ದಾಗಲೇ ಪೊಲೀಸ್ ಬಂಧನಕ್ಕೆ ಒಳಗಾಗಿದ್ದು, ಸ್ಥಳದಲ್ಲಿ ಕ್ಷಣಕ್ಷಣಕ್ಕೂ ವಾತಾವರಣ ಕಾವೇರಿತು. ಅಧಿವೇಶನದ ಸಮಯದಲ್ಲಿ ಯಾವುದೇ ಗಲಭೆ ಅಥವಾ ಅರಾಜಕತೆ ನಡೆಯದಂತೆ, ಮಹಾಮೇಳಾವ್‌ಗೆ ಅನುಮತಿ ನೀಡುವುದಿಲ್ಲ. ನಿಯಮ ಉಲ್ಲಂಘಿಸಿದರೆ ತಕ್ಷಣ ಕ್ರಮ. ಈ ನಿರ್ಧಾರದಿಂದ ಎಂಇಎಸ್ ಕಾರ್ಯಕರ್ತರಲ್ಲಿ ಅಸಮಾಧಾನ ಹೆಚ್ಚಾಗಿದ್ದು, ಹೋರಾಟದ ಭಾವನೆ ಮತ್ತಷ್ಟು ಬಿರುಸಾಗಿದೆ. ಮಹಾಮೇಳನ್ ಆಯೋಜನೆ ರದ್ದು ಪಡಿಸಲಾಗಿದೆ. ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನವೇ ಎಂಇಎಸ್ ಆಯೋಜಿಸಿದ್ದ ಮಹಾಮೇಳಾವಕ್ಕೆ ಕಾರಣವಾಗಿತ್ತು.

ಅಧಿವೇಶನದ ವೇಳೆ ತಮ್ಮ ಬೇಡಿಕೆಗಳನ್ನು ಜೋರಾಗಿ ಮುಂದಿಡಲು ಎಂಇಎಸ್ ಮಹಾಮೇಳಾವವನ್ನು ಆಯೋಜಿಸಿತ್ತು. ಕಾನೂನು ಮತ್ತು ಸುವ್ಯವಸ್ಥೆ ಹದಗೆಡುವ ಸಾಧ್ಯತೆ ಹಿನ್ನೆಲೆಯಲ್ಲಿ ಪೊಲೀಸರಿಂದ ಮಹಾಮೇಳಾವಕ್ಕೆ ಅನುಮತಿ ನಿರಾಕರಣೆ ಮಾಡಲಾಯಿತು. ಈ ನಿರ್ಧಾರದ ವಿರುದ್ಧ ಎಂಇಎಸ್ ಗರಂಗೊಂಡಿದ್ದು, ಅವರ ಕಾರ್ಯಕರ್ತರು ರಸ್ತೆಗೆ ಇಳಿದು ಪ್ರತಿಭಟನೆ ಪ್ರಾರಂಭಿಸಿದರು.

ನಗರದಲ್ಲಿ ಜಾರಿಗೊಂಡಿರುವ ಭದ್ರತಾ ವ್ಯವಸ್ಥೆ ಹೆಚ್ಚಿಸಲಾಗಿದ್ದು, ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚುವರಿ ಫೋರ್ಸ್ ನಿಯೋಜಿಸಲಾಗಿದೆ. ಎರಡೂ ರಾಜ್ಯಗಳ ಗಡಿಭಾಗದ ರಾಜಕೀಯ ತೀವ್ರತೆ ಮತ್ತೊಮ್ಮೆ ಉದ್ಭವಿಸಿರುವುದರಿಂದ ಪರಿಸ್ಥಿತಿ ಯಾವ ದಿಕ್ಕಿನಲ್ಲಿ ಸಾಗುತ್ತದೆ ಎಂಬ ಪ್ರಶ್ನೆ ನಾಗರಿಕರಲ್ಲಿ ಆತಂಕ ಮೂಡಿಸಿದೆ. ನಿಪ್ಪಾಣಿ, ಶಿನ್ನೋಳಿ ಸೇರಿದಂತೆ ಮಹಾರಾಷ್ಟ್ರ ಗಡಿಯ ಪ್ರಮುಖ ಮಾರ್ಗಗಳಲ್ಲಿ ಗಟ್ಟಿಯಾದ ತಪಾಸಣೆ ನಡೆಯುತ್ತಿದೆ. ಶಿವಸೇನೆ ಮುಖಂಡರು ಬೆಳಗಾವಿ ಪ್ರವೇಶಿಸಿ ಗಲಭೆ ಸೃಷ್ಟಿಸಬಾರದು ಎಂಬ ಉದ್ದೇಶದಿಂದ, ಕೆಲವು ಹೆಸರುಪಟ್ಟ ನಾಯಕರಿಗೆ ಗಡಿ ಪ್ರವೇಶ ನಿರ್ಬಂಧ ಹೇರಲು ಕ್ರಮ ಕೈಗೊಳ್ಳಲಾಗಿದೆ. ಶಿವಸೇನೆ ಮುಖಂಡರು ಅಥವಾ ಹೊರಗಿನಿಂದ ಬರುವ ಗುಂಪುಗಳು ನಗರಕ್ಕೆ ಪ್ರವೇಶಿಸಿ ಉದ್ವಿಗ್ನತೆ ಹೆಚ್ಚಿಸುವ ಯಾವುದೇ ಚಟುವಟಿಕೆ ಮಾಡಲು ಅವಕಾಶ ನೀಡುವುದಿಲ್ಲ ಎಂಬುದಾಗಿ ಪೊಲೀಸ್‌ರು ಕಡ್ಡಿ ತುಂಡರಿಸಿದ ಹಾಗೆ ಹೇಳದ್ದಾರೆ.

ವ್ಯಾಕ್ಸಿನ್ ಡಿಪೋ ಮೈದಾನಕ್ಕೆ ಮಹಾಮೇಳಾವ್‌ಗೆ ಆಗಮಿಸುತ್ತಿದ್ದ ವೇಳೆ ಮಾಜಿ ಮೇಯರ್, ಎಂಇಎಸ್ ಪ್ರಧಾನ ಕಾರ್ಯದರ್ಶಿ ಮಾಳೋಜಿ ಅಷ್ಟೇಕರ, ರಮಾಕಾಂತ ಕೊಂಡುಸ್ಕರ್, ಆರ್.ಎಂ. ಚೌಗಲೆ, ಪ್ರಕಾಶ ಮರಗಳೆ, ಮನೋಹರ ಕಿಣ್ಣೇಕರ್ ಸೇರಿ ಹಲವು ಕಾರ್ಯಕರ್ತರನ್ನು ಎರಡನೇ ರೈಲ್ವೆ ಗೇಟ್ ಬಳಿ ವಶಕ್ಕೆ ಪಡೆದರು.

**ನಾಡದ್ರೋಹಿ ಘೋಷಣೆ**

ಕೆಲವರು ನಾಡದ್ರೋಹಿ ಘೋಷಣೆಗಳನ್ನು ಕೂಗಿದ್ದು, ''ಬೆಳಗಾವಿ, ಬಾಲ್ಕಿ, ಬೀದರ್ ಮಹಾರಾಷ್ಟ್ರಕ್ಕೆ ಸೇರಬೇಕು'' ಎಂಬ ಪ್ರಚೋದನಕಾರಿ ಘೋಷಣೆಗಳು ಕೇಳಿಬಂದವು. ಮಹಾಮೇಳಾವ್ ಗೆ ಅವಕಾಶ ನಿರಾಕರಿಸಿದ್ದರೂ ಎಂಇಎಸ್ ನವರು ವ್ಯಾಕ್ಸಿನ್ ಡಿಪೊ ಮೈದಾನದತ್ತ ಧಾವಿಸುತ್ತಲೇ ಇದ್ದಾರೆ. ಪೊಲೀಸರು ಅವರನ್ನು ವಶಕ್ಕೆ ಪಡೆದು, ತಮ್ಮ ವಾಹನದಲ್ಲಿ ಕರೆದೊಯ್ಯುತ್ತಿದ್ದಾರೆ. ಸ್ಥಳದಲ್ಲಿ ಆತಂಕದ ವಾತಾವರಣವಿದ್ದು, ನಗರದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣ ವಾಗಿದ್ದು, ಎಲ್ಲೆಡೆ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ನಿಗಾ ವಹಿಸಿದೆ.

**ಬಸ್‌ಗಳ ಸಂಚಾರ ಸ್ಥಗಿತ**


ಮಹಾರಾಷ್ಟ್ರದಲ್ಲಿ ಕರ್ನಾಟಕ ಬಸ್‌ಗಳನ್ನ ತಡೆಯುವ ಕೆಲಸ ಆಗ್ತಿದ್ದಂತೆ ಮುಂಜಾಗ್ರತಾ ಕ್ರಮವಾಗಿ ಮಹಾರಾಷ್ಟ್ರಕ್ಕೆ ರಾಜ್ಯದಿಂದ ತೆರಳುವ ಎಲ್ಲಾ ಸರ್ಕಾರಿ ಬಸ್‌ಗಳ ಸಂಚಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಕೊಲ್ಹಾಪುರ, ಪುಣೆ, ಮುಂಬಯಿ ಸೇರಿದಂತೆ ಹಲವೆಡೆ ಸಂಚರಿಸಬೇಕಿದ್ದ ರಾಜ್ಯದ ಬಸ್‌ಗಳ ಸಂಚಾರ ರದ್ದಾಗಿದೆ. ಅತ್ತ ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಆಗಮಿಸಬೇಕಿದ್ದ ಸರ್ಕಾರಿ ಬಸ್‌ಗಳ ಸಂಚಾರದಲ್ಲೂ ವ್ಯತ್ಯಯ ಉಂಟಾಗಿದ್ದು, ಪ್ರಯಾಣಿಕರು ಪರದಾಟ ನಡೆಸಿದ್ದಾರೆ.

**ಮಹಾರಾಷ್ಟ್ರ ಬಸ್ ತಡೆದ ಕರವೇ**

ಅಥಣಿ ಪಟ್ಟಣದಲ್ಲಿ ಮಹಾರಾಷ್ಟ್ರ ಬಸ್ ತಡೆದು ಕರವೇ ಶಿವರಾಮೇಗೌಡ ಬಣದ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ. ಕೊಲ್ಹಾಪುರದಲ್ಲಿ ಶಿವಸೇನೆ ಕಾರ್ಯಕರ್ತರು ಕರ್ನಾಟಕ ಸಾರಿಗೆ ಬಸ್ ತಡೆದಿದ್ದರಿಂದ ಆಕ್ರೋಶಗೊಂಡು ಬಸ್ ತಡೆದು ಕರವೇ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು. ಇನ್ನು ಬೆಳಗಾವಿ, ನಿಪ್ಪಾಣಿ, ಬೀದರ್, ಬಾಲ್ಕಿ ಕಾರವಾರವನ್ನು ಸಂಯುಕ್ತ ಮಹಾರಾಷ್ಟ್ರಕ್ಕೆ ಸೇರಿಸಬೇಕೆಂಬ ಘೋಷಣೆಗಳನ್ನು ಕೂಗುತ್ತಾ ವ್ಯಾಕ್ಸಿನ್ ಡಿಪೋ ಕಡೆ ಆಗಮಿಸುತ್ತಿದ್ದ ಎಂಇಎಸ್ ಮುಖಂಡರನ್ನು ಪೊಲೀಸರು ತಡೆದರು. ಈ ವೇಳೆ ವಾಗ್ವಾದ ನಡೆದು, ಎರಡನೇ ರೈಲ್ವೆ ಗೇಟ್ ಬಳಿ ಪೊಲೀಸರು ಅವರನ್ನು ವಶಕ್ಕೆ ಪಡೆದಿದ್ದಾರೆ.

# ಒಬ್ಬರಿಂದ ಪಕ್ಷ ಅಧಿಕಾರಕ್ಕೆ ಬಂದಿಲ್ಲ: ಡಿಕೆಶಿಗೆ ರಾಜಣ್ಣ ಪರೋಕ್ಷ ಟಾಂಗ್

• ಉದಯವಾಹಿನಿ, ಬೆಳಗಾವಿ



ಕೆಲವರು ಮುಖ್ಯಮಂತ್ರಿ ಆಗುವುದಕ್ಕೆ ಸಿದ್ದರಾಗಿದ್ದಾರೆ. ಆದರೆ ಒಬ್ಬರಿಂದ ಪಕ್ಷ ಅಧಿಕಾರಕ್ಕೆ ಬಂದಿಲ್ಲ ಎಂದು ಡಿಸಿಎಂ ಡಿಕೆ ಶಿವಕುಮಾರ್ ಅವರಿಗೆ ಪರೋಕ್ಷವಾಗಿ ಮಾಜಿ ಸಚಿವ ಕೆ ಎನ್ ರಾಜಣ್ಣ ಟಾಂಗ್ ನೀಡಿದರು.

ಸುವರ್ಣಸೌಧದಲ್ಲಿ ಸೋಮವಾರ ಮಾತನಾಡಿದ ಅವರು, ಕೆಲವರು ಸಿಎಂ ಆಗುವುದಕ್ಕೆ ರೆಡಿ ಆಗಿದ್ದಾರೆ ಆದರೆ ಒಬ್ಬರಿಂದ ಪಕ್ಷ ಅಧಿಕಾರಕ್ಕೆ ಬಂದಿಲ್ಲ ಎಂದರು. ಅಧಿವೇಶನ ನಂತರ ಯಾವುದೇ ಬದಲಾವಣೆ ಆಗುವುದಿಲ್ಲ, ರಾಜಕಾರಣ ಎಂಬುದು ನಿಂತ ನೀರಲ್ಲ, ಯಾವತ್ತೂ ಚಲನಶೀಲತೆ ಇರಬೇಕು. ನಮ್ಮ ಪಕ್ಷದ ರೀತಿಯಲ್ಲೂ ಬೇರೆ ಪಕ್ಷದಲ್ಲೂ ಬದಲಾವಣೆ ಇರುತ್ತದೆ ಎಂದರು.

ಬಿಜೆಪಿ ಪಕ್ಷದಲ್ಲೂ ಬದಲಾವಣೆ ಕೂಗು ಸದ್ಯಕ್ಕೆ ಎದ್ದಿದೆ. ಹಲವರು ಸ್ಥಾನಪಲ್ಲಟಕ್ಕೆ ದೊಡ್ಡ ದಂಡೇ ಸಿದ್ದವಾಗಿದೆ ಎಂದು ತಿರುಗೇಟು ನೀಡಿದರು. ಸಚಿವ ಸಂಪುಟ ಪುನಾರಚನೆ ಬಗ್ಗೆ ಈಗಾಗಲೇ ಕೆಲವರು ಮಾತನಾಡುತ್ತಿದ್ದಾರೆ. ಕಾಂಗ್ರೆಸ್ ನಲ್ಲಿ ಸಿಎಂ ಆಗುವುದಕ್ಕೆ ಕೆಲವರು ತಯಾರಾಗಿದ್ದಾರೆ . ಸಿಎಂ ಬದಲಾವಣೆ ಬಗ್ಗೆ ಈಗಾಗಲೇ ಸಿಎಂ ಸಿದ್ದರಾಮಯ್ಯ ಸ್ಪಷ್ಟನೆ ನೀಡಿದ್ದಾರೆ ಎಂದರು.

**ಅಧಿಕಾರಕ್ಕೆ ಬರಲು ಹಲವು ಜನರ ಶ್ರಮವಿದೆ**

ಕಾಂಗ್ರೆಸ್‌ನಲ್ಲಿ ಸಿಎಂ ಸ್ಥಾನದ ಆಕಾಂಕ್ಷಿಗಳು ಹಲವರು ಇದ್ದಾರೆ. ಗೃಹ ಸಚಿವ ಡಾ. ಜಿ ಪರಮೇಶ್ವರ್ ದಲಿತರು ಎಂಬುವುದು ಒಂದೇ ಕಾರಣವಲ್ಲ, 2013ರಿಂದ ಪಕ್ಷ ಸಂಘಟನೆಯಲ್ಲಿ ಜಿ. ಪರಮೇಶ್ವರ್ ಶ್ರಮ ಇದೆ. ಅವತ್ತು ಅವರ ಶ್ರಮದಿಂದ ಪಕ್ಷ ಅಧಿಕಾರಕ್ಕೆ ಬಂತು. ಆದರೆ ಅವತ್ತು ಅವರು ಚುನಾವಣೆಯಲ್ಲಿ ಸೋತಿದ್ದರು ಎಂದು ನೆನಪಿಸಿಕೊಂಡರು.



ಹೀಗಾಗಿ ಕಾಂಗ್ರೆಸ್ ಪಕ್ಷ ಒಬ್ಬರಿಂದ ಅಧಿಕಾರಕ್ಕೆ ಬಂದಿದೆ ಎಂಬುದು ತಪ್ಪು. ಪಕ್ಷ ಅಧಿಕಾರಕ್ಕೆ ಬರಲು ಹಲವಾರು ಜನರ ಶ್ರಮ ಇದೆ ಎಂದು ರಾಜಣ್ಣ ಹೇಳಿದರು.

**ಸಿದ್ದರಾಮಯ್ಯ ಪರ ಯತೀಂದ್ರ ಬ್ಯಾಟಿಂಗ್**

ಇದೇ ಸಂದರ್ಭದಲ್ಲಿ ಸಿಎಂ ಸಿದ್ದರಾಮಯ್ಯ ಅವರ ಪರವಾಗಿ ಅವರ ಪುತ್ರ ಯತೀಂದ್ರ ಸಿದ್ದರಾಮಯ್ಯ ಬ್ಯಾಟಿಂಗ್ ಮಾಡಿದ್ದಾರೆ. ಸಿದ್ದರಾಮಯ್ಯ ಐದು ವರ್ಷ ಸಿಎಂ ಆಗಿ ಇರ್ತಾರೆ ಎಂದು ಹೇಳುವ ಮೂಲಕ ನಾಯಕತ್ವ ಬದಲಾವಣೆ ಇಲ್ಲ ಎಂದರು.

# ಸಿಸೇರಿಯನ್ ಹೆರಿಗೆ ಹೆಚ್ಚಳಕ್ಕೆ ಕಾರಣವೇನು: ಆರೋಗ್ಯ ಸಚಿವರು ಕೊಟ್ಟ ಸ್ಪಷ್ಟನೆ

• ಸಮಸ್ಯೆಗಳು ಯಾವಾಗಲೂ ಇರುತ್ತದೆ, ಪರಿಹಾರ ಮಾಡಲು ಪ್ರಯತ್ನ ಮಾಡಿದ್ದೇವೆ • ಸಿಸೇರಿಯನ್ ಮಾಡಲೇಬೇಕಾದ ಅನಿವಾರ್ಯತೆ

• ಉದಯವಾಹಿನಿ, ಬೆಂಗಳೂರು

ಇತ್ತೀಚೆಗೆ ಹೆಚ್ಚಾಗುತ್ತಿರುವ ಸಿಸೇರಿಯನ್ ಹೆರಿಗೆಯ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟನೆಯನ್ನು ನೀಡಿದ್ದಾರೆ. ವಿಧಾನಪರಿಷತ್ ಸದಸ್ಯರಾದ ಗೋವಿಂದರಾಜು ಅವರ ಪ್ರಶ್ನೆಗೆ ಸಚಿವರು ಉತ್ತರವನ್ನು ನೀಡಿದ್ದಾರೆ.

ಕೇವಲ ಅಪೌಷ್ಟಿಕತೆಯಿಂದ ಸಿಸೇರಿಯನ್ ಹೆಚ್ಚಳವಾಗುತ್ತಿದೆ ಎಂದು ಹೇಳಲು ಸಾಧ್ಯವಿಲ್ಲ. ಅದೂ ಒಂದು ಕಾರಣ ಅಷ್ಟೇ.. ಯಾಕೆಂದರೆ ಶಿಕ್ಷಿತರು, ಮೇಲ್ಮಧ್ಯಮ ವರ್ಗಗಳಲ್ಲಿ, ಮುಂದುವರೆದ ಪ್ರದೇಶಗಳಲ್ಲಿ ಸಿಸೇರಿಯನ್ ಹೆಚ್ಚು ಕಂಡುಬರುತ್ತದೆ ಎಂದು ಸಚಿವರು ಹೇಳಿದ್ದಾರೆ. ಸಿಸೇರಿಯನ್'ಗೆ ಪ್ರಮುಖ ಕಾರಣಗಳಲ್ಲಿ ಒಂದು ಭಯ, ಹೆರಿಗೆ ನೋವು ಸಹಿಸಿಕೊಳ್ಳುವುದು ಕಷ್ಟ ಎನ್ನುವ ಮಾತುಗಳು ಇರುವುದರಿಂದ ಇದರ ಪ್ರಮಾಣ ಹೆಚ್ಚಾಗುತ್ತಿದೆ. ಇದರ ಜೊತೆಗೆ, ಖಾಸಗಿ ಆಸ್ಪತ್ರೆಗಳಲ್ಲಿ ಸಿಸೇರಿಯನ್ ಹೆಚ್ಚಳವಾಗಲು ಹೆಚ್ಚಿನ ಬಿಲ್ ಮಾಡಬಹುದು, ರಿಸ್ಕ್ ಕಡಿಮೆ ಹೀಗೆ ಹಲವಾರು ಕಾರಣಗಳಿವೆ





ಎಂದು ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಸಹಜ ಹೆರಿಗೆ ಆದರೆ ಬಹಳ ಗಮನ ಇಟ್ಟು ಚಿಕಿತ್ಸೆ ನೀಡಬೇಕಾಗುತ್ತದೆ. ಕೆಲವು ಬಾರಿ ವೈದ್ಯಕೀಯ ಕಾರಣಕ್ಕೂ ಸಿಸೇರಿಯನ್ ಮಾಡಲೇಬೇಕಾದ ಅನಿವಾರ್ಯತೆ ಇರುತ್ತದೆ. ಅದನ್ನು ವೈದ್ಯರು ಮಾತ್ರ ನಿರ್ಣಯ ಮಾಡಬಹುದಾಗಿದೆ ಎಂದು ಆರೋಗ್ಯ ಸಚಿವರು, ಮೇಲ್ಮನೆಯಲ್ಲಿ ಉತ್ತರವನ್ನು ನೀಡಿದ್ದಾರೆ. ಸಿಸೇರಿಯನ್ ಹೆರಿಗೆ ಕುರಿತು ಈಗಾಗಲೇ ತುಮಕೂರಿನಲ್ಲಿ ಪೈಲಟ್ ಪ್ರೊಜೆಕ್ಟ್ ಮಾಡಿ, ವರದಿ ನಮ್ಮ ಕೈಸೇರಿದೆ. ಕೆಲವು ಆಸ್ಪತ್ರೆಗಳಲ್ಲಿ 75-80% ಸಿಸೇರಿಯನ್ ಆಗಿದೆ. ನಾವು ಅದನ್ನು ಸರಿಯಾಗಿ ಅವಲೋಕಿಸಬೇಕಿದೆ. ಇದು ಬಹಳ ಸೂಕ್ಷ್ಮ ವಿಚಾರ.

**ಗುತ್ತಿಗೆ ಆಧಾರದಲ್ಲಿ ವೈದ್ಯರು ಮತ್ತು ಪ್ಯಾರಾ ಮೆಡಿಕಲ್ ಸಿಬ್ಬಂದಿ ನೇಮಕ**

**ಕೆಸಿ ಜನರಲ್ ಆಸ್ಪತ್ರೆಯಲ್ಲಿ ಕ್ಯೂ ಆರ್ ಕೋಡ್ ಮುಖಾಂತರ ಚೀಟಿ ನೀಡಿ ಕಾಯುವಿಕೆಯ ಸಮಯ ಕಡಿಮೆ ಮಾಡಲಾಗಿದೆ. ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಅಡಿಯಲ್ಲಿ ಕಾರ್ಯನಿರ್ವಹಿಸುವ ವಿಕ್ಟೋರಿಯಾ ಆಸ್ಪತ್ರೆಗೆ ಆಂಧ್ರ ಪ್ರದೇಶ, ತಮಿಳನಾಡು ರಾಜ್ಯಗಳಿಂದಲೂ ರೋಗಿಗಳು ಬರುವುದರಿಂದ ಸೂಕ್ತ ಕ್ರಮ ವಹಿಸಲಾಗಿದ್ದು, ಪ್ರಸ್ತುತ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ದೀರ್ಘ ಕಾಯುವಿಕೆ ಇರುವುದಿಲ್ಲ ಎಂದು ಸಚಿವರು ಉತ್ತರವನ್ನು ನೀಡಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಗುತ್ತಿಗೆ ಆಧಾರದಲ್ಲಿ ವೈದ್ಯರು ಮತ್ತು ಪ್ಯಾರಾ ಮೆಡಿಕಲ್ ಸಿಬ್ಬಂದಿ ನೇಮಕ ಮಾಡಿ ಸೇವೆ ಪಡೆಯಲಾಗುತ್ತಿದೆ. ಬೌರಿಂಗ್ ಆಸ್ಪತ್ರೆಯಲ್ಲಿ ವೈದ್ಯರು ಮತ್ತು ಪ್ಯಾರಾ ಮೆಡಿಕಲ್ ಸಿಬ್ಬಂದಿ ಕೊರತೆ ಇರುವುದಿಲ್ಲ ಎಂದು ಹೇಳಿದ್ದಾರೆ.**

ಸಹಜ ಹೆರಿಗೆ ಅಥವಾ ಸಿಸೇರಿಯನ್ ವೈಯಕ್ತಿಕ ಆಯ್ಕೆ ಆಗಿರುತ್ತದೆ ಎಂದು ಸಚಿವರು ಹೇಳಿದ್ದಾರೆ. ಇಲಾಖೆ ನೇರವಾಗಿ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ. ಉದ್ದೇಶಪೂರ್ವಕವಾಗಿ ಸಿಸೇರಿಯನ್ ಮಾಡುತ್ತಿದ್ದಾರೆ ಎಂಬುದು ತಿಳಿದರೆ ಮಾತ್ರ ಕ್ರಮ ಕೈಗೊಳ್ಳಬಹುದು. ವೈದ್ಯಕೀಯ ಮತ್ತು ಸಾಮಾಜಿಕ ಜಾಗೃತಿಯನ್ನು ಗರ್ಭಿಣಿಯರು ಮತ್ತು ಅವರ ಕುಟುಂಬಸ್ಥರಿಗೆ ಮೂಡಿಸಬೇಕಾಗಿದೆ ಎಂದು ದಿನೇಶ್ ಗುಂಡೂರಾವ್ ಹೇಳಿದ್ದಾರೆ. ವಿಕ್ಟೋರಿಯಾ, ಬೌರಿಂಗ್ ಮತ್ತು ಕೆ ಸಿ ಜನರಲ್ ಮುಂತಾದ ಆಸ್ಪತ್ರೆಗಳಲ್ಲಿ ರೋಗಿಗಳ ಒತ್ತಡದಿಂದ ದೀರ್ಘ ಕಾಯುವಿಕೆಯ ಸಮಸ್ಯೆ, ವೈದ್ಯರು ನರ್ಸ್ ಮತ್ತು ಪ್ಯಾರಾಮೆಡಿಕಲ್ ಸಿಬ್ಬಂದಿಯ ಕೊರತೆ ಸರ್ಕಾರದ ಗಮನದಲ್ಲಿದೆಯೇ ಎಂಬ ಪರಿಷತ್ ಸದಸ್ಯರಾದ ಗೋಪಿನಾಥ್ ಅವರ ಪ್ರಶ್ನೆಗೂ ಸಚಿವರು ಉತ್ತರವನ್ನು ನೀಡಿದ್ದಾರೆ.

**ಈ ದಿನದ ದರ** ಪೆಟ್ರೋಲ್: 103.62 ₹/L | ಡೀಸೆಲ್ : 91.67 ₹/L | ಬಂಗಾರ: ₹13,042/Gram24ct ₹11,955/Gram22ct | ಬೆಳ್ಳಿ: ₹189.00/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ**
**ರಾಮೋಹಳ್ಳಿ**

## ಬಸವ ಭಕ್ತರ ಪದಬಳಕೆ

ಕಳೆದ ಆರು ವರ್ಷಗಳಿಂದ ಸಿದ್ಧಸೂಕ್ತಿ ಪ್ರಕಟಗೊಳ್ಳುತ್ತಿದೆ. ಓದುಗರ ಮಧುರ ಪ್ರತಿಕ್ರಿಯೆ. ಲಿಂಗಾಯತ ಪ್ರತ್ಯೇಕಧರ್ಮವಾದದ ಹಿನ್ನೆಲೆಯಲ್ಲಿ ಕಳೆದ ತಿಂಗಳಿಂದ ಬರೆದ ಸಾಂದರ್ಭಿಕ ಸೂಕ್ತಿಗೆ ಫೇಸ್ ಬುಕ್ ಗುಂಪುಗಳಲ್ಲಿ ಬಂದ ಪ್ರತಿಕ್ರಿಯೆ ಅಮಧುರ. ಬಸವ ಲಿಂಗಾಯತಪರ ಗುಂಪುಗಳ ಕೆಲ ಸದಸ್ಯರಿಂದ ವ್ಯಕ್ತವಾದ ಕೆಲ ಪ್ರತಿಕ್ರಿಯೆ ನಂಬಲಾಗುತ್ತಿಲ್ಲ. ಬಸವ ಭಕ್ತರೆನಿಸಿಕೊಂಡವರಿಂದ ಕಾಷಾಯಧಾರಿಗೆ ಶಿಕ್ಷಾರ್ಹ ಅಸಾಂವಿಧಾನಿಕ ಪದ ಬಳಕೆ! ಬಾಯಿ ಮುಚ್ಚಿಸುವ ಬೆದರಿಕೆ! ಇಂಥ ವರ್ತನೆಯೇ ಇರಬೇಕು ಬಸವತಾಲಿಬಾನಿ ಪದಪ್ರಯೋಗ ಕಾರಣ. ಸಿದ್ಧಸೂಕ್ತಿ ಪೂರ್ವಾಗ್ರಹ ಪ್ರಚೋದನೆ ರಹಿತ. ಆದಾಗ್ಯೂ ಇಂಥ ಪ್ರತಿಕ್ರಿಯೆ, ಸಮರ್ಥಿಸಲಾಗದ್ದಕ್ಕೆ. ಕೈಲಾಗದವ ಮೈ ಪರಚಿಕೊಂಡ! ಲಾಂಛನಕ್ಕೆ ಶರಣೆಂಬೆ ಎಂಬಂಥ ಬಸವಾದಿ ಶರಣರ ಮಾತು ಮರೆತವೇ? ಅಥವಾ ಇಂಥ ಖಾತೆಗಳೇ ನಕಲಿಯೇ? ಅಂಗುಲಿಮಾಲಾ ಆಡಿದ ಬೈಗುಳನ್ನು ಬುದ್ಧ ಸ್ವೀಕರಿಸದಂತೆ ನಾವೂ ಸ್ವೀಕರಿಸೆವು. ಎಸೆದ ಚೆಂಡು ಎಸೆದವನಿಗೇ. ಬಸವಣ್ಣನ ಈ ವಚನ ನೆನೆವೆ:
ಹೊಯಿದವರೆನ್ನ ಹೊರೆದವರೆಂಬೆ
ಬಯಿದವರೆನ್ನ ಬಂಧುಗಳೆಂಬೆ ನಿಂದಿಸಿದವರೆನ್ನ ತಂದೆತಾಯಿಗಳೆಂಬೆ
ಆಳಿಗೊಂಡವರೆನ್ನ ಆಳ್ದವರೆಂಬೆ ಜರಿದವರೆನ್ನ ಜನ್ಮಬಂಧುಗಳೆಂಬೆ...

## ಮಾರ್ಗಶಿರ ಮಾಸ ಮಹಾತ್ಮೆ ಪ್ರವಚನ

• ಉದಯವಾಹಿನಿ, ಬೆಂಗಳೂರು



ಶ್ರೀ ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ಡಿಸೆಂಬರ್ 9 ರಿಂದ 14ರ ವರೆಗೆ ಪ್ರತಿದಿನ ಸಂಜೆ 7-00ಕ್ಕೆ ಮ॥ಶಾ॥ಸಂ॥ ಶ್ರೀ ವರದಾಚಾರ್ ಚಿಟಗುಪ್ಪ ಇವರಿಂದ ಮಾರ್ಗಶಿರ ಮಾಸ ಮಹಾತ್ಮೆ ವಿಷಯವಾಗಿ ಧಾರ್ಮಿಕ ಪ್ರವಚನ ಏರ್ಪಡಿಸಿದೆ. ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರಂ, ಬೆಂಗಳೂರು-560003

## ಕಬ್ಬನ್ ಪಾರ್ಕ್ ಹೂಗಳ ಹಬ್ಬಕ್ಕೆ ತೆರೆ: ರೂ. 12.50 ಲಕ್ಷ ಸಂಗ್ರಹ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆಯ ಅಂಗವಾಗಿ ತೋಟಗಾರಿಕೆ ಇಲಾಖೆ ಮೊದಲ ಬಾರಿಗೆ ಕಬ್ಬನ್ ಉದ್ಯಾನದಲ್ಲಿ ಹಮ್ಮಿಕೊಂಡಿದ್ದ ಹೂಗಳ ಹಬ್ಬಕ್ಕೆ ಭಾನುವಾರ ತೆರೆಬಿದ್ದಿದೆ. ಕೊನೇ ದಿನ ಹೂಗಳನ್ನು ಕಣ್ತುಂಬಿಕೊಳ್ಳಲು 1.25 ಲಕ್ಷಕ್ಕೂ ಅಧಿಕ ಜನರು ಭಾಗವಹಿಸಿದ್ದರು. ಹೂಗಳ ಹಬ್ಬವು ಕಬ್ಬನ್ ಉದ್ಯಾನದಲ್ಲಿ ಕಲರವ ಸೃಷ್ಟಿಯಾಗಿತ್ತು. ಸಾಂಸ್ಕೃತಿಕ ಕಲೆಗಳು, ಶಾಸ್ತ್ರೀಯ ನೃತ್ಯ ಪ್ರದರ್ಶನ, ಶಾಸ್ತ್ರೀಯ ಸಂಗೀತ ಕಛೇರಿಗಳು, ಜಾನಪದ ಹಾಡು, ನೃತ್ಯ, ಡೊಳ್ಳು ಕುಣಿತ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು 11 ದಿನಗಳ ಪುಷ್ಪ ಪ್ರದರ್ಶನಕ್ಕೆ ಮೆರುಗು ನೀಡಿದ್ದವು. ಹೂಗಳ ಹಬ್ಬದ ಸಮಾರೋಪ ಸಮಾರಂಭವನ್ನು ಮಾಡಲಾಗಿತ್ತು. ಭಾನುವಾರ ಸಂಗೀತ ಮತ್ತು ನೃತ್ಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.
ರಜಾ ದಿನ ಆಗಿರುವುದರಿಂದ ಬೆಳಿಗ್ಗೆಯೇ ಮಕ್ಕಳು, ಹಿರಿಯರು ಎನ್ನದೇ ಜನರು ತಂಡ ತಂಡವಾಗಿ ಬರತೊಡಗಿದರು. ಸಂಜೆಯ ಹೊತ್ತಿಗೆ ಕಾಲು ಇಡಲು ಜಾಗ ಇಲ್ಲದಂತಾಗಿತ್ತು. ಹೂವುಗಳಲ್ಲಿ ಅರಳಿದ ಹಂಪಿಯ ಕಲ್ಲಿನ ರಥ, ಹೂವು, ಹಾಗಲಕಾಯಿ ಹಾಗೂ ಕ್ಯಾಪ್ಸಿಕಮ್‌ನಲ್ಲಿ ರಚಿಸಿದ ಆನೆಯ ಕಲಾಕೃತಿಗಳು, ಹಳದಿ ಮತ್ತು ಕೆಂಪು ಬಣ್ಣದ ಹೂವುಗಳಲ್ಲಿ ಮೂಡಿಬಂದಿರುವ ಕರ್ನಾಟಕದ ನಕ್ಷೆಯ ಮಾದರಿ, ಅಲ್ಲಲ್ಲಿ ಜೋಡಿಸಿ ಇಟ್ಟಿರುವ ಹೂವಿನ ಕುಂಡಗಳನ್ನು ನೋಡಿ ಮಕ್ಕಳು, ಹಿರಿಯರು ಸಂಭ್ರಮಿಸಿದರು. ಹೂವುಗಳಲ್ಲೇ ಮೂಡಿದ ಜಿಂಕೆ, ಅನಾನಸ್, ಸೇಬು ಹಣ್ಣು, ಸೂರ್ಯಕಾಂತಿ ಹೂವಿನ ದೊಡ್ಡ ಮಾದರಿಗಳ ಮುಂದೆ ನಿಂತು ಫೋಟೊ ತೆಗೆಸಿಕೊಂಡು, ಸೆಲ್ಫಿ ತೆಗೆದುಕೊಂಡು ಖುಷಿಪಟ್ಟರು.

## ಭಾರತ ದೇಶಕ್ಕೆ ಟೀಕೆಗೆ ಮುಕ್ತವಾದ ಸರ್ಕಾರ ಬೇಕು: ರಾಜ್ಯಪಾಲ ಗೋಪಾಲಕೃಷ್ಣ ಗಾಂಧಿ

• ಉದಯವಾಹಿನಿ, ಬೆಂಗಳೂರು

ಭಾರತ ದೇಶಕ್ಕೆ ಟೀಕೆಗೆ ಮುಕ್ತವಾದ ಸರ್ಕಾರ ಬೇಕು ಎಂದು ಮಾಜಿ ರಾಜ್ಯಪಾಲ ಗೋಪಾಲಕೃಷ್ಣ ಗಾಂಧಿ ಹೇಳಿದ್ದಾರೆ. ಪಶ್ಚಿಮ ಬಂಗಾಳದ ಮಾಜಿ ರಾಜ್ಯಪಾಲ ಮತ್ತು ಖ್ಯಾತ ಬರಹಗಾರ ಗೋಪಾಲಕೃಷ್ಣ ಗಾಂಧಿ, ಸರ್ಕಾರವು ಟೀಕೆಗೆ ಮುಕ್ತವಾಗಿರಬೇಕು ಮತ್ತು ಅದೇ ಸಮಯದಲ್ಲಿ, ವಿಮರ್ಶಕರು ಸ್ವಯಂ ವಿಮರ್ಶೆಗೆ ಮುಕ್ತರಾಗಿರಬೇಕು ಎಂದು ಹೇಳಿದರು. ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ಮಾತನಾಡಿದ ಅವರು, ವಿಮರ್ಶಕರು ತಮ್ಮನ್ನು ಮೆಸ್ಸೀಯರು ಎಂದು ಭಾವಿಸುವಂತೆ ಮಾಡುವ ದುರಹಂಕಾರವನ್ನು ಹೊಂದಿದ್ದಾರೆ. ಭಾರತವು ಅಲ್ಪಸಂಖ್ಯಾತರನ್ನು ಹೊಂದಿರುವ ಬಹುಸಂಖ್ಯಾತ ದೇಶವಾಗಿದೆ ಎಂದರು. ಇದು ಜನಾಂಗೀಯತೆ ಅಥವಾ ಧರ್ಮದ ವಿಷಯದಲ್ಲಿ ಅಲ್ಲ, ಆದರೆ ಜೀವನಶೈಲಿ ಮತ್ತು ನಂಬಿಕೆಗಳ ವಿಷಯದಲ್ಲಿ. ನಾವು ಅದನ್ನು ನೆನಪಿಸಿಕೊಂಡರೆ, ಪ್ರಜಾಪ್ರಭುತ್ವವನ್ನು ಸರ್ವಾಧಿಕಾರ ಅಥವಾ ಒಲಿಗಾರ್ಕಿಯಿಂದ ನಾವು ಉಳಿಸಬಹುದು ಎಂದು ಹೇಳಿದರು. ಇದೇ ವೇಳೆ ಆಮ್ ಆದ್ಮಿ ಪಕ್ಷದಲ್ಲಿನ ತಮ್ಮ ಅನುಭವದ ಬಗ್ಗೆ ಮಾತನಾಡಿದ ಅವರು, ಆಮ್ ಆದ್ಮಿ ಪಕ್ಷವು ನಮ್ಮ ಪ್ರಜಾಪ್ರಭುತ್ವದ ಅತ್ಯಂತ ನೋವಿನ ನಿರಾಶೆಗಳಲ್ಲಿ ಒಂದಾಗಿದೆ. ಭ್ರಷ್ಟಾಚಾರದ ಬಗ್ಗೆ ಸಾರ್ವಜನಿಕ ಅಸಹ್ಯವನ್ನು ವ್ಯಕ್ತಪಡಿಸಲು ಪಕ್ಷವು ತನ್ನನ್ನು ತಾನು ತೊಡಗಿಸಿಕೊಂಡಿತ್ತು, ಆದರೆ ಪಕ್ಷವು ಸಮಾಜದೊಂದಿಗೆ ನೇರವಾಗಿ ಮಾತನಾಡಲಿಲ್ಲ ಎಂದರು. ಇಬ್ಬರು ಅಧ್ಯಕ್ಷರೊಂದಿಗೆ ಕೆಲಸ ಮಾಡಿದ ಅನುಭವದ ಬಗ್ಗೆ ಮಾತನಾಡುತ್ತಾ, ಮಾಜಿ ಅಧ್ಯಕ್ಷ ನಾರಾಯಣನ್ ಅವರು ಅಧ್ಯಕ್ಷರಿಗೆ ಯಾವುದೇ ಅಧಿಕಾರವಿಲ್ಲ, ಆದರೆ ಹೆಚ್ಚಿನ ಪ್ರಭಾವವನ್ನು ಹೊಂದಿದ್ದಾರೆ ಎಂದು ಹೇಳಿದರು. ಈ ಪ್ರಭಾವವು ಸರಿಯಾಗಿದ್ದಾಗ ಸಾರ್ವಜನಿಕ ಅಭಿಪ್ರಾಯಕ್ಕೆ ಅನುಗುಣವಾಗಿರಬೇಕು ಎಂದು ಹೇಳಿದರು.

## 74 ವೈದ್ಯಕೀಯ ಸೀಟು ಉಳಿಕೆ, ದಂತ ವೈದ್ಯಕೀಯ ಸೀಟು ಖಾಲಿ: ಕೆಇಎ

• ಉದಯವಾಹಿನಿ, ಬೆಂಗಳೂರು

ಹೈಕೋರ್ಟ್ ಆದೇಶದ ಪ್ರಕಾರ ಯುಜಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ನ 3ನೇ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ. ಸೀಟು ಹಂಚಿಕೆಯಾದವರು ಡಿ.10ರೊಳಗೆ ಶುಲ್ಕ ಪಾವತಿಸಬೇಕು (ಈಗಾಗಲೇ ಪಾವತಿಸಿರುವ ಶುಲ್ಕವನ್ನು ಕಡಿತಗೊಳಿಸುವ ಮೂಲಕ). ಸೀಟು ಖಾತರಿ ಚೀಟಿ ಡೌನ್‌ಲೋಡ್ ಮಾಡಿಕೊಂಡು, ಡಿ.11ರೊಳಗೆ ಕಾಲೇಜುಗಳಲ್ಲಿ ವರದಿ ಮಾಡಿಕೊಳ್ಳಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ. ಒಟ್ಟು 1,080 ಮಂದಿಗೆ ವೈದ್ಯಕೀಯ ಹಾಗೂ 266 ಮಂದಿಗೆ ದಂತ ವೈದ್ಯಕೀಯ ಸೀಟುಗಳನ್ನು ಈ ಸುತ್ತಿನಲ್ಲಿ ಹಂಚಿಕೆ ಮಾಡಲಾಗಿದೆ. ಮ್ಯಾನೇಜ್ಮೆಂಟ್ ಕೋಟಾದ ಇನ್ನೂ 74 ವೈದ್ಯಕೀಯ ಸೀಟು ಈ ಸುತ್ತಿನಲ್ಲಿ ಉಳಿದಿವೆ. ದಂತ ವೈದ್ಯಕೀಯ ಸೀಟು ಎಲ್ಲವೂ ಹಂಚಿಕೆಯಾಗಿದ್ದು, ಒಂದೂ ಖಾಲಿ ಇಲ್ಲ ಎಂದು ವಿವರಿಸಿದ್ದಾರೆ.

# ಲೋಕ ಕಲ್ಯಾಣಾರ್ಥಕ್ಕಾಗಿ ಡಿ.19, 20 ಮತ್ತು 21ರಂದು ಸೇವಾ ಸಂಕಲ್ಪ: ಅಭಯಸೇವಾ ಫೌಂಡೇಷನ್

• ಉದಯವಾಹಿನಿ, ಬೆಂಗಳೂರು

ಅಭಯ ಸೇವಾ ಫೌಂಡೇಷನ್ ವತಿಯಿಂದ ರಾಜಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಶ್ರೀರಾಮಮಂದಿರ ಆಟದ ಮೈದಾನದಲ್ಲಿ ಡಿಸೆಂಬರ್ 19, 20ಮತ್ತು 21ರಂದು ಧಾರ್ಮಿಕ, ಸಾಮಾಜಿಕ ಸಾಂಸ್ಕೃತಿಕ ವಾರ್ಷಿಕೋತ್ಸವ ಸಮಾರಂಭದ ಪೋಸ್ಟರ್ ಬಿಡುಗಡೆ ಸಮಾರಂಭ. ಅಭಯ ಸೇವಾ ಫೌಂಡೇಷನ್ ಅಧ್ಯಕ್ಷರಾದ ಎಂ.ಬಿ.ಉಮೇಶ್ ಶೆಟ್ಟಿರವರು ಮತ್ತು ವಸಂತ್ ಗಿಳಿಯಾರ್, ಅಜಿತ್ ಶೆಟ್ಟಿ, ರಾಘವೇಂದ್ರಶೆಟ್ಟಿ, ಪ್ರವೀಣ್ ಸಾಕ್ಷಿ ಮಠ್ ರವರು ಪೋಸ್ಟರ್ ಬಿಡುಗಡೆ ಮಾಡಿದರು.

ಇದೇ ಸಂದರ್ಭದಲ್ಲಿ ಎಂ.ಬಿ.ಉಮೇಶ್ ಶೆಟ್ಟಿರವರು ಮಾತನಾಡಿ ರಾಜಾಜಿನಗರ, ಶ್ರೀರಾಮಮಂದಿರ ಆಟದ ಮೈದಾನದಲ್ಲಿ ನಾಡಿನ ಖ್ಯಾತ ಉತ್ತಮ ಶಿಕ್ಷಕಿ ಎಂಬ ಕೀರ್ತಿಗೆ ಪಾತ್ರರಾದ ಸುಶೀಲಮ್ಮ ವೇದಿಕೆಯಲ್ಲಿ ಡಿಸೆಂಬರ್ 19,20,21ರಂದು ಸೇವಾ ಸಂಕಲ್ಪ ಕಾರ್ಯ ಹಮ್ಮಿಕೊಳ್ಳಲಾಗಿದೆ. ಸಮಾಜ ಏನು ಕೊಟ್ಟಿದೇ ಅನ್ನುವುದಕ್ಕಿಂತ ಸಮಾಜಕ್ಕೆ ನಮ್ಮ ಕೊಡುಗೆ ಏನು ಎಂಬ ಆದರ್ಶ ಚಿಂತನೆ ಮಾಡಿ ಆರ್ಥಿಕವಾಗಿ




ಉದಯವಾಹಿನಿ ಚಿತ್ರ

ಹಿಂದುಳಿದವರಿಗೆ ಸಹಾಯಹಸ್ತ ಮತ್ತು ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. 19ನೇ ತಾರೀಖು ಸಂಜೆ 5ಗಂಟೆಗೆ ಪೂಜಾವಿಧಿ ಕಂಕಣಧಾರಣೆ ಹಾಗೂ ಡಿಸೆಂಬರ್ 20ರಂದು ಮಧ್ಯಾಹ್ನ 2ಗಂಟೆಗೆ ನವದುರ್ಗಾ ದೀಪ ನಮಸ್ಕಾರ, 108ಕಳಸಪೂಜೆ ಸಂಕೀರ್ತನೆ,ಭರತನಾಟ್ಯ ಕಾರ್ಯಕ್ರಮ. ನವಶಕ್ತಿ ನೃತ್ಯ ವೈಭವ ಕಾರ್ಯಕ್ರಮ ಡಿಸೆಂಬರ್ 21ರಂದು ಬೆಳಗ್ಗೆ 7ಗಂಟೆಗೆ ಗಣಪತಿಪೂಜೆ, ನೃತ್ಯ ಸ್ಪರ್ಧೆ ಹಾಗೂ ಹುಲಿಹೆಜ್ಜೆ ಕುಣಿತ,ಬೆಳಗ್ಗೆ 11ಗಂಟೆಗೆ ಸೇವಾ ಸಂಕಲ್ಪ ಮೆರವಣಿಗೆ. ಶ್ರೀಗಳ ಪಾದಪೂಜೆ ಆಶೀರ್ವಚನ ಕಾರ್ಯಕ್ರಮ. ಮಧ್ಯಾಹ್ನ 1ಗಂಟೆಗೆ ಜಾನಪದ ಜಾತ್ರೆ, ವೀರಗಾಸೆ, ಡೊಳ್ಳುಕುಣಿತ, ಕಂಸಾಳೆ. 3ಗಂಟೆಗೆ ಸವಿತಕ್ಕನ ಅಳ್ಳಿ ಬ್ಯಾಂಡ್ ತಂಡದವರಿಂದ ಜಾನಪದ ಗೀತೆ ಕಾರ್ಯಕ್ರಮ. ಸಂಜೆ 5ಗಂಟೆಗೆ ಅದ್ದೂರಿ ಪಂಚಿನ ಮೆರವಣಿಗೆ. 6-30ಕ್ಕೆ ಸಮಾರೋಪ ಕಾರ್ಯಕ್ರಮ 8ಗಂಟೆಗೆ ಧರ್ಮಸಂಸ್ಥಾಪಕನಾರ್ತಾಯ ಸಂಭವಾಮಿ ಯುಗೇ, ಯುಗೇ ನೃತ್ಯರೂಪಕ, 8-30ಬೀಟ್ ಗುರುಸ್ ತಂಡದವರಿಂದ ಸಂಗೀತ ರಸ ಸಂಜೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಮೂರು ದಿನಗಳ ಕಾಲ ಅನ್ನ ಸಂತರ್ಪಣೆ ಕಾರ್ಯಕ್ರಮ ನಿರಂತರವಾಗಿ ನಡೆಯಲಿದೆ.

ಸಮಾರಂಭದಲ್ಲಿ ನಾಡಿನ ಹೆಸರಾಂತ ಸ್ವಾಮೀಜಿಗಳು ಚಿಂತಕರು, ಬಿಜೆಪಿ ರಾಜ್ಯಾಧ್ಯಕ್ಷರಾದ ಬಿ.ವೈ.ವಿಜಯೇಂದ್ರರವರು, ಕೇಂದ್ರ ಸಚಿವರಾದ ವಿ.ಸೋಮಣ್ಣ, ಮಾಜಿ ಸಚಿವರು, ಶಾಸಕರಾದ ಎಸ್.ಸುರೇಶ್ ಕುಮಾರ್ ಹಾಗೂ ಲೋಕಸಭಾ ಸದಸ್ಯರಾದ ಪಿ.ಸಿ.ಮೋಹನ್ ರವರು ಗಣ್ಯ ಮಹನೀಯರುಗಳು ಭಾಗವಹಿಸಲಿದ್ದಾರೆ.ಮೂರು ದಿನಗಳ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಸಡಗರ ಸಂಭ್ರಮಾಚರಣೆಯಲ್ಲಿ ಸಾರ್ವಜನಿಕರು ಆಗಮಿಸಬೇಕಾಗಿ ವಿನಂತಿ ಎಂದು ಹೇಳಿದರು.

# ಬೆಟ್ಟಹಲಸೂರು- ರಾಜಾನುಕುಂಟೆ ರೈಲ್ವೆ ಮಾರ್ಗಕ್ಕೆ ವಿಶೇಷ ಸ್ಥಾನಮಾನ

## ಕೇಂದ್ರ ರೈಲ್ವೆ ಇಲಾಖೆಯಿಂದ ಘೋಷಣೆ - ಭೂಸ್ವಾಧೀನಕ್ಕೆ ಸಿಕ್ಕಿತು ಮತ್ತಷ್ಟು ವೇಗ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಉತ್ತರ ಕ್ಷೇತ್ರದಲ್ಲಿರುವ ಬೆಟ್ಟಹಲಸೂರು - ರಾಜಾನುಕುಂಟೆ ನಡುವಿನ ಉದ್ದೇಶಿತ 6.1 ಕಿ.ಮೀ. ದೂರದ ಹೊಸ ರೈಲು ಮಾರ್ಗ ಯೋಜನೆಯನ್ನು ವಿಶೇಷ ರೈಲು ಯೋಜನೆ ಎಂದು ಕೇಂದ್ರ ರೈಲ್ವೆ ಇಲಾಖೆ ಘೋಷಿಸಿದೆ. ಇದರಿಂದಾಗಿ, ಈ ರೈಲು ಯೋಜನೆಯ ಕಾಮಗಾರಿಗೆ ವೇಗ ಸಿಕ್ಕಿದ್ದು, ಭೂಸ್ವಾಧೀನಕ್ಕಾಗಿ ನೋಟಿಫಿಕೇಷನ್ ಜಾರಿಗೊಳಿಸಲಾಗಿದೆ. ಈ ರೈಲ್ವೆ ಯೋಜನೆಗಾಗಿ ಈಗಾಗಲೇ ಜಾರಿಗೊಳಿಸಲಾಗಿರುವ ಭೂಸ್ವಾಧೀನ ಹಾಗೂ ಮತ್ತಿತರ ಕೆಲಸಗಳನ್ನು ತ್ವರಿತವಾಗಿ ಪೂರ್ಣಗೊಳ್ಳಲಿವೆ.

ಸದ್ಯದ ಮಾಹಿತಿಯ ಪ್ರಕಾರ, ಬೆಟ್ಟಹಲಸೂರು ಹಾಗೂ ರಾಜಾನುಕುಂಟೆ ಹಳ್ಳಿಗಳ ಸರ್ವೆ ನಂಬರ್ ಗಳನ್ನು ನೋಟಿಫೈ ಮಾಡಲಾಗಿದ್ದು ಯೋಜನೆಗೆ ಭೂಸ್ವಾಧೀನಾ ಕೆಲಸ ಕೈಗೆತ್ತಿಕೊಳ್ಳಲಾಗಿದೆ. ಸದ್ಯದಲ್ಲೇ ಈ ಯೋಜನೆಗೆ ಸಂಬಂಧಿಸಿದಂತೆ ಇನ್ನಿತರ ಸರ್ವೆ ನಂಬರ್ ಗಳ ಭೂಮಿಯನ್ನು ನೋಟಿಫೈ ಮಾಡಲಾಗುತ್ತದೆ. ಇದೀಗ ಈ ಯೋಜನೆ ವಿಶೇಷ ಯೋಜನೆ ಎಂದು ಘೋಷಿಸಲ್ಪಟ್ಟಿರುವ ಹಿನ್ನೆಲೆಯಲ್ಲಿ ಭೂಸ್ವಾಧೀನ ಪ್ರಕ್ರಿಯೆಗಳು ವೇಗವಾಗಿ ನಡೆಯಲಿವೆ.

**ಏನಿದು ಯೋಜನೆ:** ಈ ಮಾರ್ಗವು ಈಶಾನ್ಯ ಬೆಂಗಳೂರಿನ ಬೆಟ್ಟಹಲಸೂರು ಮತ್ತು ರಾಜನುಕುಂಟೆ ನಡುವೆ ಸುಮಾರು 6.14 ಕಿ.ಮೀ. ಉದ್ದದ ಹೊಸ ಸಿಂಗಲ್-ಟ್ರ್ಯಾಕ್ ಕಾರ್ಡ್/ಬೈಪಾಸ್ ಆಗಿದ್ದು, ಯಲಹಂಕದ ದಟ್ಟಣೆಯನ್ನು ಕಡಿಮೆ ಮಾಡಲು ಮತ್ತು ಸರಕು ಸಾಗಣೆ ಮತ್ತು ಭವಿಷ್ಯದ ಉಪನಗರ ಸೇವೆಗಳ ಚಲನೆಯನ್ನು ಸುಲಭಗೊಳಿಸಲು ಉದ್ದೇಶಿಸಲಾಗಿದೆ.




ಉದಯವಾಹಿನಿ ಚಿತ್ರ

ದೊಡ್ಡಬಳ್ಳಾಪುರ ಕಡೆಯಿಂದ ಚಿಕ್ಕಬಳ್ಳಾಪುರ/ದೇವನಹಳ್ಳಿ-ಕೋಲಾರ ಕಡೆಗೆ ಹೋಗುವ ರೈಲುಗಳು (ಮತ್ತು ಪ್ರತಿಯಾಗಿ) ಯಲಹಂಕ ಜಂಕ್ಷನ್ ಅನ್ನು ತಪ್ಪಿಸುವಂತೆ, ಪ್ರಮುಖ ಬೆಂಗಳೂರು ಜಂಕ್ಷನ್‌ಗಳಲ್ಲಿ ಸಾಮರ್ಥ್ಯವನ್ನು ಸುಧಾರಿಸಲು ಮತ್ತು ಭವಿಷ್ಯದ ವಿಮಾನ ನಿಲ್ದಾಣ-ಸಂಪರ್ಕ ಸೇವೆಗಳಿಗೆ ಸಹಾಯ ಮಾಡಲು ಇದನ್ನು ಯೋಜಿಸಲಾಗಿದೆ.


**SMVT, ಕೆಆರ್ ಪುರದಿಂದ ರೈಲು ಯಾಕೆ ಕಲ್ಯಾಣ ಕರ್ನಾಟಕ ಪ್ರಯಾಣಿಕರ ಪ್ರಶ್ನೆ:** ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಬೆಂಗಳೂರಿನಿಂದ ರೈಲುಗಳ ಸಂಚಾರದಲ್ಲಿ ತಾರತಮ್ಯ ಎದುರಾಗಿದೆ. ಬೆಂಗಳೂರು ಸಿಟಿ ರೈಲು ನಿಲ್ದಾಣದ ಬದಲಿಗೆ ಹೆಚ್ಚಿನ ರೈಲುಗಳು ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್, ಯಶವಂತಪುರ ಅಥವಾ ಕೃಷ್ಣರಾಜಪುರಂ ನಿಲ್ದಾಣಗಳಿಂದ ಹೊರಡುತ್ತಿವೆ. ಈ ಬದಲಾವಣೆಯ ಬಗ್ಗೆ ಪ್ರಯಾಣಿಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

**ಯಶವಂತಪುರ ಮತ್ತು ವಿಜಯಪುರ ನಡುವಿನ ವಿಶೇಷ ರೈಲು ಡಿಸೆಂಬರ್ 8 ರಿಂದ ಖಾಯಂ ಆಗಿ ಸಂಚರಿಸಲಿದ್ದು, ಟಿಕೆಟ್ ದರಗಳಲ್ಲಿ ಶೇಕಡಾ 25 ರಿಂದ 30 ರಷ್ಟು ಇಳಿಕೆಯಾಗಿದೆ. ಇದರಿಂದಾಗಿ ಉತ್ತರ ಕರ್ನಾಟಕದ ಪ್ರಯಾಣಿಕರಿಗೆ ಅನುಕೂಲವಾಗಿದ್ದು, ವಿಶೇಷವಾಗಿ ಸ್ಲೀಪರ್ ಟಿಕೆಟ್ ದರಗಳಲ್ಲಿ ಭಾರೀ ಬದಲಾವಣೆ ಕಂಡುಬಂದಿದೆ. ರೈಲಿನ ಸಂಖ್ಯೆ ಬದಲಾಗಲಿದ್ದರೂ, ಅದರ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ತಿಳಿದುಬಂದಿದೆ.**

**ಎರಡು ಗ್ರಾಮಗಳ ಭೂಸ್ವಾಧೀನಕ್ಕೆ ಆದೇಶ**

### ಯೋಜನೆಯ ಅಂದಾಜು ವೆಚ್ಚ

**ಅಧಿಕೃತ ಮಾಹಿತಿಯಲ್ಲಿ ಯೋಜನಾ ವೆಚ್ಚ ಸುಮಾರು ರೂ.248 ಕೋಟಿ ಎಂದು ಸೂಚಿಸಲಾಗಿದೆ, ಆದರೆ ಅಧಿಕಾರಿಗಳು ಇನ್ನೂ ಪೂರ್ಣಗೊಳ್ಳುವ ಗಡುವನ್ನು ಸಾರ್ವಜನಿಕವಾಗಿ ನಿಗದಿಪಡಿಸಿಲ್ಲ; ಸಮಯಾವಧಿಯು ಭೂಸ್ವಾಧೀನ ಮತ್ತು ಅನುಮೋದನೆಗಳು ಎಷ್ಟು ಬೇಗನೆ ಪ್ರಗತಿಯಾಗುತ್ತವೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ.**




## ಕನ್ನಡ ರಾಜ್ಯೋತ್ಸವ ಪ್ರಯುಕ್ತ ಧ್ವಜಾರೋಹಣ

• ಉದಯವಾಹಿನಿ, ಕೆ.ಆರ್.ಪುರ

ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆಗೆ ಯುವ ಸಮುದಾಯ ಮುಂದಾಗಬೇಕೆಂದು ದಕ್ಷಿಣ ವಲಯದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವಿ. ಗಣೇಶ್ ತಿಳಿಸಿದರು. ಮಹದೇವಪರ ಕ್ಷೇತ್ರದ ಬೆಳ್ಳಂದೂರು ಸಮೀಪದ ಯಮಲೂರು ಗ್ರಾಮದಲ್ಲಿ ಮಿಡಿತ ಫೌಂಡೇಶನ್ ಆಯೋಜಿಸಿದ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಧ್ವಜಾರೋಹಣ ನೆರವೇರಿಸಿ ಕಾರ್ಯಕ್ರಮದ ಉದ್ಘಾಟನೆ ಮಾಡಿ ಮತನಾಡಿದರು.

ಸಾಲುಮರದ ತಿಮ್ಮಕ್ಕ ಹಾಗೂ ಅಂಬೇಡ್ಕರ್ ಅವರ ನೆನಪಿನಾರ್ಥ ಬಹಳಷ್ಟು ಸಮಾಜ ಸೇವೆ, ಜನಸೇವೆ ಕಾರ್ಯಕ್ರಮಗಳನ್ನು ಮಾಡುತ್ತಿರುವ ಮಿಡಿತ ಸಂಸ್ಥೆಯಂತೆ ಪ್ರತಿಯೊಬ್ಬರು ಪರಿಸರ ಮತ್ತು ವನ್ಯಜೀವಿ ಬಗ್ಗೆ ಕಾಳಜಿ ವಹಿಸಿ ಸಮಾಜ ಸುಧಾರಣೆ ಮಾಡಿ ಎಂದರು.

ಡಾ. ರಾಜ್ ಕುಮಾರ್ ಅವರ ಗಂಧದ ಗುಡಿ ಸಿನಿಮಾ ನೋಡಿ ಬಹಳಷ್ಟುಜನ ಅರಣ್ಯ ಸೇರಿ ಅರಣ್ಯ ಉಳಿವಿಗೆ ಶ್ರಮಿಸುತ್ತಿದ್ದಾರೆ. ರಾಜ್ ಕುಮಾರ್ ಅವರಿಂದ ಬಹಳಷ್ಟು ಕನ್ನಡ ಹಾಗೂ ಪರಿಸರ ಉಳಿದಿದೆ ಎಂದು ಹೇಳಿದರು. ಇದೇ ವೇಳೆ ಸ್ಟೈಲ್ ಆಂಟ್ ಟ್ರೆಂಡ್ಜ್ ತೃಪ್ತಿ ರವಿ ರೆಡ್ಡಿ



ಉದಯವಾಹಿನಿ ಚಿತ್ರ

ನೇತೃತ್ವದಲ್ಲಿ ಅಂಗನವಾಡಿ, ಶಾಲಾ ಶಿಕ್ಷಕರು, ಪೌರ ಕಾರ್ಮಿಕರು, ಆಶಾ ಕಾರ್ಯಕರ್ತೆಯರಿಗೆ, ಮಹಿಳಾ ಸಂಘದ ಕಾರ್ಯಕರ್ತರಿಗೆ ಬಾಗಿನವಾಗಿ ಸೀರೆಗಳನ್ನು ವಿತರಣೆ ಮಾಡಿದರು. ಕಾರ್ಯಕ್ರಮದಲ್ಲಿ ಮಾಜಿ ಪಾಲಿಕೆ ಸದಸ್ಯ ಎನ್. ರಮೇಶ್, ಕನ್ನಡ ಚಿಂತಕ ಯೋಗನಂದ ಬಾಬು, ಮಿಡಿತ ಫೌಂಡೇಶನ್ ಅಧ್ಯಕ್ಷ ಪರಿಸರ ಮಂಜು, ಮುಖ್ಯೋಪಾಧ್ಯಾ ಪ್ರಸನ್ನಮೂರ್ತಿ, ಮುಖಂಡರಾದ ಓಬಳೇಶ್, ವಿಮಾಲ ಚಂದ್ರಶೇಖರ್, ತೃಪ್ತಿ ರವಿ ರೆಡ್ಡಿ, ಅಂಬರೀಶ್ ಗುಣ, ವಿ. ಆನಂದ್, ವಿಘ್ನೇಶ್, ಬಸವರಾಜು, ಲೋಹಿತ್, ಮಿಡಿತ ಫೌಂಡೇಶನ್ ಸದಸ್ಯರಾದ ಸಿಂಹಾದ್ರಿ, ಶಿವಪ್ಪ, ಸೌಮ್ಯ ಪಾವರ್, ಲಕ್ಷ್ಮೀನಾರಾಯಣ, ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## 26 ವರ್ಷವಾದರೂ ಸಿಗದ ನಿವೇಶನ: ದಲಿತ ಕುಟುಂಬಗಳಿಗೆ ಬೇಕು ಆಶ್ರಯ

• ಉದಯವಾಹಿನಿ, ಬೆಂಗಳೂರು

ಬೇಗೂರು ಗ್ರಾಮದ 62 ದಲಿತ ಕುಟುಂಬಗಳಿಗೆ ಆಶ್ರಯ ಯೋಜನೆಯಡಿ 26 ವರ್ಷಗಳ ಹಿಂದೆಯೇ ಭೂಮಿ ಮಂಜೂರಾಗಿದ್ದು, ಜಾಗವನ್ನೂ ಗುರುತಿಸಲಾಗಿದೆ. ಆದರೆ, ಇದುವರೆಗೂ ನಿವೇಶನ ಹಂಚಿಕೆಯಾಗಿಲ್ಲ. ಬೆಂಗಳೂರು ದಕ್ಷಿಣ ತಾಲ್ಲೂಕು ಬೇಗೂರು ಗ್ರಾಮದ ಸರ್ವೆ ನಂ.302ರಲ್ಲಿ 1 ಎಕರೆ 32 ಗುಂಟೆ ಜಮೀನನ್ನು ಆಶ್ರಯ ಯೋಜನೆಯಡಿ ನಿವೇಶನಕ್ಕಾಗಿ 1994ರಲ್ಲಿ ಆಗಿನ ಜಿಲ್ಲಾಧಿಕಾರಿ ಮಂಜೂರು ಮಾಡಿದ್ದರು. ಆಗಿನಿಂದಲೂ ನಿವೇಶನ ದೊರೆತು ನೆಲೆ ಸಿಗಬಹುದು ಎಂದು ದಲಿತ ಕುಟುಂಬಗಳು ಕಾಯುತ್ತಲೇ ಇವೆ.

ಸರ್ವೆ ನಂ.302ರ 3 ಎಕರೆ 33 ಗುಂಟೆ ಜಮೀನಿನಲ್ಲಿ 2 ಎಕರೆ 23 ಗುಂಟೆ ಜಮೀನು ಸರ್ಕಾರಿ ಗುಂಡುತೋಪು ಎಂದು ಪಹಣಿಯಲ್ಲಿ ಇದೆ. ಜಮೀನಿನಲ್ಲಿ ಬೇಗೂರು ಪೊಲೀಸ್ ಠಾಣೆ ಕಟ್ಟಡಕ್ಕಾಗಿ 1 ಎಕರೆ 10 ಗುಂಟೆ ಜಮೀನನ್ನು ಮಂಜೂರು ಮಾಡಲಾಗಿದೆ. ಉಳಿದ ಜಮೀನಿನಲ್ಲಿ ಪ್ರತಿ ಕುಟುಂಬಕ್ಕೆ 20ಘಿ30 ಅಡಿ ನಿವೇಶನವನ್ನು ಮಂಜೂರು ಮಾಡಲಾಗಿತ್ತು. ಮಂಜೂರಾತಿ ಆದೇಶ ದೊರೆತ ಸಂದರ್ಭದಲ್ಲಿ ಬೇಗೂರು ಗ್ರಾಮವು ಪಂಚಾಯಿತಿ ವ್ಯಾಪ್ತಿಯಲ್ಲಿತ್ತು. ತಹಶೀಲ್ದಾರ್ ಅವರು, ಆಗಿನ ಬ್ಲಾಕ್ ಅಭಿವೃದ್ಧಿ ಅಧಿಕಾರಿಗೆ (ಬಿಡಿಒ) ಪತ್ರ ಬರೆದು ವರದಿ ಕೇಳಿದ್ದರು. ಅದರಂತೆ ಪರಿಶೀಲನೆ ನಡೆಸಿ ಈ ಜಮೀನಿನಲ್ಲಿ ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡಲು ಹಕ್ಕು ಪತ್ರ ನೀಡಬಹುದೆಂದು ಬಿಡಿಒ ವರದಿ ನೀಡಿದ್ದರು. ಆದರೂ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲಿಲ್ಲ. ಬಳಿಕ ಪಂಚಾಯಿತಿ ವ್ಯಾಪ್ತಿಯಲ್ಲಿದ್ದ ಬೇಗೂರು ಗ್ರಾಮ, 2007ರಲ್ಲಿ ಬಿಬಿಎಂಪಿ ವ್ಯಾಪ್ತಿಗೆ ಒಳಪಟ್ಟಿತು.



**ಜಿಬಿಎ ರಚನೆಯಾದ ನಂತರ ಬೇಗೂರು ಪ್ರದೇಶ ವಲಯ 1ಕ್ಕೆ ಸೇರಿದೆ. ಜಮೀನಿಗೆ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ**
**-ಎಂ.ಎಂ.ಮಧು, ಜಂಟಿ ಆಯುಕ್ತ ವಲಯ 1 ಬೆಂಗಳೂರು ದಕ್ಷಿಣ ನಗರಪಾಲಿಕೆ**

ಫಲಾನುಭವಿಗಳಾದ ಮುನಿಯಪ್ಪ, ಬಿ.ಸಿ.ವೆಂಕಟೇಶ್, ಆಂಜಿನಪ್ಪ, ಕುಮಾರ್ ಎಂ. 2022ರಲ್ಲಿ ಹೈಕೋರ್ಟ್ ಮೊರೆ ಹೋಗಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯ, ಹಾಗೂ ಮಂಜೂರಾಗಿರುವ ನಿವೇಶನಗಳನ್ನು ಫಲಾನುಭವಿಗಳಿಗೆ ಕೂಡಲೇ ಹಂಚಿಕೆ ಮಾಡಬೇಕು ಎಂದು 2024ರ ಜೂನ್‌ನಲ್ಲಿ ತೀರ್ಪು ನೀಡಿತ್ತು. ಇಷ್ಟೆಲ್ಲ ಆದರೂ, ಇದುವರೆಗೂ ನಿವೇಶನಗಳ ಹಂಚಿಕೆಯಾಗಿಲ್ಲ.

## ಪರಪ್ಪನ ಅಗ್ರಹಾರ: ಸಹ ಕೈದಿಗೆ ದರ್ಶನ್ ಕಿರುಕುಳ, ಸೆಲ್ ಬಳಿ ಕಟ್ಟೆಚ್ಚರ!

• ಉದಯವಾಹಿನಿ, ಬೆಂಗಳೂರು

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲುಪಾಲಾಗಿರುವ ನಟ ದರ್ಶನ್ ಜೈಲಿನಲ್ಲೂ ಯಡವಟ್ಟು ಮಾಡಿಕೊಂಡಿದ್ದು, ಸಹ ಕೈದಿಗೆ ಥಳಿಸಿದ್ದಾರೆ ಎಂದು ವರದಿಯಾಗಿದೆ.

ಸುದ್ದಿಮಾಧ್ಯಮವೊಂದು ಈ ಕುರಿತು ವರದಿ ಮಾಡಿದ್ದು, ಜಾಮೀನು ರದ್ದಾಗಿ ಪರಪ್ಪನ ಅಗ್ರಹಾರ ಜೈಲಿಗೆ ಮರಳಿರುವ ನಟ ದರ್ಶನ್ ಸಹ ಕೈದಿಗಳಿಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡುತ್ತಿರುವುದು ಬೆಳಕಿಗೆ ಬಂದಿದ್ದು, ದೊಡ್ಡ ಜಗಳಗಳು ನಡೆದಿವೆ ಎಂದು ವರದಿ ಮಾಡಿದೆ.

ಜೈಲಿನಲ್ಲಿ ನಡೆಯುತ್ತಿದ್ದ ಅಕ್ರಮಗಳು ಕುರಿತು ಮಾಧ್ಯಮಗಳು ಸುದ್ದಿ ಮಾಡುತ್ತಲೇ ಅಧಿಕಾರಿಗಳು ಎಚ್ಚೆತ್ತುಕೊಂಡು ಅಕ್ರಮಗಳಿಗೆ ಬ್ರೇಕ್ ಹಾಕಿದ್ದಾರೆ. ಈಗ ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲಿ ನಿಯಮಗಳು ಕಠಿಣವಾಗಿದ್ದು, ಈ ನಿಯಮಗಳಿಂದ ನಟ ದರ್ಶನ್ ತತ್ತರಿಸಿಹೋಗಿದ್ದಾರಂತೆ. ಮಾನಸಿಕ ಒತ್ತಡಕ್ಕೆ ಒಳಗಾಗಿ ನಟ ದರ್ಶನ್ ಸಹ ಕೈದಿಗಳಿಗೆ ಅವರು ಕಿರುಕುಳ ನೀಡುತ್ತಿರುವ ಆರೋಪ ಕೇಳಿ ಬಂದಿದೆ.



ಉದಯವಾಹಿನಿ ಚಿತ್ರ

**ತೀವ್ರ ನಿಗಾದಲ್ಲಿ ದರ್ಶನ್, ಕಠಿಣ ನಿಯಮ**

ದರ್ಶನ್ ಈ ಬಾರಿ ಜೈಲು ಸೇರಿದಾಗಿನಿಂದಲೂ ಕಠಿಣ ನಿಯಮ ಜಾರಿಯಲ್ಲಿದೆ. ಅಲ್ಲದೆ, ಇತ್ತೀಚೆಗೆ ಜೈಲಿನ ಪಾರ್ಟಿ ವಿಡಿಯೋ ವೈರಲ್ ಆಗುತ್ತಿದ್ದಂತೆ ಎಲ್ಲಾವೂ ಬದಲಾಗಿದೆ. ಐಪಿಎಸ್ ಅಧಿಕಾರಿ ಅಂಶು ಕುಮಾರ್ ಜೈಲಿನ ಮುಖ್ಯ ಸೂಪರಿಂಟೆಂಡೆಂಟ್ ಆಗಿ ನೇಮಕಗೊಂಡಿದ್ದು, ಜೈಲಿನಲ್ಲಿ ಅತಿ ಕಠಿಣ ರೂಲ್ಸ್ ಜಾರಿಗೆ ತಂದಿದ್ದಾರೆ. ದರ್ಶನ್ ಅವರು ಸಾಲಿನಲ್ಲಿ ನಿಂತು ತಾವೇ ಊಟ ತೆಗೆದುಕೊಂಡು ಬರಬೇಕಿದೆ. ಒಳಗಿನ ಶೌಚಾಲಯ ಕೂಡ ತಾವೇ ಕ್ಲೀನ್ ಮಾಡಬೇಕಿದೆ. ಈ ನಿಯಮಗಳಿಂದ ದರ್ಶನ್ ತತ್ತರಿಸಿ ಹೋಗಿದ್ದಾರೆ.

## ಸರ್ಕಾರಿ ಶಾಲೆ ವಿಲೀನ: ಅಧಿವೇಶನದಲ್ಲಿ ಚರ್ಚೆ-ಎಸ್.ಸುರೇಶ್ ಕುಮಾರ್

• ಉದಯವಾಹಿನಿ, ಬೆಂಗಳೂರು



ಕರ್ನಾಟಕದಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚುವ ಬದಲು ಒಂದೂವರೆ ಕಿ.ಮೀ. ವ್ಯಾಪ್ತಿಯೊಳಗೆ ಇರುವ ಎಲ್ಲಾ ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುವುದು ಸೂಕ್ತ.

ಈ ಕುರಿತು ಬೆಳಗಾವಿಯಲ್ಲಿ ಆರಂಭವಾಗಲಿರುವ ಚಳಿಗಾಲದ ಅಧಿವೇಶನದಲ್ಲಿ ಚರ್ಚೆ ನಡೆಸುವೆ ಎಂದು ಶಾಸಕ ಎಸ್.ಸುರೇಶ್ ಕುಮಾರ್ ಹೇಳಿದ್ದಾರೆ. ಹಿಂದೆ ಸರ್ವ ಶಿಕ್ಷಾ ಅಭಿಯಾನ ಯೋಜನೆ ಜಾರಿಗೊಂಡಾಗ ಹೆಚ್ಚಿನ ಸರ್ಕಾರಿ ಶಾಲೆಗಳನ್ನು ಆರಂಭಿಸಲಾಯಿತು. ಖಾಸಗಿ ಶಾಲೆಗಳ ವ್ಯಾಮೋಹದಿಂದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ.

ಮಾಗಡಿ ತಾಲ್ಲೂಕಿನ ಹಳ್ಳಿಯೊಂದಕ್ಕೆ ಹೋಗಿದ್ದಾಗ ಅಲ್ಲಿನ ಕಿರಿಯ ಪ್ರಾಥಮಿಕ ಶಾಲೆಯ ಮೂರು ತರಗತಿಗಳಲ್ಲಿ ತಲಾ ಇಬ್ಬರು. ಎರಡು ತರಗತಿಗಳಲ್ಲಿ ಮಕ್ಕಳೇ ಇಲ್ಲದ್ದನ್ನು ನೋಡಿ ಬಂದಿದ್ದೇನೆ’ ಎಂದು ತಿಳಿಸಿದ್ದಾರೆ.

# 2 ವರ್ಷಗಳಲ್ಲಿ ಎಲ್ಲಾ ಕಾರಿಡಾರ್‌ನಲ್ಲಿ ಪ್ರತಿ 4 ನಿಮಿಷಕ್ಕೊಂದು ರೈಲು

## ಹಳದಿ ಮಾರ್ಗಕ್ಕೆ ಹೆಚ್ಚುವರಿ ಆರು ರೈಲುಗಳಿಗಾಗಿ ಬಿಇಎಂಎಲ್ ಜತೆ 414 ಕೋಟಿ ರೂ.ಗಳ ಒಪ್ಪಂದ

• ಉದಯವಾಹಿನಿ, ಬೆಂಗಳೂರು

ನಮ್ಮ ಮೆಟ್ರೋದ ಹಳದಿ ಮಾರ್ಗಕ್ಕೆ ಹೆಚ್ಚುವರಿ ಆರು ಚಾಲಕರಹಿತ ರೈಲು ಸೆಟ್‌ಗಳನ್ನು ಪೂರೈಸಲು ಬಿಇಎಂಎಲ್ ಜತೆ ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್) ಒಪ್ಪಂದ ಮಾಡಿಕೊಂಡಿದೆ.

ಹಳದಿ ಮಾರ್ಗದಲ್ಲಿ(ಆರ್.ವಿ.ರಸ್ತೆ- ಬೊಮ್ಮಸಂದ್ರ) ಹೆಚ್ಚಿನ ಪ್ರಯಾಣಿಕರ ಸಂಖ್ಯೆ ಪರಿಗಣಿಸಿ, ಬಿಎಂಆರ್‌ಸಿಎಲ್ ಹೆಚ್ಚುವರಿ ಆರು ರೈಲುಗಳಿಗಾಗಿ ಬಿಇಎಂಎಲ್ ಜತೆ 414 ಕೋಟಿ ರೂ. ಗಳ ಒಪ್ಪಂದ ಮಾಡಿಕೊಂಡಿದೆ. ಬಿಇಎಂಎಲ್ 2027ರ ವೇಳೆಗೆ ಹೆಚ್ಚುವರಿ ಆರು ರೈಲು (36 ಬೋಗಿ) ಪೂರೈಸುವ ಸಾಧ್ಯತೆ ಇದೆ. ಹಳದಿ ಮಾರ್ಗವನ್ನು ಬೊಮ್ಮಸಂದ್ರದಿಂದ ಅತ್ತಿಬೆಲೆಗೆ ವಿಸ್ತರಿಸಿದ ನಂತರ ಹೆಚ್ಚುವರಿಯಾಗಿ 10-12 ರೈಲುಗಳು ಬೇಕಾಗುತ್ತವೆ. ಈ ರೈಲುಗಳನ್ನು ಸಕಾಲದಲ್ಲಿ ಪಡೆಯುವ ನಿಟ್ಟಿನಲ್ಲಿ ಬಿಎಂಆರ್‌ಸಿಎಲ್ ಒಪ್ಪಂದ ಮಾಡಿಕೊಂಡಿದೆ. ಇದೇ ವೇಳೆ, ಮುಂದಿನ ಎರಡು ವರ್ಷಗಳಲ್ಲಿ ಎಲ್ಲಾ ಮಾರ್ಗದಲ್ಲಿ(ಹಸಿರು, ನೇರಳೆ, ಹಳದಿ ಮತ್ತು ಗುಲಾಬಿ ಮಾರ್ಗ) ಎಲ್ಲಾ ಸಮಯದಲ್ಲೂ ಪ್ರತಿ ನಾಲ್ಕು ನಿಮಿಷಕ್ಕೊಂದು ರೈಲುಗಳನ್ನು ಓಡಿಸಲು ಬಿಎಂಆರ್‌ಸಿಎಲ್ ಚಿಂತನೆ ನಡೆಸಿದೆ.



**6ನೇ ರೈಲು ಸಂಚಾರ ಆರಂಭ**

ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಪ್ರಸ್ತುತ 5 ರೈಲುಗಳು ಸಂಚರಿಸುತ್ತಿದ್ದು, ಇನ್ನೊಂದು ತಿಂಗಳ ಅವಧಿಯಲ್ಲಿ ಆರನೇ ರೈಲು ಸಂಚಾರ ನಡೆಸಲಿದೆ. ಪ್ರಸ್ತುತ 15 ನಿಮಿಷಕ್ಕೊಂದು ರೈಲು ಸಂಚಾರ ನಡೆಸುತ್ತಿದ್ದು, 6ನೇ ರೈಲು ಸಂಚಾರ ಆರಂಭಿಸಿದರೆ ಪ್ರತಿ 12 ನಿಮಿಷಕ್ಕೊಂದು ರೈಲು ಪ್ರಯಾಣಿಕರಿಗೆ ಲಭ್ಯವಾಗಲಿದೆ. ಸದ್ಯ ಈ ಮಾರ್ಗಕ್ಕೆ ಅಗತ್ಯವಿರುವ ರೈಲುಗಳನ್ನು ಕೋಲ್ಕತ್ತಾದ ಟಿಟಾಗರ್ ಸಂಸ್ಥೆ ಪೂರೈಕೆ ಮಾಡುತ್ತಿದೆ. ಈ ಸಂಸ್ಥೆಯು ಇನ್ನೂ 9 ರೈಲುಗಳನ್ನು ಪೂರೈಸಬೇಕಿದೆ.

**ಒಟ್ಟು ನಾಲ್ಕು ಸಾವಿರ ಕೋಟಿ ರೂ. ಒಪ್ಪಂದ :** ಈವರೆಗೆ ಬಿಎಂಆರ್‌ಸಿಎಲ್ ಜತೆ ಬಿಇಎಂಎಲ್ ಒಟ್ಟು ನಾಲ್ಕು ಸಾವಿರ ಕೋಟಿಗೆ ರೂ.ಗೆ ಒಪ್ಪಂದ ಮಾಡಿಕೊಂಡಿದೆ. 2023ರಲ್ಲಿ ಬಿಇಎಂಎಲ್ ನಮ್ಮ ಮೆಟ್ರೊಗೆ ಒಟ್ಟು 53 ರೈಲು ಸೆಟ್‌ಗಳನ್ನು ಪೂರೈಸಲು 3,177 ಕೋಟಿ ರೂ. ಒಪ್ಪಂದ ಮಾಡಿಕೊಂಡಿತ್ತು. 53 ರೈಲು ಸೆಟ್‌ಗಳ (318 ಕೋಚ್‌ಗಳು) ಪೈಕಿ 37 ರೈಲುಗಳು ನೀಲಿ ಮಾರ್ಗದಲ್ಲಿ ಮತ್ತು 16 ಗುಲಾಬಿ ಮಾರ್ಗದಲ್ಲಿ ಬಳಕೆಯಾಗಲಿವೆ. ಇದೇ ವರ್ಷ ಮಾರ್ಚ್‌ನಲ್ಲಿ ಬಿಎಂಆರ್‌ಸಿಎಲ್ ಗುಲಾಬಿ ಮಾರ್ಗಕ್ಕೆ ಹೆಚ್ಚುವರಿ ಏಳು ರೈಲುಗಳನ್ನು ಪೂರೈಸಲು 405 ಕೋಟಿ ರೂ.ಗಳ ಒಪ್ಪಂದ ಮಾಡಿಕೊಂಡಿತು. ಈ ಮೂಲಕ ಬಿಇಎಂಎಲ್ ಈಗ ನಮ್ಮ ಮೆಟ್ರೊಗೆ 66 ರೈಲುಗಳನ್ನು (396 ಕೋಚ್‌ಗಳು) ಪೂರೈಸಲಿದೆ. ಬಿಇಎಂಎಲ್ ಈಗಾಗಲೇ ನೇರಳೆ ಮತ್ತು ಹಸಿರು ಮಾರ್ಗಕ್ಕೆ 57 ರೈಲುಗಳನ್ನು ಪೂರೈಸಿದೆ. 15 ವರ್ಷಗಳವರೆಗೆ ಬಿಇಎಂಎಲ್ ಎಲ್ಲಾ ಬೋಗಿಗಳ ನಿರ್ವಹಣೆ ಮಾಡಲಿದೆ. ಬಿಎಂಆರ್‌ಸಿಎಲ್ ಸದ್ಯ ಪ್ರತಿ ಕೋಚ್‌ಗೆ 11.5 ಕೋಟಿ ರೂ.ಗಳನ್ನು ಪಾವತಿಸಲಿದೆ. ಇದಕ್ಕೂ ಮೊದಲು ಪ್ರತಿ ಬೋಗಿಗೆ 9.99 ಕೋಟಿ ರೂ.ಗೆ ಬಿಇಎಂಎಲ್ ಬೋಗಿಗಳನ್ನು ಪೂರೈಸುತ್ತಿತ್ತು.

### ಬೋಗಿ ಪೂರೈಕೆಯಲ್ಲಿ ವಿಳಂಬ

**2019ರ ಡಿಸೆಂಬರ್‌ನಲ್ಲಿ ಬಿಎಂಆರ್‌ಸಿಎಲ್ 173 ವಾರಗಳಲ್ಲಿ 36 ರೈಲು ಸೆಟ್‌ಗಳನ್ನು ಪೂರೈಸಲು ಚೀನಾದ ಸಿಆರ್‌ಆರ್‌ಸಿ ನಾನ್‌ಜಿಂಗ್ ಪುಜೆನ್ ಕೋ ಲಿಮಿಟೆಡ್ ಜತೆ 1,578 ಕೋಟಿ ರೂ.ಗೆ ಒಪ್ಪಂದ ಮಾಡಿಕೊಂಡಿತ್ತು. ಇದರಲ್ಲಿ ಹಳದಿ ಮಾರ್ಗಕ್ಕೆ 15, ನೇರಳೆ ಮತ್ತು ಹಸಿರು ಮಾರ್ಗಕ್ಕೆ 21 ರೈಲುಗಳನ್ನು ಪೂರೈಸಬೇಕಿತ್ತು. ಆದರೆ, ಸಂಸ್ಥೆಯು ಭಾರತದಲ್ಲಿ ರೈಲುಗಳನ್ನು ತಯಾರಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳ ಮೂಲದ ಟಿಟಾಘರ್ ರೈಲ್ ಸಿಸ್ಟಮ್ಸ್ ಲಿಮಿಟೆಡ್ (ಟಿಆರ್‌ಎಸ್‌ಎಲ್) ರೈಲುಗಳನ್ನು ಪೂರೈಸುತ್ತಿದೆ. ಮುಂದಿನ ವರ್ಷದಿಂದ ನೇರಳೆ (ಚಲ್ಲಘಟ್ಟ-ವೈಟ್‌ಫೀಲ್ಡ್) ಮತ್ತು ಹಸಿರು ಮಾರ್ಗ (ಮಾದಾವರ-ಸಿಲ್ಕ ಇನ್‌ಸ್ಟಿಟ್ಯೂಟ್) ಮಾರ್ಗಗಳಲ್ಲಿ ಸಿಆರ್‌ಆರ್‌ಸಿ ತಯಾರಿಸಿದ ಮೂಲಮಾದರಿ ರೈಲುಗಳು ಸಂಚಾರ ನಡೆಸುವ ಸಾಧ್ಯತೆ ಇದೆ.**

# ಸ್ಕಂದಗಿರಿ ಪಾರ್ವತಾಂಭ ದೇಗುಲಕ್ಕೆ ಸಚ್ಚಿದಾನಂದ ಸ್ವಾಮೀಜಿ ಭೇಟಿ

• ಉದಯವಾಹಿನಿ, ಗುಂಡ್ಲುಪೇಟೆ

ಮೈಸೂರಿನ ಸಚ್ಚಿದಾನಂದ ಗಣಪತಿ ಆಶ್ರಮದ ಅವಧೂತ ಸಚ್ಚಿದಾನಂದ ಸ್ವಾಮೀಜಿ ಸೋಮವಾರ ತಾಲ್ಲೂಕಿನ ಸ್ಕಂದಗಿರಿ ಪಾರ್ವತಾಂಭಾ ಬೆಟ್ಟಕ್ಕೆ ಭೇಟಿ ನೀಡಿದ್ದರು. ಆಶ್ರಮದ ಕಿರಿಯ ಶ್ರೀಗಳಾದ ವಿಜಯಾನಂದ ಸ್ವಾಮೀಜಿಯವರ ಜತೆ ಸೋಮವಾರ ದೇವಾಲಯಕ್ಕೆ ಆಗಮಿಸಿದ ಅವಧೂತರನ್ನ ಬೆಟ್ಟದ ಸುತ್ತಮುತ್ತಲಿನ ಕಂದೇಗಾಲ, ಶಿಂಡನಪುರ, ಮೊಳ್ಳಯ್ಯನಹುಂಡಿ ಗ್ರಾಮಸ್ಥರು, ಬ್ರಾಹ್ಮಣಸಭಾ ಹಾಗೂ ಸಚ್ಚಿದಾನಂದ ಶ್ರೀಗಳ ಭಕ್ತರು ಜನಪದ ಕಲಾತಂಡಗಳು, ಮಂಗಳವಾದ್ಯಗಳು, ವೀರಗಾಸೆಗಳ ಜತೆಗೆ ಭಕ್ತಿಪೂರ್ವಕವಾಗಿ ಬರಮಾಡಿಕೊಂಡರು.

ಸೋಮೇಶ್ವರಸ್ವಾಮಿ ಹಾಗೂ ಮಹಾಪಾರ್ವತಿ ಅಮ್ಮನವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದ ನಂತರ ದೇವಾಲಯದ ಆವರಣದಲ್ಲಿ ಆಯೋಜಿಸಿದ್ದ ಹೋಮಕುಂಡಕ್ಕೆ ಪೂರ್ಣಾಹುತಿ ಸಲ್ಲಿಸಿದರು. ನಂತರ ಮಾತನಾಡಿ, 1964ರಲ್ಲಿ ತಾವು ಇಲ್ಲಿಗೆ ಮೊದಲ


ಉದಯವಾಹಿನಿ ಚಿತ್ರ

ಬಾರಿಗೆ ಬಂದಿದ್ದಾಗ ಅಂದು ನಡೆದ ಜಾತ್ರೆಯಲ್ಲಿ ಲಕ್ಷಾಂತರ ಭಕ್ತರು ಸೇರಿದ್ದರು. ಅಲ್ಲಿ ಸಿದ್ದಪಡಿಸಿದ್ದ ಪ್ರಸಾದವನ್ನು ಭಕ್ತರಿಗೆ ಬಡಿಸಿದಷ್ಟು ಅದು ಮತ್ತಷ್ಟು ಹೆಚ್ಚುವ ಮೂಲಕ ಅಕ್ಷಯವಾಗುತ್ತಿತ್ತು. ಸ್ವತಃ ಪಾರ್ವತಿ ದೇವಿಯೇ ತನ್ನ ಭಕ್ತರಿಗೆ ಹಣ್ಣುಗಳ ಪ್ರಸಾದ ಕರುಣಿಸಿದ್ದಳು ಎಂದು ಸ್ಮರಿಸಿದರು. ಪುರಾತನ ಪುಣ್ಯಕ್ಷೇತ್ರವನ್ನು ಜನಪ್ರತಿನಿಧಿಗಳು ಮತ್ತಷ್ಟು ಅಭಿವೃದ್ದಿಗೊಳಿಸಿ ಭಕ್ತರಿಗೆ ಇನ್ನೂ ಹೆಚ್ಚಿನ ಸವಲತ್ತುಗಳನ್ನು ಒದಗಿಸಲು ಕ್ರಮಕೈಗೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಬ್ರಾಹ್ಮಣರ ಸಂಘದ ಅಧ್ಯಕ್ಷ ಗೋಪಾಲಕೃಷ್ಣಭಟ್, ಚಾಮರಾಜೇಶ್ವರ ದೇವಾಲಯದ ಪ್ರಧಾನ ಅರ್ಚಕರಾದ ನಾಗರಾಜ ದೀಕ್ಷಿತ್, ಪ್ರದೀಪ್ ದೀಕ್ಷಿತ್, ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್, ಕಾಡಾ ಮಾಜಿ ಅಧ್ಯಕ್ಷ ಎಚ್.ಎಸ್.ನಂಜಪ್ಪ, ಟೌನ್ ಪಿಎಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಮಂಜುನಾಥ್, ಪುರಸಭೆ ಮಾಜಿ ಅಧ್ಯಕ್ಷ ಎಲ್.ಸುರೇಶ್, ಮುಖಂಡರಾದ ಎಸ್.ಪಿ.ಸುರೇಶ್, ಮಹದೇವಪ್ಪ, ಎಸ್.ಸಿ.ಮಂಜುನಾಥ್, ಮೋಹನ್, ಕುಮಾರ್, ಸುಮನ್, ತೇಜಾ, ನಾಗಮಲ್ಲಪ್ಪ, ಮಾದೇಶ್, ದೇವಾಲಯ ಅಭಿವೃದ್ಧಿ ಸಮಿತಿಯ ಸದಸ್ಯರು ಹಾಗೂ ಗ್ರಾಮಸ್ಥರು ಇದ್ದರು.

# ಮೈಸೂರು-ಕುಶಾಲನಗರ ಹೆದ್ದಾರಿ ಪ್ಯಾಕೇಜ್ 2 ಕಾಮಗಾರಿ ಆರಂಭ

## ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಚ್ 12, 2023 ರಂದು ಮಂಡ್ಯದಲ್ಲಿ ಈ ಯೋಜನೆಯ ಶಂಕುಸ್ಥಾಪನೆ

• ಉದಯವಾಹಿನಿ, ಮೈಸೂರು

ಮೈಸೂರು-ಕುಶಾಲನಗರ ರಾಷ್ಟ್ರೀಯ ಹೆದ್ದಾರಿ 275 ರ ಎರಡನೇ ಹಂತದ ಕಾಮಗಾರಿಗೆ ಅರಣ್ಯ ಇಲಾಖೆಯಿಂದ ಹಸಿರು ನಿಶಾನೆ ದೊರೆತಿದ್ದು, ಡಿ. 8 ರಂದು ಕಾಮಗಾರಿ ಆರಂಭವಾಗಲಿದೆ. 92.3 ಕಿಲೋಮೀಟರ್ ಉದ್ದದ ಈ 4-ಲೇನ್ ಹೆದ್ದಾರಿ ಯೋಜನೆಯು ಒಟ್ಟು 4126 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿದ್ದು, ಮೈಸೂರು-ಮಡಿಕೇರಿ ರಸ್ತೆಯ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವ ಉದ್ದೇಶ ಹೊಂದಿದೆ.

**412 ಕೋಟಿ ರೂ. ವೆಚ್ಚದಲ್ಲಿ ಅಗಲೀಕರಣ**


ಉದಯವಾಹಿನಿ ಚಿತ್ರ

ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಚ್ 12, 2023 ರಂದು ಮಂಡ್ಯದಲ್ಲಿ ಈ ಯೋಜನೆಯ ಶಂಕುಸ್ಥಾಪನೆ ನೆರವೇರಿಸಿದ್ದರು. ಮೈಸೂರು-ಕೊಡಗು ಸಂಸದ ಯದುವೀರ್ ಒಡೆಯರ್ ಅವರು ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ನೀಡಿದ್ದು, ಅರಣ್ಯ ಮತ್ತು ಪರಿಸರ ಸಂಬಂಧಿತ ಎಲ್ಲಾ ನಿಯಮಗಳನ್ನು ಪೂರೈಸಿದ ನಂತರವೇ ಈ ಅನುಮತಿ ದೊರೆತಿದೆ ಎಂದು ತಿಳಿಸಿದ್ದಾರೆ.

ಈ ಯೋಜನೆಯು ಕೊಡಗು, ಹುಣಸೂರು (ಮೈಸೂರು) ವಿಭಾಗಗಳಲ್ಲಿ ಬರುತ್ತದೆ. ಕಾಮಗಾರಿ ನಡೆಸುವ ಕಂಪನಿಯು ಸಂಬಂಧಪಟ್ಟ ಅರಣ್ಯಾಧಿಕಾರಿಗಳಿಂದ ಒಪ್ಪಿಗೆ ಪತ್ರಗಳನ್ನು ಸಲ್ಲಿಸಿದ್ದು, ಇದೀಗ ಕೆಲಸದ ಆದೇಶ ಹೊರಡಿಸಲಾಗಿದೆ.

ಎರಡನೇ ಹಂತದ ಕಾಮಗಾರಿ, ಅಂದರೆ ಬಸವನಹಳ್ಳಿಯಿಂದ ಪಿರಿಯಾಪಟ್ಟಣದವರೆಗಿನ 22.7 ಕಿಲೋಮೀಟರ್ ರಸ್ತೆಯ ನಿರ್ಮಾಣವು ಸುಮಾರು 18 ತಿಂಗಳಲ್ಲಿ ಅಂದರೆ 2027 ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಈ ಹೆದ್ದಾರಿಯನ್ನು ಐದು ಪ್ಯಾಕೇಜ್‌ಗಳಾಗಿ ವಿಂಗಡಿಸಲಾಗಿದೆ. ಮೊದಲ ಪ್ಯಾಕೇಜ್, ಅಂದರೆ ಕುಶಾಲನಗರದಿಂದ ಮಡಿಕೇರಿಯವರೆಗಿನ 22 ಕಿಲೋಮೀಟರ್ ರಸ್ತೆಯ ಕಾಮಗಾರಿ, ದಟ್ಟ ಅರಣ್ಯ ಪ್ರದೇಶದ ಮೂಲಕ ಹಾದುಹೋಗುವುದರಿಂದ ಇನ್ನೂ ಅನುಮತಿಗಾಗಿ ಕಾಯುತ್ತಿದೆ. ಈ ಬಗ್ಗೆ ಕೊಡಗು ಸಾರ್ವಜನಿಕ ಅರಣ್ಯ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಡಿ.ಎಂ. ಗಿರೀಶ್ ಅವರು, ಬಸವನಹಳ್ಳಿಯಲ್ಲಿ ಹೆದ್ದಾರಿಯನ್ನು ಅಗಲೀಕರಣಗೊಳಿಸುವ ಪ್ರಸ್ತಾವನೆಗಳನ್ನು ಸಿದ್ಧಪಡಿಸಲಾಗುತ್ತಿದೆ. ಇದರಿಂದ ಕುಶಾಲನಗರ, ಮಡಿಕೇರಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಚಾರ ದಟ್ಟಣೆ ಉಂಟಾಗುವುದಿಲ್ಲ ಎಂದು ತಿಳಿಸಿದ್ದಾರೆ.

### ಐದು ಪ್ಯಾಕೇಜ್‌ಗಳಾಗಿ ವಿಂಗಡಿಸಲಾಗಿದೆ ಅವುಗಳ ವಿವರ ಹೀಗಿದೆ

- **ಪ್ಯಾಕೇಜ್ 1: ಕುಶಾಲನಗರದಿಂದ ಮಡಿಕೇರಿವರೆಗೆ 22 ಕಿಲೋಮೀಟರ್. ಈ ಪ್ಯಾಕೇಜ್‌ಗೆ ಸಂಬಂಧಿಸಿದಂತೆ, ಪ್ರಸ್ತಾವಿತ ಮಾರ್ಗವು ದಟ್ಟ ಅರಣ್ಯ ಪ್ರದೇಶದ ಮೂಲಕ ಹಾದುಹೋಗುವುದರಿಂದ ಅರಣ್ಯ ಇಲಾಖೆಯ ಅನುಮತಿಗಾಗಿ ಕಾಯುತ್ತಿದೆ.**
- **ಪ್ಯಾಕೇಜ್ 2: ಗುಡ್ಡೇಹೊಸೂರುನಿಂದ ಹಾಸನ-ಪಿರಿಯಾಪಟ್ಟಣ ರಸ್ತೆ ಜಂಕ್ಷನ್ ವರೆಗೆ 22.7 ಕಿಲೋಮೀಟರ್. ಈ ಪ್ಯಾಕೇಜ್‌ಗೆ ಡಿಸೆಂಬರ್ 8 ರಿಂದ ಕಾಮಗಾರಿ ಆರಂಭವಾಗಲಿದೆ.**
- **ಪ್ಯಾಕೇಜ್ 3: ಹೇಮ್ಮಿಗೆ ಗ್ರಾಮ (ಹಾಸನ-ಪಿರಿಯಾಪಟ್ಟಣ ರಸ್ತೆ ಜಂಕ್ಷನ್) ನಿಂದ ರಾಮನಾಥಪುರ-ತೇರಕಾನಂಬಿ ರಸ್ತೆ ಮತ್ತು ಹುಣಸೂರಿನ ಕೆ.ಆರ್. ನಗರ ಜಂಕ್ಷನ್ ವರೆಗೆ 24.1 ಕಿಲೋಮೀಟರ್.**
- **ಪ್ಯಾಕೇಜ್ 4: ರಾಮನಾಥಪುರ-ತೇರಕಾನಂಬಿ ರಸ್ತೆ ಮತ್ತು ಕೆ.ಆರ್. ನಗರ ಜಂಕ್ಷನ್‌ನಿಂದ ಯಲಚಹಳ್ಳಿ (ಯಳವಲ್ -ಕೆ.ಆರ್. ನಗರ ರಸ್ತೆ ಜಂಕ್ಷನ್ ಬಳಿ) ವರೆಗೆ 26.5 ಕಿಲೋಮೀಟರ್.**
- **ಪ್ಯಾಕೇಜ್ 5: ಯಲಚಹಳ್ಳಿಯಿಂದ ಶ್ರೀರಂಗಪಟ್ಟಣ ಬೈಪಾಸ್ ಬಳಿ ಪಶ್ಚಿಮವಾಹಿನಿ ವರೆಗೆ 19 ಕಿಲೋಮೀಟರ್.**

ಕುಶಾಲನಗರ ಮತ್ತು ಮಡಿಕೇರಿಯ ನಡುವಿನ ಅರಣ್ಯ ಪ್ರದೇಶದಲ್ಲಿ ಹೆದ್ದಾರಿ ವಿಸ್ತರಣೆಯು ಚರ್ಚೆಯಲ್ಲಿದೆ. ಈ ಬಗ್ಗೆ ವಿವರವಾದ ಯೋಜನಾ ವರದಿ ತಯಾರಿಸುವ ಮುನ್ನ ಅರಣ್ಯ ಇಲಾಖೆಯನ್ನು ಸಂಪರ್ಕಿಸಿದರೆ, ಅವರು ಸಾಧ್ಯತೆಗಳನ್ನು ಪರಿಶೀಲಿಸಿ ಅನುಮತಿ ನೀಡಬಹುದು ಎಂದು ಕೊಡಗು ಉಪ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್ ಹೇಳಿದ್ದಾರೆ.

ಈ ಮಹತ್ವದ ರಾಷ್ಟ್ರೀಯ ಹೆದ್ದಾರಿ 275 ರ ನಿರ್ಮಾಣವು ಮೈಸೂರು ಮತ್ತು ಕೊಡಗು ಜಿಲ್ಲೆಗಳ ನಡುವಿನ ಸಂಪರ್ಕವನ್ನು ಸುಧಾರಿಸಲಿದೆ. ಇದು ಪ್ರವಾಸೋದ್ಯಮಕ್ಕೂ ಉತ್ತೇಜನ ನೀಡಲಿದೆ. ಪ್ರಸ್ತುತ ಮೈಸೂರು-ಮಡಿಕೇರಿ ರಸ್ತೆಯಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿರುವುದರಿಂದ ಪ್ರಯಾಣಿಕರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಈ ಹೊಸ ಹೆದ್ದಾರಿ ನಿರ್ಮಾಣವಾದರೆ, ಪ್ರಯಾಣದ ಸಮಯವು ಕಡಿಮೆಯಾಗುವುದಲ್ಲದೆ, ಸುಗಮ ಸಂಚಾರಕ್ಕೆ ಅನುಕೂಲವಾಗಲಿದೆ.

ಈ ಯೋಜನೆಯು ಒಟ್ಟು 92.3 ಕಿಲೋಮೀಟರ್ ಉದ್ದವಿದ್ದು, 4-ಲೇನ್ ಹೆದ್ದಾರಿಯಾಗಿ ನಿರ್ಮಾಣವಾಗುತ್ತಿದೆ. ಇದರ ಒಟ್ಟು ವೆಚ್ಚ 4126 ಕೋಟಿ ರೂಪಾಯಿಗಳು. ಈ ಯೋಜನೆಯನ್ನು ಐದು ಪ್ಯಾಕೇಜ್‌ಗಳಾಗಿ ವಿಂಗಡಿಸಲಾಗಿದೆ.

# ರೈತ ಸಂಘಟನೆಗಳು ಒಂದಾಗಲಿ; ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಹಾಡ್ಯ ರವಿ

• ಉದಯವಾಹಿನಿ, ಜಯಪುರ

ಗ್ರಾಮೀಣ ಭಾಗದಲ್ಲಿ ಕೃಷಿಕರ ಸಮಸ್ಯೆಗಳಿಗೆ ಹೋರಾಡಲು ರೈತ ಸಂಘಟನೆಗಳಲ್ಲಿ ಒಗ್ಗಟ್ಟು ಬಹುಮುಖ್ಯ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಹಾಡ್ಯ ರವಿ ಹೇಳಿದರು ಹೋಬಳಿಯ ದೂರ ಗ್ರಾಮದಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಗ್ರಾಮ ಘಟಕದ ನಾಮಫಲಕ ಉದ್ಘಾಟಿಸಿ ಮಾತನಾಡಿದರು.

'ರಾಜ್ಯ ಮತ್ತು ಕೇಂದ್ರ ಸರ್ಕಾರದ ನಿರ್ಲಕ್ಷ್ಯದಿಂದ ರೈತರಿಗೆ ಸರಿಯಾದ ರೀತಿಯಲ್ಲಿ ಬೆಳೆಗಳಿಗೆ ವೈಜ್ಞಾನಿಕ ಬೆಲೆ ಸಿಗದೆ ನಿರಂತರ ಹೋರಾಟ ಮಾಡಬೇಕಾಗಿದೆ. ರೈತರಿಗೆ ಮಾರಕವಾಗಿರುವ ಭೂ ಸುಧಾರಣೆ ಕಾಯ್ದೆ ಹಾಗೂ ಗೋಹತ್ಯೆ ಕಾಯ್ದೆಯಂಥ ರೈತ ವಿರೋಧಿ ಕಾನೂನುಗಳನ್ನು ತಕ್ಷಣ ಅಧಿವೇಶನದಲ್ಲಿ ರದ್ದು ಮಾಡಬೇಕು ಎಂದು ಒತ್ತಾಯಿಸಿದರು.

ದಕ್ಷಿಣ ಭಾಗದ ಕಬ್ಬು ಬೆಳೆಗಾರರಿಗೆ ಹೆಚ್ಚುವರಿ ವೈಜ್ಞಾನಿಕ ಬೆಲೆ ಕೊಡಿಸಬೇಕು. ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಬರಬೇಕಾಗಿರುವ ಬಾಕಿಯನ್ನು ತಕ್ಷಣ ಬಿಡುಗಡೆ ಮಾಡಬೇಕು. ಮೈಸೂರು, ಚಾಮರಾಜನಗರ ಜಿಲ್ಲೆಯಲ್ಲಿ ಭತ್ತ ಖರೀದಿ ಕೇಂದ್ರವನ್ನು ತಕ್ಷಣ ಆರಂಭಿಸಬೇಕು ಎಂದು ಒತ್ತಾಯಿಸಿದರು.


ಉದಯವಾಹಿನಿ ಚಿತ್ರ

ಕಬ್ಬು ಬೆಳೆಗಾರರ ಸಂಘದ ರಾಜ್ಯ ಉಪಾಧ್ಯಕ್ಷ ಅಂಕನಹಳ್ಳಿ ತಿಮ್ಮಪ್ಪ, ರಾಜ್ಯ ನಿರ್ದೇಶಕ ಮರಿ ಸೋಮಪ್ಪ, ಜಿಲ್ಲಾಧ್ಯಕ್ಷ ಮುದ್ದಳ್ಳಿ ಚಿಕ್ಕಸ್ವಾಮಿ, ತಾಲ್ಲೂಕು ಅಧ್ಯಕ್ಷ ಅಂಬಳೆ ಮಹಾದೇವಸ್ವಾಮಿ, ಜಿಲ್ಲಾ ಗೌರವಾಧ್ಯಕ್ಷ ಎಂ.ವಿ. ಕೃಷ್ಣಪ್ಪ, ಸಂಘಟನಾ ಕಾರ್ಯದರ್ಶಿ ಸಿದ್ದರಾಜು, ತಗಡೂರು ನಾಗೇಶ್, ದೂರ ಗ್ರಾಮ ಘಟಕದ ಅಧ್ಯಕ್ಷ ಪ್ರಭುಸ್ವಾಮಿ, ಉಪಾಧ್ಯಕ್ಷ ಬಸವರಾಜು, ಶ್ರೀಕಂಠ ಮೂರ್ತಿ, ಗೌರವಾಧ್ಯಕ್ಷ ಶಂಕರಪ್ಪ, ಖಜಾಂಚಿ ನಂದೀಶ್, ನಂಜನ ಹಳ್ಳಿ ರವಿ ತಗಡೂರು ಉಮೇಶ್, ಮೊಬ್ಬಳ್ಳಿ ವೃಷಭೇಂದ್ರ, ಕೊಂಗಳ್ಳಿ ಮಹೇಶ್, ಗೀಕಳ್ಳಿ ವಿಶ್ವ ಬೀರಪ್ಪ, ಶಿವಮೂರ್ತಿ, ರೈತ ಘಟಕಗಳ ಸದಸ್ಯರು ಭಾಗವಹಿಸಿದ್ದರು.

# ನೀರಿನ ದಾಹ ನೀಗಲು ರಾಮಸಮುದ್ರ ಯೋಜನೆ

• ಉದಯವಾಹಿನಿ, ಶಿಡ್ಲಘಟ್ಟ

ನಮ್ಮ ಮನೆಗೆ ಕುಡಿಯುವ ನೀರು ಬಂದು ಒಂದು ವರ್ಷದ ಮೇಲಾಗಿದೆ. ಮೂರು ತಿಂಗಳ ಹಿಂದೆ ನಡೆದ ಚರಂಡಿ ಕಾಮಗಾರಿಯಿಂದ ಉಪ್ಪು ನೀರು ಹರಿಸುವ ಪೈಪ್‌ಲೈನ್ ಹಾಳಾಗಿದೆ. ಉಪ್ಪು ನೀರೂ ಬರುತ್ತಿಲ್ಲ. ಮನೆಗೆ ಟ್ಯಾಂಕರ್ ಮೂಲಕ ನೀರು ಹಾಕಿಸಿಕೊಳ್ಳುತ್ತಿದ್ದೇವೆ- ಇದು ಶಿಡ್ಲಘಟ್ಟದ 15ನೇ ವಾರ್ಡ್ ನಿವಾಸಿ ಷೇಕ್ ಹುಸೇನ್ ನುಡಿ.ಷೇಕ್ ಹುಸೇನ್ ಮಾತು ಶಿಡ್ಲಘಟ್ಟ ನಗರದ ನೀರು ಸರಬರಾಜಿನ ಅವ್ಯವಸ್ಥೆ, ನೀರಿನ ಕೊರತೆ, ಸಮಸ್ಯೆಯ ಅಗಾಧತೆಯನ್ನು ಪ್ರತಿಧ್ವನಿಸುತ್ತದೆ. ಈಗ ಈ ಸಮಸ್ಯೆಗಳಿಗೆ ಪರಿಹಾರ ಎನ್ನುವಂತೆ ರಾಮಸಮುದ್ರದಿಂದ ಶಿಡ್ಲಘಟ್ಟಕ್ಕೆ ನೀರು ತರುವ ಯೋಜನೆಗೆ ನಿಶಾನೆ ದೊರೆತಿದೆ.

ಈ ಯೋಜನೆಯ ಬಗ್ಗೆ ಶಿಡ್ಲಘಟ್ಟ ನಾಗರಿಕರು ಭಾರಿ ನಿರೀಕ್ಷೆಗಳನ್ನು ಹೊಂದಿದ್ದಾರೆ. ನಗರದ ನೀರಿನ ದಾಹ ನೀಗುತ್ತದೆ ಎನ್ನುವ ಹೆಚ್ಚಿನ ವಿಶ್ವಾಸ ಹೊಂದಿದ್ದಾರೆ. ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆಯಡಿ ರಾಮಸಮುದ್ರ ಕೆರೆಯಿಂದ ಶಿಡ್ಲಘಟ್ಟ ನಗರ ಮತ್ತು ಈ ಮಾರ್ಗದ 13 ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಯೋಜನೆ ರೂಪಿಸಲಾಗಿದೆ. 96 ಕೋಟಿ ವೆಚ್ಚದ ಯೋಜನೆಗೆ ಸರ್ಕಾರದಿಂದ ಅನುಮೋದನೆ ಸಿಕ್ಕಿದೆ. ಎರಡು ವರ್ಷಗಳೊಳಗೆ ಕಾಮಗಾರಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಈ ಮೂಲಕ ವೇಗವಾಗಿ ಬೆಳೆಯುತ್ತಿರುವ ಶಿಡ್ಲಘಟ್ಟ ನಗರಕ್ಕೆ ಭವಿಷ್ಯದಲ್ಲಿಯೂ ರಾಮಸಮುದ್ರದ ಕೆರೆ ನೀರು ಆಸರೆ ಆಗುತ್ತದೆ.


ಉದಯವಾಹಿನಿ ಚಿತ್ರ

**ಯೋಜನೆಯ ವಿವರ:** ರಾಮಸಮುದ್ರ ಕೆರೆಯಲ್ಲಿ 10X12 ಮೀ ಹೌಸಿಂಗ್ ಚೇಂಬರ್ ನಿರ್ಮಿಸಿ ಅಲ್ಲಿಂದ ನೀರು ಪಂಪ್ ಮಾಡಲಾಗುತ್ತದೆ. ಅಜ್ಜಕದಿರೇನಹಳ್ಳಿಯ ಬಳಿ 10 ಎಂಎಲ್‌ಡಿ ಜಲಶುದ್ದೀಕರಣ ಘಟಕ ಸ್ಥಾಪಿಸಿ ನೀರು ಶುದ್ದೀಕರಿಸಲಾಗುತ್ತದೆ. ರಾಮಸಮುದ್ರ ಕೆರೆಯಿಂದ ಜಲ ಶುದ್ದೀಕರಣ ಘಟಕಕ್ಕೆ ಕಚ್ಚಾ ನೀರು ಏರು ಕೊಳವೆ ಅಳವಡಿಸಲಾಗುತ್ತದೆ.

ನಗರದಲ್ಲಿ ಈಗಾಗಲೇ ಇರುವ ಐದು ಜಲಸಂಗ್ರಹಾಗಾರಗಳ ಜೊತೆಗೆ ಹೊಸದಾಗಿ 15 ಲಕ್ಷ ಲೀಟರ್ ಸಾಮರ್ಥ್ಯದ ಒಂದು, 10 ಲಕ್ಷ ಲೀಟರ್ ಸಾಮರ್ಥ್ಯದ ಎರಡು ಜಲಸಂಗ್ರಹಗಾರಗಳನ್ನು ನಿರ್ಮಿಸಲಾಗುವುದು. ಜಲ ಶುದ್ದೀಕರಣ ಘಟಕದಿಂದ ನಗರದ ಜಲಸಂಗ್ರಹಗಾರಗಳವರೆಗೆ 14.88 ಕಿ.ಮೀ. ದೂರ ವಿವಿಧ ವ್ಯಾಸದ ಡಿ.ಐ ಫೀಡರ ಕೊಳವೆಗಳನ್ನು ಅಳವಡಿಸಲಾಗುತ್ತದೆ. ನಗರದಾದ್ಯಂತ ನೀರು ಸರಬರಾಜಿಗೆ 99.18ಕಿ.ಮೀ ವಿವಿದ ವ್ಯಾಸದ ಎಚ್‌ಡಿಪಿಇಡಿಐ ವಿತರಣಾ ಜಾಲ ಅಳವಡಿಸುವರು. ನಗರದ 5 ಜಲಸಂಗ್ರಹಾಗಾರಗಳನ್ನು ನವೀಕರಣಗೊಳಿಸಲಾಗುತ್ತದೆ. ಇವುಗಳನ್ನೆಲ್ಲಾ ನಿರ್ವಹಣೆ ಮಾಡಲು ಆಧುನಿಕ ಆನ್‌ಲೈನ್ ಮಾನಿಟರಿಂಗ್ ಸಿಸ್ಟಮ್ ಅಳವಡಿಸಲಾಗುತ್ತದೆ.

### 55 ಎಲ್‌ಪಿಸಿಡಿ ನೀರು


**ಪ್ರಸ್ತುತ ಕೊಳವೆಬಾವಿಗಳಿಂದ ಮಾತ್ರ ನಗರದ ಜನರಿಗೆ ನೀರು ಪೂರೈಸಲಾಗುತ್ತಿದೆ. ಪ್ರತಿ ದಿನ 55 ಎಲ್‌ಪಿಸಿಡಿ ನೀರು ಸರಬರಾಜು ಮಾಡಲಾಗುತ್ತಿದೆ. ನಗರಸಭೆ ವ್ಯಾಪ್ತಿಯಲ್ಲಿ ಒಟ್ಟು 127 ಕೊಳವೆ ಬಾವಿಗಳಿವೆ. ಅವುಗಳಲ್ಲಿ 96 ಕೊಳವೆಬಾವಿಗಳಲ್ಲಿ ನೀರು ಸಿಗುತ್ತಿದೆ. ನಗರಸಭೆಯ 31 ವಾರ್ಡುಗಳಲ್ಲಿನ 12,850 ಮನೆಗಳಿಗೆ ಸುಮಾರು 15 ರಿಂದ 20 ದಿನಗಳಿಗೊಮ್ಮೆ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ನಗರದ ನೀರಿನ ಸಮಸ್ಯೆಯನ್ನು ಬಗೆಹರಿಸಲು ಇದೀಗ ಬೃಹತ್ ಯೋಜನೆ ಪ್ರಾರಂಭವಾಗುತ್ತಿದೆ.**

# ಖಗೋಳ ವಿಜ್ಞಾನ ಉಳಿಯಲಿ; ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ

• ಉದಯವಾಹಿನಿ, ಮೈಸೂರು

ಭಾರತಿ ಯೋಗಧಾಮ ಸಂಸ್ಥೆಯ ಅವರಣದಲ್ಲಿ ವೇದಶಾಲೆಯ ಸ್ಥಾಪನೆ ಶ್ಲಾಘನೀಯ. ಎಲ್ಲರೂ ಇಂತಹ ಕೆಲಸಗಳಿಗೆ ಸಹಕಾರ ನೀಡಬೇಕು ಎಂದು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು. ನಗರದ ಉತ್ತನಹಳ್ಳಿಯಲ್ಲಿರುವ ಭಾರತೀ ಯೋಗಧಾಮದಲ್ಲಿ ನಿರ್ಮಿಸಿರುವ 'ಜ್ಯೋತಿರ್ಧಾಮ ಜಂತರ್ ಮಂತರ್' ವೇದಶಾಲೆಯ ಮಧ್ಯಪದವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಾಡಿನಲ್ಲಿ ಇಂತಹ ಕೆಲಸಗಳು ಬಹಳ ವಿಶೇಷವಾಗಿ ಆಗಬೇಕು ಎಂದು ಆಶಿಸಿದರು. ಭಾರತಿ ಯೋಗಧಾಮದ ಸಂಸ್ಥಾಪಕ ಕೆ.ಎಲ್. ಶಂಕರನಾರಾಯಣ ಜೋಯಿಸ್, ಆಕಾಶಕಾಯಗಳನ್ನು ಅರಿಯುವ


ಉದಯವಾಹಿನಿ ಚಿತ್ರ

ಭಾರತೀಯ ಮಾದರಿಯ ವೇದಶಾಲೆಗಳು ಇರುವುದು ಪ್ರಧಾನವಾಗಿ ರಾಜಸ್ಥಾನದ ಜೈಪುರದಲ್ಲಿ. ಉಜ್ಜಯನಿ ಮತ್ತು ದೆಹಲಿಯಲ್ಲಿ.

> **ಭಾರತೀಯ ಖಗೋಳ ವಿದ್ಯೆ ಉಳಿಯಬೇಕು. ನಮ್ಮ ದೇಶದಲ್ಲಿ ಇಂತಹ ವಿದ್ಯೆಗಳನ್ನು ವ್ಯವಸ್ಥಿತವಾಗಿ ಬೆಳೆಸುವ ಕೆಲಸ ಆಗಬೇಕು. ಇಂತಹ ವಿದ್ಯೆ ಉಳಿಯಲು ಭಾರತಿ ಯೋಗಧಾಮದ ಜೊತೆ ಸರ್ಕಾರ ಕೈಜೋಡಿಸಬೇಕು.**
>
> **-ಶಂಕರಭಾರತಿ ಸ್ವಾಮೀಜಿ**
> **ಕೂಡಲಿ ಶೃಂಗೇರಿ ಮಠ**

ಚಿಕ್ಕಪ್ರಮಾಣದಲ್ಲಿ ಕಾಶಿಯಲ್ಲೂ, ಮಥುರಾದಲ್ಲೂ ಇದೆ. ಇವುಗಳ ಹೊರತಾಗಿ ಸದ್ಯ ಮೈಸೂರಿನ ಭಾರತಿ ಯೋಗಧಾಮದಲ್ಲಿ ಸ್ಥಾಪಿಸಲಾಗಿದೆ ಎಂದು ತಿಳಿಸಿದರು. ಜ್ಯೋತಿಷ ಶಾಸ್ತ್ರದ ಅಂಗಗಳಾದ ಗಣಿತ ಮತ್ತು ಖಗೋಳದ ಕುರಿತಾದ ಅಧ್ಯಯನ ಮತ್ತು ಸಂಶೋಧನೆಗಳಿಗೆ ಇಲ್ಲಿ ಅವಕಾಶವಿದೆ. ಈಗ ಮೈಸೂರಿನಲ್ಲಿಯೇ ಅದನ್ನು ಪುನರ್ದಶ್ರನ ಮಾಡಬಹುದಾಗಿದೆ. ಗ್ರಹ, ನಕ್ಷತ್ರ ಮೊದಲಾದ ಆಕಾಶಕಾಯಗಳ ನಿರ್ದಿಷ್ಟ ಸ್ಥಾನಗಳು, ಆಕಾಶದಲ್ಲಿ ಗೋಚರಿಸುವ ಗ್ರಹಣ, ವಿಷುವ, ಅಯನ ಇತ್ಯಾದಿಗಳನ್ನು ಇಲ್ಲಿನ ಯಂತ್ರಗಳ ಮೂಲಕ ಅರಿಯಬಹುದಾಗಿದೆ ಎಂದರು. ಪ್ರಕಾಶಾನಂದೇಂದ್ರ ಸರಸ್ವತೀ ಸ್ವಾಮೀಜಿ, ಜೈಪುರ ಜ್ಯೋತಿರ್ಧಾಮ ವೇದಶಾಲೆ ನಿರ್ದೇಶಕ ಮುಖೇಶ್ ಶರ್ಮ, ವಕೀಲ ಅಶೋಕ ಹಾರನಹಳ್ಳಿ, ಆಯುರ್ವೇದ ತಜ್ಞ ಡಾ. ಗಿರಿಧರ ಕಜೆ, ನಿವೃತ್ತ ಪ್ರಾಧ್ಯಾಪಕ ಪ್ರೊ. ಶ್ರೀನಿವಾಸ ಅಡಿಗ, ಜ್ಯೋತಿಷಿ ವೆಂಕಟೇಶ್ ಭಟ್, ಆಯುರ್ವೇದ ವೈದ್ಯ ಚಂದ್ರಶೇಖರ್ ಪಾಲ್ಗೊಂಡಿದ್ದರು.


# ಭಾಗ್ಯಲಕ್ಷ್ಮಿಯರಿಗೆ ಬಾಂಡ್ ಹಣ: 4433 ಫಲಾನುಭವಿಗಳು

## ಹೆಣ್ಣು ಮಕ್ಕಳಿಗೆ ಇದೀಗ 18 ವರ್ಷ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಪೂರಕ ದಾಖಲೆ

• ಉದಯವಾಹಿನಿ, ಚಾಮರಾಜನಗರ

ಹೆಣ್ಣು ಮಕ್ಕಳಲ್ಲಿ ಆತ್ಮವಿಶ್ವಾಸ ಮೂಡಿಸುವ ಹಾಗೂ ಪ್ರಾಪ್ತ ವಯಸ್ಸಿಗೆ ಬರುತ್ತಲೇ ಆರ್ಥಿಕವಾಗಿ ಅವರನ್ನು ಸ್ವಾವಲಂಬಿಯನ್ನಾಗಿಸುವ ನಿಟ್ಟಿನಲ್ಲಿ 2006-07ನೇ ಸಾಲಿನಲ್ಲಿ ಜಾರಿಯಾಗಿದ್ದ ಭಾಗ್ಯಲಕ್ಷ್ಮಿ ಯೋಜನೆ ಹಣ ಇದೀಗ ಪರಿಪಕ್ವಗೊಂಡು, ಫಲಾನುಭವಿಗಳ ಕೈ ಸೇರುತ್ತಿದೆ. ಅಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ತಮ್ಮ ಹೆಣ್ಣು ಮಗುವಿನ ಹೆಸರನ್ನು ನಮೂದಿಸಿದ್ದ ಕುಟುಂಬಕ್ಕೆ ಅದೇ ಹೆಣ್ಣು ಮಗುವಿನ ಹೆಸರಿಗೆ ಇದೀಗ ಒಂದು ಉತ್ತಮ ಮೊತ್ತ ಕೈಸೇರಿದೆ, ಸೇರುತ್ತಿದೆ. ಆಗ ಜನಿಸಿದ್ದ ಹೆಣ್ಣು ಮಗುವೀಗ 18 ವರ್ಷ ದಾಟಿದೆ. ಹೀಗಾಗಿ ಆಕೆಯ ಸೂಕ್ತ ವಿದ್ಯಾಭ್ಯಾಸ ಅಥವಾ ಇನ್ನಾವುದೇ ಉತ್ತಮ ಉದ್ದೇಶಕ್ಕಾಗಿ ಭಾಗ್ಯಲಕ್ಷ್ಮಿ ಹಣ ಅನುಕೂಲಕ್ಕೆ ಬರಲಿದೆ. ಹೆಣ್ಣು ಭ್ರೂಣಹತ್ಯೆ ತಡೆಗಟ್ಟಿ ಲಿಂಗಾನುಪಾತವನ್ನು ಸರಿದೂಗಿಸುವ ನಿಟ್ಟಿನಲ್ಲಿ 2006-07ನೇ ಸಾಲಿನಲ್ಲಿ ಆಗಿನ ಜೆಡಿಎಸ್-ಬಿಜೆಪಿ ಸಮ್ಮಿಶ್ರ ಸರಕಾರ ಭಾಗ್ಯಲಕ್ಷ್ಮಿ ಯೋಜನೆ ಜಾರಿಗೊಳಿಸಿತ್ತು.

ಅದರಂತೆ ಬಿಪಿಎಲ್ ಕುಟುಂಬಗಳಲ್ಲಿ ಜನಿಸುವ ಹೆಣ್ಣು ಮಕ್ಕಳಿಗೆ ಭಾಗ್ಯಲಕ್ಷ್ಮಿ ಯೋಜನೆಯಡಿ ಬಾಂಡ್‌ಗಳನ್ನು ಕೊಡಲಾಗುತ್ತಿತ್ತು. ದಂಪತಿಗೆ ಜನಿಸುವ ಮೊದಲ ಎರಡು ಹೆಣ್ಣು ಮಕ್ಕಳು ಈ ಯೋಜನೆಯಡಿ ಫಲಾನುಭವಿಗಳಾಗಿ ಆಯ್ಕೆಯಾಗಿದ್ದವು ಮೊದಲ ಮಗು ಹೆಣ್ಣಾಗಿ, ಎರಡನೇ ಮಗು ಗಂಡಾಗಿ, 3ನೇ ಮಗು ಹೆಣ್ಣಾದರೂ ಆ ಮಗುವೂ


ಉದಯವಾಹಿನಿ ಚಿತ್ರ

ಭಾಗ್ಯಲಕ್ಷ್ಮಿಯಾಗಿ ಯೋಜನೆ ವ್ಯಾಪ್ತಿಗೆ ಸೇರಿತ್ತು.

ಅದರಂತೆ ಯೋಜನೆ ಜಾರಿಗೊಂಡ ಮೊದಲ ವರ್ಷವೇ (2006-07) ಚಾಮರಾಜನಗರ ಜಿಲ್ಲೆಯಲ್ಲಿ 4941 ಹೆಣ್ಣು ಕಂದಮ್ಮಗಳ ಹೆಸರಿನಲ್ಲಿ ದಂಪತಿಗೆ ಭಾಗ್ಯಲಕ್ಷಿ ಬಾಂಡ್‌ಗಳನ್ನು ಕೊಡಲಾಗಿತ್ತು. ಆ ಮಗುವಿಗೆ 18 ವರ್ಷ ತುಂಬಿದ ಬಳಿಕ ಬಾಂಡ್‌ನ ಪರಿಪಕ್ವ ಮೊತ್ತ ಪಾವತಿಸುವ ಭರವಸೆಯನ್ನು ಅಂದಿನ ರಾಜ್ಯ ಸರಕಾರ ನೀಡಿತ್ತು. ಅದರಂತೆ 18 ವರ್ಷದ ಬಳಿಕ ಯಾವುದೇ ಸರಕಾರ ಅಧಿಕಾರದಲ್ಲಿದ್ದರೂ ಫಲಾನುಭವಿ ಹೆಣ್ಣು ಮಕ್ಕಳಿಗೆ ಬಾಂಡ್‌ನ ಪರಿಪಕ್ವ ಮೊತ್ತ ಪಾವತಿಸುವ ಖಚಿತ ಭರವಸೆಯು ದೊರೆತಿತ್ತು.

> **ಅದರಂತೆ 2006-07ನೇ ಸಾಲಿನಲ್ಲಿ ಜನಿಸಿದ್ದ ಹೆಣ್ಣು ಮಕ್ಕಳಿಗೆ ಇದೀಗ 18 ವರ್ಷ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಪೂರಕ ದಾಖಲೆಗಳನ್ನು ಪಡೆದು ಅವರ ಬ್ಯಾಂಕ್ ಖಾತೆಗೆ ಪರಿಪಕ್ವ ಮೊತ್ತ 30 ಸಾವಿರ ರೂ.ಅನ್ನು ಜಮೆ ಮಾಡಲಾಗುತ್ತಿದೆ. ಮೊದಲ ವರ್ಷ ನೋಂದಣಿಯಾಗಿದ್ದ 4941 ಹೆಣ್ಣು ಮಕ್ಕಳ ಪೈಕಿ ನಿಯಮದಂತೆ ಅರ್ಹರಾಗಿರುವ 4433 ಮಂದಿ ಹೆಣ್ಣು ಮಕ್ಕಳ ಬ್ಯಾಂಕ್ ಖಾತೆಗೆ ಪರಿಪಕ್ವ ಹಣ ಜೀವ ವಿಮಾ (ಎಲ್‌ಐಸಿ) ನಿಗಮದ ಮೂಲಕ ಜಮೆಯಾಗುತ್ತಿದೆ.**
>
> **- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು**

# ಏಡ್ಸ್ ರೋಗಿಗಳಿಗೆ ಚಿಕಿತ್ಸೆ ನೀಡುವಲ್ಲಿ ದಾಖಲೆ

• ಉದಯವಾಹಿನಿ, ಕುಣಿಗಲ್

ತಾಲ್ಲೂಕಿನ ವಾಣಿಗೆರೆ ದಯಾಭವನ ಸಮೂಹ ಸಂಸ್ಥೆಗಳ ಆಶ್ರಯದಲ್ಲಿ ಆರು ವರ್ಷಗಳ ಹಿಂದೆ ಪ್ರಾರಂಭವಾದ ದಯಾಕಿರಣ ದತ್ತು ಕೇಂದ್ರ ಅತಿ ಹೆಚ್ಚು ಅನಾಥ, ಪರಿತ್ಯಕ್ತ ಮತ್ತು ವಶಕ್ಕೊಪ್ಪಿಸಿದ ಮಕ್ಕಳ ಸಂರಕ್ಷಣೆ, ಪೋಷಣೆ ಮತ್ತು ದತ್ತು ನೀಡಿಕೆಯಲ್ಲೂ ದಾಖಲೆ ಮಾಡಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದೆ. ದಯಾಕಿರಣ ದತ್ತು ಕೇಂದ್ರ ರಾಜ್ಯದಲ್ಲೇ ಅತಿ ಹೆಚ್ಚು ಅನಾಥ ಮಕ್ಕಳ ಸಂರಕ್ಷಣೆ ಮಾಡುವುದರ ಜತೆಗೆ ಅತಿ ಹೆಚ್ಚು ಮಕ್ಕಳನ್ನು ರಾಜ್ಯ ಸೇರಿದಂತೆ ಇನ್ನಿತರ ರಾಜ್ಯಗಳ ಅರ್ಹ ದಂಪತಿಗಳಿಗೆ ದತ್ತು ನೀಡಿದೆ. ಅಂಗವಿಕಲ ಮಕ್ಕಳನ್ನು ವಿದೇಶಿ ದಂಪತಿಗಳಿಗೆ ದತ್ತು ನೀಡಿದೆ. ಕೇರಳ ಮೂಲದ ದಯಾಭವನ ಸಂಸ್ಥೆ 2003ರಲ್ಲಿ ತಾಲ್ಲೂಕಿನ ಕೊತ್ತಗೆರೆ ಹೋಬಳಿ ವಾಣಿಗೆರೆಯಲ್ಲಿ ಕಾರ್ಯಾರಂಭಮಾಡಿದ್ದು, ಏಡ್ಸ್ ರೋಗಿಗಳಿಗೆ ಚಿಕಿತ್ಸೆ ನೀಡುವಲ್ಲಿ ದಾಖಲೆಮಾಡಿ ರಾಜ್ಯದ ಗಮನಸೆಳೆದಿತ್ತು. 2019ರಲ್ಲಿ ಜಿಲ್ಲೆಯ ಪ್ರಥಮ ದತ್ತು ಕೇಂದ್ರವಾಗಿ ಕಾರ್ಯಾರಂಭ ಮಾಡಿತು.

ಸಂಸ್ಥೆಯು ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ, ಜಿಲ್ಲಾಡಳಿತ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಜಿಲ್ಲೆಯ ನಾನಾ ಭಾಗಗಳಲ್ಲಿ ಚಿಂತಾಜನಕ ಸ್ಥಿತಿಯಲ್ಲಿ ಅನಾಥವಾಗಿ ದೊರೆತ, ಅಶಕ್ತ ಪೋಷಕರಿಂದ ವಶಕ್ಕೊಪ್ಪಿಸಿದ 0-6 ವರ್ಷದ ಮಕ್ಕಳನ್ನು ಸಂರಕ್ಷಣೆ ಮತ್ತು ಪೋಷಣೆ ಮಾಡುತ್ತಿದೆ. ಇದುವರೆಗೂ 215 ಮಕ್ಕಳನ್ನು ಪೋಷಿಸಿದ್ದು, 125 ಮಕ್ಕಳನ್ನು ಅರ್ಹ ದಂಪತಿಗಳಿಗೆ ದತ್ತು ನೀಡಿದೆ. 14 ಮಕ್ಕಳನ್ನು ವಿದೇಶಿ ದಂಪತಿಗಳಿಗೆ ದತ್ತು ನೀಡಿರುವುದು ವಿಶೇಷ. ಎಲ್ಲಾ ಮಕ್ಕಳು ಅಂಗವಿಕಲರಾಗಿದ್ದು ದೈಹಿಕ ನ್ಯೂನ್ಯತೆ ಮತ್ತು ಬೆಳವಣಿಗೆಯಲ್ಲಿ ಕುಂಠಿತವಾಗಿರುವ ಮಕ್ಕಳನ್ನು ವಿದೇಶಿ ದಂಪತಿಗಳು ಬಯಸಿ ದತ್ತು ಪಡೆದಿದ್ದಾರೆ.


ಉದಯವಾಹಿನಿ ಚಿತ್ರ

### ತೊಟ್ಟಿಗೆ ಬೇಡ ತೊಟ್ಟಿಲಿಗೆ

**ನಾನಾ ಕಾರಣಗಳಿಂದ ಹೆತ್ತವರಿಗೆ ಮಗು ಬೇಡವಾಗುತ್ತದೆ. ಅಂತಹ ಮಕ್ಕಳನ್ನು ನಿರ್ದಾಕ್ಷಿಣ್ಯವಾಗಿ ಚರಂಡಿ, ಬೇಲಿ ಮಗ್ಗುಲು, ಕಸದ ತೊಟ್ಟಿ, ಪಾಳುಬಿದ್ದ ಬಾವಿ, ಮಂಟಪಗಳಲ್ಲಿ ಹಾಕಿ ಹೋಗುವ ಪ್ರಸಂಗಗಳು ಹೆಚ್ಚಾಗುತ್ತಿದ್ದು. ಸಂಸ್ಥೆಯವರು ಬೇಡವಾದ ಮಕ್ಕಳನ್ನು ತೊಟ್ಟಿಗೆ ಬೇಡ ತೊಟ್ಟಿಲಿಗೆ ಹಾಕಿ ಎಂಬ ಜಾಗೃತಿ ಕಾರ್ಯಕ್ರಮ ಮಾಡಿ ಸಂಸ್ಥೆ ಕಚೇರಿ ಸೇರಿದಂತೆ ಜಿಲ್ಲಾಸ್ಪತ್ರೆಯಲ್ಲಿ ಮಮತೆಯ ತೊಟ್ಟಿಲು ಇಟ್ಟಿದ್ದಾರೆ. ಜಿಲ್ಲಾಸ್ಪತ್ರೆಯಲ್ಲಿ ಒಂದು ಮತ್ತು ದಯಾಕಿರಣ ದತ್ತು ಕೇಂದ್ರದ ತೊಟ್ಟಿಲಿಗೆ 6 ಮಕ್ಕಳನ್ನು ತಂದು ಹಾಕಿದ್ದಾರೆ.**

# ಮಿನಿ ನ್ಯೂಸ್

## ಸುತ್ತೂರು ಜಾತ್ರೆ ಮಹೋತ್ಸವದ ಪ್ರಚಾರ ರಥಕ್ಕೆ ಸ್ವಾಗತ

• ಉದಯವಾಹಿನಿ, ಪಿರಿಯಾಪಟ್ಟಣ

ಸುತ್ತೂರು ಶಿವರಾತ್ರೀಶ್ವರ ಶಿವಯೋಗಿಗಳ ಸಮಾಜಸೇವಾ ಕಾರ್ಯಗಳು ಇಂದಿನ ಯುವಕರಿಗೆ ಮಾದರಿಯಾಗಿವೆ ಎಂದು ವೀರಶೈವ ಮಹಾಸಭಾ ತಾಲ್ಲೂಕು ಘಟಕದ ಅಧ್ಯಕ್ಷ ಎಚ್.ಜಿ.ಪರಮೇಶ್ ತಿಳಿಸಿದರು. ಪಟ್ಟಣಕ್ಕೆ ಆಗಮಿಸಿದ ಸುತ್ತೂರು ಜಾತ್ರಾ ಮಹೋತ್ಸವದ ಪ್ರಚಾರ ರಥಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ನಂಜನಗೂಡು ತಾಲ್ಲೂಕಿನ ಸುತ್ತೂರು ಶ್ರೀಕ್ಷೇತ್ರದಲ್ಲಿ ಜ.15 ರಿಂದ ಜ.20 ರವರೆಗೆ ಜಾತ್ರೆ ನಡೆಯಲಿದೆ. ಇದು ಆದಿ ಜಗದ್ಗುರು ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವವಾಗಿದ್ದು, ಆರು ದಿನಗಳ ಕಾಲ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸ್ಪರ್ಧಾ ಕಾರ್ಯಕ್ರಮಗಳು ಜರುಗಲಿವೆ. ಕೇವಲ ಜಾತ್ರೆ ಆಗಿರದೆ ಸಾಂಸ್ಕೃತಿಕ, ಧಾರ್ಮಿಕ ಸಮ್ಮೇಳನವಾಗಿದೆ ಎಂದು ತಿಳಿಸಿದರು.

ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಶಿವಯೋಗ ಮಾತನಾಡಿ, ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಜನರಿಗೆ ಭಕ್ತಿಯ ಜೊತೆಗೆ ಜ್ಞಾನವು ಲಭಿಸಲಿದ್ದು, ಶರಣ ಸಂಸ್ಕೃತಿಯ ಅನಾವರಣದ ಜೊತೆಗೆ ಸಾಹಿತ್ಯ, ಕೃಷಿ, ನಾಟಕ ಮುಂತಾದ ವಿಚಾರಗಳ ಬಗ್ಗೆ ತಿಳಿದುಕೊಳ್ಳಲು ಸಹಕಾರಿಯಾಗಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಜ್ಞಾನಾರ್ಜನೆ ಹೊಂದಬೇಕು ಎಂದು ತಿಳಿಸಿದರು.

## ಜಿಲ್ಲೆಯಲ್ಲಿ ರೌಡಿ ಮನೆಗಳ ಮೇಲೆ 23 ಪೊಲೀಸರ ದಾಳಿ

• ಉದಯವಾಹಿನಿ, ಕೆಜಿಎಫ್

ಚುಮು ಚುಮು ಚಳಿಯಲ್ಲಿ ಬೆಳ್ಳಂಬೆಳಗ್ಗೆ ಕೆಜಿಎಫ್ ಜಿಲ್ಲೆಯಲ್ಲಿರುವ ರೌಡಿಗಳ ಮನೆ ಮೇಲೆ 23 ಪೊಲೀಸ್ ತಂಡ ದಾಳಿ ನಡೆಸಿ ತಪಾಸಣೆ ನಡೆಸಿದವು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಾಂಶು ರಜಪೂತ್ ಅವರ ನೇತೃತ್ವದಲ್ಲಿ ನಡೆದ ದಾಳಿಯಲ್ಲಿ ಡಿವೈಎಸ್‌ಪಿ ಲಕ್ಷ್ಮಿ, 15 ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹಾಗೂ 120 ಪೊಲೀಸ್ ಸಿಬ್ಬಂದಿ ಭಾಗವಹಿಸಿದ್ದರು. ರಾಬರ್ಟ್‌ಸನ್ ಪೇಟೆ, ಆಂಡರ್ಸನ್ ಪೇಟೆ, ಬೆಮಲ್ ನಗರ ಮತ್ತು ಬಂಗಾರಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದಾಳಿ ನಡೆಯಿತು. ಪೊಲೀಸರು 23 ರೌಡಿಶೀಟರ್‌ಗಳ ಮನೆ ತಪಾಸಣೆ ನಡೆಸಿದರು. ಕುಖ್ಯಾತ ರೌಡಿ ಅಭಿ ಮನೆಯಲ್ಲಿ ಹರಿತವಾದ ಆಯುಧ ಪತ್ತೆಯಾಗಿದ್ದು, ಆತನನ್ನು ಬಂಗಾರಪೇಟೆ ಪೊಲೀಸರು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದಾರೆ.

ಉರಿಗಾಂ ಪೊಲೀಸ್ ಠಾಣೆ ವ್ಯಾಪ್ತಿಯ ರೌಡಿ ಬೋಥ್ ಎಂಬಾತನ ಮನೆಯಲ್ಲಿ ದಾಳಿ ನಡೆಸಿದಾಗ ಗಾಂಜಾ ಮತ್ತು ಇತರ ಮಾದಕ ವಸ್ತುಗಳು ಪತ್ತೆಯಾಗಿದ್ದು, ಆತನ ವಿರುದ್ಧ ಪ್ರಕರಣ ದಾಖಲಾಗಿದೆ. ಈ ಹಿಂದೆ ರೌಡಿ ಕೃತ್ಯ ಎಸಗಿದವರಿಗೆ ಮತ್ತು ಅವರ ಕುಟುಂಬದವರಿಗೆ ರೌಡಿ ಚಟುವಟಿಕೆಗಳಲ್ಲಿ ಭಾಗವಹಿಸಬಾರದು. ಇಂತಹ ಕೃತ್ಯಗಳಿಗೆ ಪ್ರೋತ್ಸಾಹ ನೀಡಬಾರದು ಎಂದು ಎಚ್ಚರಿಕೆ ನೀಡಲಾಯಿತು. ಪದೇ ಪದೇ ಕಾನೂನು ಉಲ್ಲಂಘನೆ ಮಾಡುವ ರೌಡಿಗಳನ್ನು ಗಡಿಪಾರು ಮಾಡಲಾಗುವುದು.

## ಅಭಿವೃದ್ಧಿ ವೇದಿಕೆ, ತಾಲ್ಲೂಕು ಅಭಿವೃದ್ಧಿ ಚಿಂತನಾ ಮಂಥನ

• ಉದಯವಾಹಿನಿ, ಪಾವಗಡ

ತಾಲ್ಲೂಕಿನ ರೈತರು, ಸಾಮಾನ್ಯ ಜನರಿಗೆ ಪ್ರಯೋಜನಕಾರಿಯಾಗುವ ಯೋಜನೆಗಳ ಕುರಿತು ವಿವರ ವರದಿ ಸಿದ್ಧಪಡಿಸಿ ಮುಖ್ಯಮಂತ್ರಿ ಸೇರಿದಂತೆ ಇಲಾಖೆಗಳ ಗಮನಕ್ಕೆ ತರಬೇಕು ಎಂದು ರಾಜ್ಯ ಯೋಜನಾ ಸಮಿತಿ ಸದಸ್ಯ ಮಂಜುನಾಥ್ ತಿಳಿಸಿದರು. ಪಟ್ಟಣದಲ್ಲಿ ತಾಲ್ಲೂಕು ಅಭಿವೃದ್ಧಿ ವೇದಿಕೆ, ತಾಲ್ಲೂಕು ಅಭಿವೃದ್ಧಿ ಚಿಂತನಾ ಮಂಥನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಿಎಂ ಸಿದ್ದರಾಮಯ್ಯ ಅವರು ಮುಂದಿನ ಬಜೆಟ್‌ನಲ್ಲಿ ಎಲ್ಲಾ ಪ್ರದೇಶದ ಸಮಸ್ಯೆಗಳನ್ನು ಒಳಗೊಳ್ಳಲು ಜಿಲ್ಲಾವ್ಯಾಪ್ತಿ ಅಧಿಕಾರಿಗಳಿಗೆ ಎರಡು-ಮೂರು ತಿಂಗಳು ಹಿಂದೆ ಪತ್ರ ಬರೆದರೂ, ಇದುವರೆಗೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಕುರಿ ಸಾಕಾಣಿಕೆದಾರರಿಗೆ ಶೆಡ್ ನಿರ್ಮಾಣಕ್ಕೆ ಅನುದಾನ, ಬ್ಯಾಂಕ್ ಸಾಲ, ಸಬ್ಸಿಡಿ ನೀಡುವ ಪ್ರಸ್ತುತ ಸರ್ಕಾರದ ಯೋಜನೆಗೆ ಪರ್ಯಾಯವಾಗಿ ಕುರಿ ಸಾಕಾಣಿಕೆದಾರರನ್ನು ನೇರವಾಗಿ ಗುರುತಿಸಿ ಶೆಡ್‌ಗೆ ಬದಲಾಗಿ ನೇರ ಅನುದಾನ ನೀಡಬೇಕು. ಕೃಷಿಗೆ ಮಾತ್ರವಲ್ಲ, ಕುರಿ-ಮೇಕೆಗಳಿಗೂ ಬೆಳೆ ನಷ್ಟ ಪರಿಹಾರ ಸಿಗುವ ವ್ಯವಸ್ಥೆಯನ್ನು ಸರ್ಕಾರ ರೂಪಿಸಬೇಕು ಎಂದರು.

ಸಂಶೋಧನಾ ವಿಜ್ಞಾನಿ ಎಸ್.ಆರ್. ಭಾರ್ಗವಿ, ಪಾವಗಡ ಪ್ರದೇಶ ದೇಶಕ್ಕೆ ಹೆಸರಾಗಿರುವ ಸೋಲಾರ್ ಪಾರ್ಕ್ ನಿರ್ಮಾಣದ ಹಿಂದೆ ನೀರಿನ ಕೊರತೆ ಒಂದು ಪ್ರಮುಖ ಕಾರಣ. ಇಲ್ಲಿ ಶಾಶ್ವತ ನೀರು ಇದ್ದರೆ ಯಾವುದೇ ರೈತನು ಸೋಲಾರ್‌ಗೆ ಜಮೀನು ಕೊಡುವ ಸ್ಥಿತಿ ಇರಲಿಲ್ಲ. 30 ವರ್ಷದ ಕರಾರಿನ ನಂತರ ಆ ಭೂಮಿಯನ್ನು ಪುನಃ ಕೃಷಿಗೆ ಬಳಸಲಾಗದ ಸ್ಥಿತಿ ಇದೆ.

ಅಂತರಾಳದಿಂದ..
EDITORIAL

# ದ್ವೇಷಾಪರಾಧ ವಿರುದ್ಧದ ಕಾನೂನಿಗೆ ಬೆರ್ಚಪ್ಪನ ಸ್ಥಿತಿ ಬಾರದಿರಲಿ

ದ್ವೇಷ ಭಾಷಣ, ದ್ವೇಷ ಅಪರಾಧಗಳ ಪ್ರಸರಣ, ಸಾಮಾಜಿಕ ಬಹಿಷ್ಕಾರ ಹೇರುವಿಕೆಗಳನ್ನು ಶಿಕ್ಷಾರ್ಹ ಅಪರಾಧವಾಗಿ ಪರಿಗಣಿಸುವ ಮಹತ್ವದ ಎರಡು ಪ್ರತ್ಯೇಕ ವಿಧೇಯಕಗಳಿಗೆ ರಾಜ್ಯ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ. ಈ ವಿಧೇಯಕಗಳು ಬೆಳಗಾವಿ ಅಧಿವೇಶನದಲ್ಲಿ ಮಂಡನೆಯಾಗುವುದಕ್ಕೆ ಸಿದ್ಧತೆ ನಡೆದಿದೆ. ವಿಧೇಯಕಗಳ ಪ್ರಕಾರ ಧಾರ್ಮಿಕ, ಜನಾಂಗೀಯ, ಜಾತಿ ಅಥವಾ ಸಮುದಾಯ, ಲಿಂಗ, ಲೈಂಗಿಕ ದೃಷ್ಟಿಕೋನ, ಜನ್ಮಸ್ಥಳ, ಭಾಷೆ, ವಾಸಸ್ಥಳ, ಅಂಗವಿಕಲತೆಯ ವಿರುದ್ಧ ದ್ವೇಷ ಬಿತ್ತುವುದು, ಅವುಗಳನ್ನು ಪ್ರಚಾರ ಮಾಡುವುದು ಅಪರಾಧವಾಗಿದೆ. ದತ್ತಾಂಶ ಸಂದೇಶ, ಪತ್ರ, ಚಿತ್ರಗಳು, ಧ್ವನಿ ಮತ್ತು ಕಂಪ್ಯೂಟರ್ ತಂತ್ರಾಂಶಗಳನ್ನು ದ್ವೇಷಕ್ಕೆ ಬಳಸುವುದೂ ಶಿಕ್ಷಾರ್ಹವಾಗುತ್ತವೆ. ದ್ವೇಷ ಅಪರಾಧ ಎಸಗಿದವರಿಗೆ ಒಂದು ವರ್ಷದಿಂದ ಏಳು ವರ್ಷದವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು 50,000 ರೂ. ದಂಡ ವಿಧಿಸಲು ಅವಕಾಶವಿದೆ. ಅಪರಾಧವನ್ನು ಪುನರಾವರ್ತಿಸಿದರೆ ಎರಡು ವರ್ಷದಿಂದ 10 ವರ್ಷದವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ಒಂದು ಲಕ್ಷ ರೂ. ದಂಡ ವಿಧಿಸಬಹುದಾಗಿದೆ. ಹಾಗೆಯೇ ಯಾವುದೇ ವ್ಯಕ್ತಿ, ಕುಟುಂಬ, ಇಲ್ಲವೇ ಕುಟುಂಬದ ಸದಸ್ಯರಿಗೆ ಸಾಮಾಜಿಕವಾಗಿ ಬಹಿಷ್ಕಾರ ಹೇರುವುದೂ ಮತ್ತೊಂದು ವಿಧೇಯಕದ ಪ್ರಕಾರ ಅಪರಾಧವಾಗುತ್ತದೆ. ಸಾಮಾಜಿಕ ಬಹಿಷ್ಕಾರಕ್ಕೆ ನೆರವು, ಪ್ರಚೋದನೆ ನೀಡಿದರೆ ಮೂರು ವರ್ಷದವರೆಗೆ ಜೈಲು ಶಿಕ್ಷೆ, ಒಂದು ಲಕ್ಷ ರೂ. ದಂಡ ಅಥವಾ ಎರಡನ್ನೂ ವಿಧಿಸಲು ಅವಕಾಶ ಕಲ್ಪಿಸಲಾಗಿದೆ. ಸಂಪುಟ ಸಭೆಯು ಈ ವಿಧೇಯಕಗಳಿಗೆ ಅನುಮೋದನೆ ನೀಡಿದ ಬೆನ್ನಿಗೆ ಕೆಲವು ಕುಂಬಳ ಕಾಯಿ ಕಳ್ಳರು ಹೆಗಲು ಮುಟ್ಟಿ ನೋಡಿಕೊಳ್ಳುತ್ತಿದ್ದಾರೆ. ಆ ಮೂಲಕ, ದ್ವೇಷ ಭಾಷಣಗಳ ಹಿಂದಿರುವುದು ಹಿಂದೂ ಸಂಘಟನೆಗಳು ಮತ್ತು ಹಿಂದೂ ಮುಖಂಡರು ಎಂದು ಅವರು ಜಗಜ್ಜಾಹೀರು ಮಾಡಿದಂತಾಗಿದೆ. ಹಿಂದೂ ಧರ್ಮ ಎಂದಿಗೂ ತನ್ನನ್ನು ದ್ವೇಷ ಸಾಧನೆಯ ಹೆಸರಿನಲ್ಲಿ ಗುರುತಿಸಿಕೊಂಡಿಲ್ಲ. ವಿದ್ವೇಷಗಳನ್ನು ಹರಡುವವರು ಹಿಂದೂ ನಾಯಕರು ಆಗುವುದಕ್ಕೆ ಸಾಧ್ಯವೂ ಇಲ್ಲ. ಹಿಂದೂ ಧರ್ಮದ ಮಹತ್ವದ ಸುಧಾರಕರೆಂದು ಗುರುತಿಸಿಕೊಂಡಿರುವ ಸ್ವಾಮಿ ವಿವೇಕಾನಂದ, ನಾರಾಯಣ ಗುರುಗಳಂತಹ ನಾಯಕರು ಸದ್ವಿವೇಕಗಳನ್ನು ಹರಡುತ್ತಾ ಹಿಂದೂಧರ್ಮೀಯರನ್ನು ಸಂಘಟಿಸಿದರು. ಹಿಂದೂ ತತ್ವಸಿದ್ಧಾಂತಗಳನ್ನು ಆ ಮೂಲಕವೇ ವಿಶ್ವಮಾನ್ಯವಾಗಿಸಿದರು. ಇದೀಗ ನಮ್ಮ ನಡುವೆ ಹಿಂದೂ ನಾಯಕರೆಂದು ಸ್ವಯಂ ಘೋಷಿಸಿಕೊಂಡು ಓಡಾಡುತ್ತಿರುವ ಪ್ರಮೋದ್ ಮುತಾಲಿಕ್‌ನಂತಹವರು ಧರ್ಮದ ಹೆಸರಿನಲ್ಲಿ ಜನರ ಮನಸ್ಸನ್ನು ಒಡೆಯುವ, ದೇಶವನ್ನು ವಿಚ್ಛಿದ್ರಗೊಳಿಸುವ ಕಾಯಕದಲ್ಲಿ ತೊಡಗಿದವರಾಗಿದ್ದಾರೆ. ಇವರಿಂದ ಅತಿ ಹೆಚ್ಚು ಧಕ್ಕೆಯಾಗಿರುವುದು ಹಿಂದೂ ಧರ್ಮಕ್ಕೆ ಇವರು ತಮ್ಮ ವಿಧ್ವಂಸಕ ಕೃತ್ಯಗಳಿಗೆ ಹಿಂದೂ ಧರ್ಮದ ಹೆಸರನ್ನು ದುರ್ಬಳಕೆ ಮಾಡುತ್ತಿದ್ದಾರೆ. ಆದುದರಿಂದಲೇ ಇವರಿಗೆ ದ್ವೇಷ ಅಪರಾಧಗಳನ್ನು ತಡೆಯುವ ಕಾನೂನು ಜಾರಿಗೆ ಬರುವುದು ಬೇಡವಾಗಿದೆ.

> **ದ್ವೇಷ ಭಾಷಣವನ್ನೇ ತನ್ನ ರಾಜಕೀಯ ಬದುಕಿನ ಬಂಡವಾಳ ಮಾಡಿಕೊಂಡಿರುವ ಪ್ರಮೋದ್ ಮುತಾಲಿಕ್‌ನಂತಹ ಸಂಘ ಪರಿವಾರ ನಾಯಕರು ಈ ವಿಧೇಯಕದ ವಿರುದ್ಧ ದ್ವೇಷ ಸಾಧಿಸಲು ಮುಂದಾಗಿದ್ದಾರೆ. ಮಸೂದೆ ಜಾರಿಗೊಳಿಸುವ ಮೂಲಕ ಹಿಂದೂ ಸಂಘಟನೆಗಳು ಮತ್ತು ಹಿಂದೂ ಮುಖಂಡರನ್ನು ಹತ್ತಿಕ್ಕುವ ಷಡ್ಯಂತ್ರ ನಡೆಯುತ್ತಿದೆ ಎಂದು ಅವರು ಕೆಂಡ ಕಾರಿದ್ದಾರೆ. ಮಸೂದೆ ಮಂಡನೆಯಾದರೆ ಅದರ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆ ನಡೆಸುವುದಾಗಿಯೂ ಎಚ್ಚರಿಕೆ ನೀಡಿದ್ದಾರೆ.**

ವಿಧೇಯಕ ಜಾರಿಗೊಂಡಾಕ್ಷಣ ದ್ವೇಷ ಭಾಷಣ ಮಾಡುವವರೆಲ್ಲರಿಗೂ ಶಿಕ್ಷೆಯಾಗುತ್ತದೆ ಎಂದು ಭಾವಿಸಿದರೆ ಅದು ನಮ್ಮ ಮೂರ್ಖತನ. ಕಾನೂನುಗಳಿದ್ದರೆ ಸಾಕಾಗುವುದಿಲ್ಲ ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಇಚ್ಛಾಶಕ್ತಿಯೂ ಕಾನೂನು ವ್ಯವಸ್ಥೆಗಿರಬೇಕಾಗುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ಯಾವನೋ ಹೆಸರು, ವಿಳಾಸ ಇಲ್ಲದ ಯುವಕನೊಬ್ಬ ದ್ವೇಷ ಹರಡುವ ಸ್ಟೇಟಸ್ ಹಾಕಿದರೆ ಈ ಕಾನೂನನ್ನು ಬಳಸಿ ಆತನ ವಿರುದ್ಧ ಸರಕಾರ ಕಠಿಣ ಕ್ರಮ ತೆಗೆದುಕೊಳ್ಳಬಹುದು. ಆದರೆ ಇದೇ ಸಂದರ್ಭದಲ್ಲಿ ಹಿಂದುತ್ವವಾದಿ ನಾಯಕನೆಂದು ಕರೆಸಿಕೊಂಡ ವ್ಯಕ್ತಿ ಸಾರ್ವಜನಿಕ ಮೈದಾನದಲ್ಲಿ ಸಾವಿರಾರು ಜನರನ್ನು ಸೇರಿಸಿ ದ್ವೇಷದ ಕರೆಗಳನ್ನು ನೀಡಿದಾಗ ನಮ್ಮ ವ್ಯವಸ್ಥೆ ಎರಡು ಕಿವಿಗಳನ್ನು ಮುಚ್ಚಿಕೊಂಡಿರುತ್ತದೆ. ಆತನ ಮೇಲೆ ಕ್ರಮ ತೆಗೆದುಕೊಂಡರೆ, ಸಮಾಜದ ಶಾಂತಿ ಕೆಡುವ ಅಪಾಯವಿದೆ ಎನ್ನುವ ಕುಂಟು ನೆಪ ತೆಗೆಯುತ್ತದೆ. ಕೋಮುದ್ವೇಷ ರಾಜಕಾರಣಕ್ಕೆ ಪೊಲೀಸ್ ಇಲಾಖೆಯ ಕೊಡುಗೆ ಕಡಿಮೆಯಿಲ್ಲ. ತಳಮಟ್ಟದಲ್ಲಿ ಕೆಲಸ ಮಾಡುವ ಪೊಲೀಸ್ ಸಿಬ್ಬಂದಿಗೆ ಸಂಘ ಪರಿವಾರ ಜೊತೆಗೆ ಅನೈತಿಕ ಸಂಬಂಧವಿದೆ ಎನ್ನುವ ಆರೋಪ ಇಂದು ನಿನ್ನೆಯದಲ್ಲ. ಹೀಗಿರುವಾಗ, ಇಂತಹ ಸಿಬ್ಬಂದಿಯಿಂದ ಕಾನೂನಿನ ಪರಿಣಾಮಕಾರಿ ಅನುಷ್ಠಾನ ಸಾಧ್ಯವಾಗಬಹುದೇ ಎನ್ನುವ ಅನುಮಾನ ಉಳಿದೇ ಬಿಡುತ್ತದೆ. ಸಾಮಾಜಿಕ ಬಹಿಷ್ಕಾರ ವಿರುದ್ಧದ ಕಾನೂನಿನ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಸಾಮಾಜಿಕ ಬಹಿಷ್ಕಾರದ ಹಿಂದೆ ಜಾತಿ ವ್ಯವಸ್ಥೆ ಕೆಲಸ ಮಾಡುತ್ತಾ ಬಂದಿದೆ.

ದಲಿತರೊಳಗಿನ ಸಣ್ಣ ಪುಟ್ಟ ಸಮುದಾಯಗಳು ಒಬ್ಬರ ವಿರುದ್ಧ ಇನ್ನೊಬ್ಬರು ಬಹಿಷ್ಕಾರ ಘೋಷಿಸಿದರೆ ಈ ನೂತನ ಕಾನೂನು ಹುಲಿಯಂತೆ ಎಗರಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬಹುದು. ಆದರೆ, ಈ ಬಹಿಷ್ಕಾರ ಅಥವಾ ಅಸ್ಪೃಶ್ಯ ಆಚರಣೆಯಲ್ಲಿ ಬಲಾಢ್ಯ ಜಾತಿಗಳು ಶಾಮೀಲಾದರೆ ಅವರ ವಿರುದ್ಧ ಎಷ್ಟರಮಟ್ಟಿಗೆ ಯೋಗವಾಗಬಹುದು ಪೊಲೀಸರು ಈ ಸಂದರ್ಭದಲ್ಲಿ ಕಾನೂನನ್ನು ಅನುಷ್ಠಾನಗೊಳಿಸಲು ಅದೇ ಆಸಕ್ತಿಯನ್ನು ಪ್ರದರ್ಶಿಸಬಹುದೆ? ಕಾನೂನಿನ ಅನುಷ್ಠಾನದಲ್ಲಿ ಈ ತಾರತಮ್ಯಗಳು ಉಂಟಾದರೆ ಇಂತಹ ವಿಧೇಯಕಗಳು ಇದ್ದೂ ಪ್ರಯೋಜನವೇನು? ಗದ್ದೆಯ ಬೆಳೆಯ ನಡುವೆ ನಿಲ್ಲಿಸಿದ 'ಬೆರ್ಚಪ್ಪನಂತೆ ಸಣ್ಣ ಪುಟ್ಟ ಕಾಗೆಗಳನ್ನಷ್ಟೇ ಇದು ಓಡಿಸಿ, ಎರಗುವ ರಣಹದ್ದುಗಳ ಮುಂದೆ ಅಸಹಾಯಕವಾಗಬಹುದು.

# ಅರ್ಹರ ಖಾತೆಗೆ ತಲಾ 30 ಸಾವಿರ ರೂ. ಜಮೆ

## 2006–07ನೇ ಸಾಲಿನಲ್ಲಿ ಜಾರಿಯಾಗಿದ್ದ ಯೋಜನೆ | ಮೊದಲ ಅವಧಿ ನೋಂದಾಯಿತರಿಗೆ ಪರಿಪಕ್ವ ಮೊತ್ತ

ಪರಮೇಶ.ಡಿ.ವಿಳಸಪೂರೆ

• **ಉದಯವಾಹಿನಿ, ಬೀದರ್**

ಹೆಣ್ಣು ಮಕ್ಕಳಲ್ಲಿ ಆತ್ಮವಿಶ್ವಾಸ ಮೂಡಿಸುವ ಹಾಗೂ ಪ್ರಾಪ್ತ ವಯಸ್ಸಿಗೆ ಬರುತ್ತಲೇ ಆರ್ಥಿಕವಾಗಿ ಅವರನ್ನು ಸ್ವಾವಲಂಬಿಯನ್ನಾಗಿಸುವ ನಿಟ್ಟಿನಲ್ಲಿ 2006–07ನೇ ಸಾಲಿನಲ್ಲಿ ಜಾರಿಯಾಗಿದ್ದ ಭಾಗ್ಯಲಕ್ಷ್ಮಿ ಯೋಜನ ಹಣ ಇದೀಗ ಪರಿಪಕ್ವಗೊಂಡು ಫಲಾನುಭವಿಗಳ ಕೈ ಸೇರುತ್ತಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ತಮ್ಮ ಹೆಣ್ಣು ಮಗುವಿನ ಹೆಸರನ್ನು ನಮೂದಿಸಿದ್ದ ಕುಟುಂಬಕ್ಕೆ ಅದೇ ಹೆಣ್ಣು ಮಗುವಿನ ಹೆಸರಿಗೆ ಇದೀಗ ಒಂದು ಉತ್ತಮ ಮೊತ್ತ ಕೈಸೇರಿದೆ, ಸೇರುತ್ತಿದೆ.

ಆಗ ಜನಿಸಿದ ಹೆಣ್ಣು ಮಗುವಿಗೆ 18 ವರ್ಷ ದಾಟಿದೆ, ಹಿಗಾಗಿ ಆಕೆಯ ಸೂಕ್ತ ವಿದ್ಯಾಭ್ಯಾಸ ಅಥವಾ ಇನ್ನಾವುದೇ ಉದ್ದೇಶಕ್ಕಾಗಿ ಭಾಗ್ಯಾಲಕ್ಷ್ಮೀ ಹಣ ಅನುಕೂಲಕ್ಕೆ ಬರಲಿದೆ. ಹೆಣ್ಣು ಭ್ರೂಣಹಕ್ಕೆ ತಡೆಗಟ್ಟಿ ಲಿಂಗಾನುಪಾತವನ್ನು ಸರಿದೂಗಿಸುವ ನಿಟ್ಟಿನಲ್ಲಿ 2006–07ನೇ ಸಾಲಿನಲ್ಲಿ ಆಗಿನ ಜೆಡಿಎಸ್–ಬಿಜೆಪಿ ಸಮ್ಮಿಶ್ರ ಸರಕಾರ ಭಾಗ್ಯಲಕ್ಷ್ಮಿ ಯೋಜನೆ ಜಾರಿಗೊಳಿಸಿತ್ತು.

ಅದರಂತೆ ಬಿಪಿಎಲ್ ಕುಟುಂಬಗಳಲ್ಲಿ ಜನಿಸಿರುವ ಹೆಣ್ಣು ಮಕ್ಕಳಿಗೆ ಭಾಗ್ಯಲಕ್ಷ್ಮಿ ಯೋಜನೆಯಡಿ ಬಾಂಡ್‌ಗಳನ್ನು ಕೊಡಲಾಗುತ್ತಿತ್ತು. ದಂಪತಿಗೆ ಜನಿಸುವ ಮೊದಲ ಎರಡು ಹೆಣ್ಣು ಮಕ್ಕಳು ಈ ಯೋಜನೆಯಡಿ ಫಲಾನುಭವಿಗಳಾಗಿ ಆಯ್ಕೆಯಾಗಿದ್ದವು. ಮೊದಲ ಮಗು ಹೆಣ್ಣಾಗಿ, ಎರಡನೇ ಮಗು ಗಂಡಾಗಿ, ಮೂರನೇ ಮಗು ಹೆಣ್ಣಾದರೂ ಆ ಮಗುವೂ ಭಾಗ್ಯಲಕ್ಷ್ಮಿಯಾಗಿ ಯೋಜನೆ ವ್ಯಾಪ್ತಿಗೆ ಸೇರಿತ್ತು. ಅದರಂತ ಯೋಜನೆ ಜಾರಿಗೊಂಡ ಮೊದಲ ವರ್ಷವೇ (2006–07) ಬೀದರ್ ಜಿಲ್ಲೆಯಲ್ಲಿ 7688 ಹೆಣ್ಣು ಕಂದಮ್ಮಗಳ ಹೆಸರಿನಲ್ಲಿ ದಂಪತಿಗೆ ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ಕೊಡಲಾಗಿತ್ತು. ಆ ಮಗುವಿಗೆ 18 ವರ್ಷ ತುಂಬಿದ ಬಳಿಕ ಬಾಂಡ್‌ನ ಪರಿಪಕ್ವ ಮೊತ್ತ ಪಾವತಿಸುವ ಭರವಸೆಯನ್ನು ಅಂದಿನ ರಾಜ್ಯ ಸರ್ಕಾರ ನೀಡಿತು. ಅದವಾನ 18 ವರ್ಷದ ಬಳಿಕ ಯಾವುದು ಸರಕಾರ ಅಧಿಕಾರದಲ್ಲಿದ್ದರೂ ಫಲಾನುಭವಿ ಹೆಣ್ಣು ಮಕ್ಕಳಿಗೆ ಬಾಂಡ್‌ನ ಪರಿಪಕ್ಕ ಮೊತ್ತ ಪಾವತಿಸುವ ಖಚಿತ ಭರವಸೆಯು ದೊರೆತಿತ್ತು. ಅದರಂತೆ 2006–07ನೇ ಸಾಲಿನಲ್ಲಿ ಜನಿಸಿದ್ದ ಹೆಣ್ಣು ಮಕ್ಕಳಿಗೆ ಇದೀಗ 18 ವರ್ಷ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಪೂರಕ ದಾಖಲೆಗಳನ್ನು ಪಡೆದು ಅವರ ಬ್ಯಾಂಕ್ ಖಾತೆಗೆ ಪರಿಪಕ್ವಮೊತ್ತ 30 ಸಾವಿರ ರೂ.ಅನ್ನು ಜಮಾ ಮಾಡಲಾಗುತ್ತಿದೆ. ಮೊದಲ ವರ್ಷ ನೋಂದಣಿಯಾಗಿದ್ದ 7688 ಹೆಣ್ಣು ಮಕ್ಕಳ ಪೈಕಿ ನಿಯಮದಂತೆ ಅರ್ಹರಾಗಿರುವ 5727 ಮಂದಿ ಹೆಣ್ಣು ಮಕ್ಕಳ ಬ್ಯಾಂಕ್ ಖಾತೆಗೆ ಪರಿಪಕ್ವ ಹಣ ಜೀವ ವಿಮಾ (ಎಲ್‌ಐಸಿ) ನಿಗಮದ ಮೂಲಕ ಜಮೆಯಾಗುತ್ತಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ತಿಳಿಸಿದರು.



> ಭಾಗ್ಯಲಕ್ಷ್ಮಿ ಯೋಜನೆಗೆ ಆರಂಭದ ವರ್ಷದಲ್ಲಿ ಸಾಕಷ್ಟು ಬೇಡಿಕೆ ಇತ್ತು. ಜಾರಿಯಾದ ವರ್ಷವಲ್ಲದೇ ನಂತರವೂ ಸಾವಿರಾರು ಜನ ಈ ಯೋಜನೆಗೆ ಹೆಸರು ನೋಂದಾಯಿಸಿದ್ದಾರೆ. ಆದರೆ, 2020ರ ಬಳಿಕ ಸುಕನ್ಯಾ ಸದ್ಬುದ್ಧಿ ಯೋಜನೆ ಜಾರಿಯಾಗಿದ್ದು, ಕೆಲವು ನಿಯಮ ಬದಲಾವಣೆಯೊಂದಿಗೆ ಸುಕನ್ಯಾ ಸಮೃದ್ಧಿಯೋಜನೆ ಉತ್ತಮ ಯೋಜನೆಯಾಗಿದ್ದು, ಈ ಯೋಜನೆಯದರೂ ಪ್ರತಿ ವರ್ಷ ಸಾವಿರಾರು ಮಂದಿ ಹೆಣ್ಣು ಮಕ್ಕಳನ್ನು ಅಂಚೆ ಕಚೇರಿ ಮೂಲಕ ನೋಂದಾಯಿಸಲಾಗುತ್ತಿದೆ.

**ಇದೀಗ ಸುಕನ್ಯಾ ಸಮೃದ್ಧಿ!**

> **2006–07ನೇ ಸಾಲಿನಲ್ಲಿ ಭಾಗ್ಯಲಕ್ಷ್ಮಿ ಪಡೆದಿದ್ದ ಹೆಣ್ಣು ಮಕ್ಕಳಲ್ಲಿ 5727ಇದೀಗ ಪರಿಪಕ್ವ ಹಣವನ್ನು ಪಡೆದುಕೊಳ್ಳುತ್ತಿದ್ದಾರೆ.**
> – ಶ್ರೀಧರ್ ಉಪನಿರ್ದೇಶಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,ಲಾಖೆ ಬೀದರ್

### ಬಾಲ್ಯ ವಿವಾಹವಾಗಿದ್ದರೆ ಹಣವಿಲ್ಲ!

**ನಾವು ಭಾಗ್ಯಲಕ್ಷ್ಮಿ ಬಾಂಡ್ ಪಡದಿದ್ದೇವೆ. ನಣ್ಣು ಮಗಳ ಹೆಸರಿಗೂ ಹಣ ಬರಲಿದೆ ಎಂದುಕೊಂಡು 18 ವರ್ಷದೊಳಗೆ ಆಕೆಗೆ ಮದುವೆ ಮಾಡಿದ್ದರೆ, ಅಂಥವರಿಗೆ ಭಾಗ್ಯಲಕ್ಷ್ಮಿ ಹಣ ದೊರೆಯುವುದಿಲ್ಲ ಬಾಲ್ಯ ವಿವಾಹ ನಿಯಮ ಬಾಹಿರವಾದ್ದರಿಂದ ಒಂದು ವೇಳೆ ಭಾಗ್ಯ ಲಕ್ಷ್ಮಿ ಫಲಾನುಭವಿ ಬಾಲ್ಯ ವಿವಾಹವಾಗಿದ್ದರೆ ಅಂಥವರಿಗೆ ಹಣ ದೊರೆಯುವುದಿಲ್ಲ. ಜಿಲ್ಲೆಯಲ್ಲಿ ಇಂಥ ಹೆಣ್ಣು ಮಕ್ಕಳಿದ್ದಾರೆ. ಇದರ ಹೆಸರು 2006–07ರಲ್ಲಿ ನೋಂದಣಿಯಾಗಿದ್ದರೂ ಇದೀಗ ಪರಿಶೀಲಿಸಿದಾಗ ಜಿಲ್ಲೆಯ 51 ಮಂದಿ ಹೆಣ್ಣು ಮಕ್ಕಳು ಯೋಜನೆ ವ್ಯಾಪ್ತಿಯಲ್ಲಿದ್ದರೂ ಬಾಲ್ಯ ವಿವಾಹವಾಗಿದ್ದಾರೆ. ಹೀಗಾಗಿ ಅವರಿಗೆ ಹಣ ನೀಡುವುದನ್ನು ತಡೆ ಹಿಡಿಯಲಾಗಿದೆ, ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಷ್ಟೆಯಲ್ಲ, ಮೂರು ಮಕ್ಕಳಿಗಿಂತ ಹೆಚ್ಚು ಮಕ್ಕಳನ್ನು ಆ ದಂಪತಿ ಹೊಂದಿದ್ದರೆ, ಬಿಪಿಎಲ್ ಕಾರ್ಡ್ ಇಲ್ಲವಾಗಿದ್ದರೂ ಈ ಯೋಜನೆಯ ಹಣ ಫಲಾನುಭವಿಗಳ ಕೈ ಸೇರುವುದಿಲ್ಲ ಎನ್ನುತ್ತದೆ ನಿಯಮ.**

# ಹಾಸನ ದೇವಾಲಯಗಳ ವೈಭವಯಾನ

............ಮುಂದುವರೆದ ಭಾಗ

**ನಾಗಪುರಿ :** ತಿರುಪತಿ ಬೆಟ್ಟದ ಹಿಂಬದಿಯ ಗುಡ್ಡ ಹಾಗೂ ಕಾಡಿನ ಮಧ್ಯೆ, ಶಿಲಾಯುಗದ ನಿವೇಶನಗಳಿವೆ. ಹೊಯ್ಸಳ ಕಾಲದ ನಾಗಪುರಿ ಎಂಬ ವಿಶಾಲವಾದ ಪುರಾತನ ನಗರದ ಪಳೆಯುಳಿಕೆ, ದೇವಾಲಯಗಳು, ವಿಜಯನಗರ ಹಾಗೂ ಹೈದರಾಲಿಯ ಕಾಲದ ಎರಡು ಕೋಟೆಗಳು, ಮದ್ದಿನಮನೆ, ಗುಪ್ತಗೃಹ, ಕೆರೆಗಳು ಮತ್ತು ಬ್ರಿಟಿಷ್ ಬಂಗಲೆ ಮುಂತಾದ ಅವಶೇಷಗಳಿವೆ. ಸಿದ್ದರು ಎಂಬ ಸಾಧಕರ ಸಾಧನಾ ತಾಣಗಳಿವೆ. ಮಠಗಳಿವೆ. ಇಲ್ಲಿನ ಕಾಡಿನಲ್ಲಿ ಅಪೂರ್ವವಾದ ಔಷಧಿ





ಸಸ್ಯಗಳಿವೆ. (ಅರಸೀಕೆರೆಯಿಂದ 15 ಕಿ.ಮೀ).

**ಹಾರನಹಳ್ಳಿ :** ಹೊಯ್ಸಳ ಎರಡನೇ ನರಸಿಂಹನ ಆಡಳಿತಕಾಲದಲ್ಲಿ ಈ ಊರು 'ಹಿರಿಯ ಸೋಮನಾಥಪುರ' ಹೆಸರಿನ ಹಿರಿಯ ಪಟ್ಟದ ಅಗ್ರಹಾರ'ವಾಗಿತ್ತು. ಗ್ರಾಮದ ಮಧ್ಯೆ ತ್ರಿಕೂಟ ದೇವಾಲಯವಿದೆ. ಎತ್ತರವಾದ ಜಗತಿಯಮೇಲೆ ನಿರ್ಮಿತವಾಗಿರುವ ಈ ದೇವಾಲಯದ ಹೊರ ಗೋಡೆಯಲ್ಲಿ ಆನೆ, ಕುದುರೆ, ಸಿಂಹ. ಮಕರ, ಪುರಾಣಕಥೆ, ಲತೆ ಮುಂತಾದ ಪಟ್ಟಿಕೆಗಳು, ಅದರ ಮೇಲುಬದಿಯಲ್ಲಿ ವಿಷ್ಣುಚತುರ್ವಿಂಶತಿ, ಲಕ್ಷ್ಮಿ, ವಿವಿಧ ದೇವತೆಗಳು, ಮುಂತಾದ ಸುಂದರ ಶಿಲ್ಪಗಳಿವೆ. ಇವಲ್ಲದೆ ಗರ್ಭಗೃಹದ ಮೇಲಿನ ಶಿಖರ, ನವರಂಗದ ದುಂಡು ಕಂಬಗಳು, ದೇವಕೋಷ್ಠಗಳು, ದ್ವಾರಬಂಧ ಮುಂತಾದಲ್ಲಿ ಆಕರ್ಷಕ ಕೆತ್ತನೆಗಳಿವೆ. ಪ್ರಧಾನ ಗರ್ಭಗೃಹದಲ್ಲಿ ಕೇಶವ ಹಾಗೂಉಳಿದೆರಡರಲ್ಲಿ ನರಸಿಂಹ, ವೇಣುಗೋಪಾಲ ಮೂರ್ತಿಗಳಿಗೆ ಕ್ರಿ.ಶ1234ರಲ್ಲಿ ಲಕ್ಷ್ಮೀನರಸಿಂಹ ದೇವಾಲಯವನ್ನು ಕಟ್ಟಲಾಗಿತ್ತು. ಪಟ್ಟಿಕೆಗಳು, ದೇವತಾಶಿಲ್ಪಗಳು, ನವರಂಗದ ಸ್ತಂಭ–ದೇವಕೋಷ್ಠಗಳು, ಶಿಖರ, ಶಿವಲಿಂಗ ಮುಂತಾದವು ಬಹು ಮೌಲಿಕವಾದ ಶಿಲ್ಪಕಾರ್ಯದಿಂದ ಕೂಡಿ ಸುಂದರವಾಗಿದೆ.

ಇವಲ್ಲದೆ ಪುರಾತನ ಕಲ್ಲೇಶ್ವರ, ಚಂದ್ರಮೌಳೀಶ್ವರ, ಬಸವೇಶ್ವರ, ಸಮೀಪದಲ್ಲಿ ಭೈರವೇಶ್ವರ, ಕೋಡಮ್ಮ ಮುಂತಾದ ದೇವಾಲಯಗಳೂ, ಸಂತರ ವೇದಿಕೆಗಳೂ ಇವೆ. ಕೆರೆಕೋಡಿಯ ಬಳಿ ನಾಡಿಗ್ರಂಥ ಭವಿಷ್ಯಕ್ಕೆ ಪ್ರಸಿದ್ಧವಾದ ಕೋಡಿಮಠ ಇದೆ. (ಹಾಸನದಿಂದ 35 ಕಿ.ಮೀ, ಶ್ರವಣಬೆಳಗೊಳದಿಂದ 85 ಕಿ.ಮೀ)


**ಜಾವಗಲ್ಲು :** ಶಿಲ್ಪಕಲೆಯಲ್ಲೂ, ವಾಸ್ತುವಿನ್ಯಾಸದಲ್ಲೂ ಸೋಮನಾಥಪುರದ ದೇವಾಲಯಕ್ಕೆ ಸರಿಸಮನಾದ 13ನೇ ಶ.ದ ಅತ್ಯಾಕರ್ಷಕವಾದ ಹೊಯ್ಸಳ ತ್ರಿಕೂಟ ದೇವಾಲಯ ಇಲ್ಲಿದೆ. ಇದರ ಮೂರು ಪ್ರಧಾನ ಗರ್ಭಗೃಹಗಳಲ್ಲಿ ಶ್ರೀಧರ, ಲಕ್ಷ್ಮೀನರಸಿಂಹ ಹಾಗೂ ವೇಣುಗೋಪಾಲ ಮೂರ್ತಿಗಳಿವೆ.

ಹೊರಗೋಡೆಯಲ್ಲಿ ಆನೆ. ಕುದುರೆ, ಸಿಂಹ, ಮಕರ, ಪುರಾಣಕಥೆ, ಲತೆ ಮುಂತಾದ ಪಟ್ಟಿಕೆಗಳೂ ಮತ್ತು ಅವುಗಳ ಮೇಲುಬದಿಯಲ್ಲಿ ವಿವಿಧ ದೇವತಾಶಿಲ್ಪಗಳೂ ಇವೆ. ವಿಜಯನಗರ ಕಾಲದಲ್ಲಿ ಪಾತಾಳಾಂಕಣ, ದ್ವಾರಪಾಲರು, ದೀಪಸ್ತಂಭ, ಲಕ್ಷ್ಮೀಗುಡಿ, ಪಾಕಶಾಲೆ, ಅಪೂರ್ಣ ರಾಜಗೋಪುರ ಮುಂತಾದವುಗಳಿವೆ. ಊರಿನ ಈಶಾನ್ಯಕ್ಕೆ ಕೆರೆಯ ದಡದಲ್ಲಿ ಹೊಯ್ಸಳ ಶೈಲಿಯ ಗಂಗಾಧರೇಶ್ವರ ಶಿಥಿಲ ದೇವಾಲಯವಿದೆ.ಈ ಊರಿನಲ್ಲಿ ಚಂದ್ರನಾಥ ಜೈನಬಸದಿ, ವೀರಭದ್ರ ದೇವಾಲಯ, ಮುಂತಾದ ಇನ್ನೂ ಕೆಲವು ಹೊಯ್ಸಳ ದೇವಾಲಯಗಳು ಇದ್ದು, ಈಗ ರೂಪಾಂತರಿತವಾಗಿವೆ.


(ಹಾಸನದಿಂದ 50 ಕಿ.ಮೀ, ಶ್ರವಣಬೆಳಗೊಳದಿಂದ 100 ಕಿ.ಮೀ).

...........ಮುಂದುವರೆಯುತ್ತದೆ

ಊರಿನ ಈಶಾನ್ಯದಲ್ಲಿ ಎತ್ತರವಾದ ಜಗತಿಯ ಮೇಲೆ ಸೋಮೇಶ್ವರ ದೇವಾಲಯವಿದೆ



☛ ವಿಶ್ವಾಸ್.ಡಿ.ಗೌಡ



# ಚಳಿಗಾಲದಲ್ಲಿ ಲಿವರ್ ಸಮಸ್ಯೆ

ದೇಹದ ಲಿವರ್ ಆರೋಗ್ಯವನ್ನು ಕಾಪಾಡಿಕೊಳ್ಳಲು, ಆರೋಗ್ಯಕರ ಜೀವನಶೈಲಿ ಮತ್ತು ಸರಿಯಾದ ಆಹಾರಪದ್ಧತಿಯನ್ನು ಅನುಸರಿಸುವುದು ಬಹಳ ಮುಖ್ಯ.ಈ ಲೇಖನದಲ್ಲಿ ಚಳಿಗಾಲದಲ್ಲಿ ಲಿವರ್ ಆರೋಗ್ಯವನ್ನು ಕಾಪಾಡಲು ಸೇವಿಸಬಹುದಾದ ಆಹಾರ ಪದಾರ್ಥಗಳ ಬಗ್ಗೆ ಮಾಹಿತಿಯನ್ನು ನೋಡೋಣ ದೇಹದ ಇತರ ಪ್ರಮುಖ ಅಂಗಾಂಗಗಳಂತೆ ಲಿವರ್ ಒಂದು ಪ್ರಮುಖ ಅಂಗಾಂಗವಾಗಿದ್ದು ಇದರ ಆರೈಕೆಯು ಕೂಡ ಬಹಳಷ್ಟು ಮುಖ್ಯವಾಗಿರುತ್ತದೆ. ಈ ಅಂಗದ ಪ್ರಮುಖ ಕಾರ್ಯಗಳು ಏನೆಂದ್ರೆ ದೇಹದಲ್ಲಿ ಶೇಖರಣೆಗೊಳ್ಳುವ ವಿಷಕಾರಿ ಅಂಶಗಳನ್ನು ಹೊರ ಹಾಕುವ ಕೆಲಸದಿಂದ ಹಿಡಿದು, ದೇಹದಲ್ಲಿ ಶಕ್ತಿಯ ಮಟ್ಟವನ್ನು ಹೆಚ್ಚಿಸುವುದು, ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸುವುದು, ಕಾರ್ಬೋಹೈಡ್ರೇಟ್ ಅಂಶವನ್ನು ಮೆಟಬಾಲಿಸಂ ಪ್ರಕ್ರಿಯೆಗೆ ಒಳಪಡಿವುದು, ಬೈಲ್ ಜ್ಯೂಸ್ ಉತ್ಪತ್ತಿ ಮಾಡುವುದು ಹೀಗೆ ಸುಮಾರು 500ಕ್ಕೂ ಹೆಚ್ಚಿನ ಕಾರ್ಯ ಗಳನ್ನು ನಿರ್ವಹಿಸುತ್ತದೆ ಎನ್ನುತ್ತಾರೆ ಆರೋಗ್ಯ ತಜ್ಞರು

**ಚಳಿಗಾಲದಲ್ಲಿ ಲಿವರ್ ನ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅತ್ಯಗತ್ಯ**


ಇನ್ನು ಚಳಿಗಾಲದಲ್ಲಿ ಯಕೃತ್ತಿನ ಅಥವಾ ಲಿವರ್ ಬಗ್ಗೆ ಕಾಳಜಿ ವಹಿಸುವುದು ಬಹಳ ಮುಖ್ಯ. ಯಾಕೆಂದ್ರೆ ಈ ಸಮಯದಲ್ಲಿ ದೇಹದ ಚಯಾಪಚಯ ಕ್ರಿಯೆ ನಿಧಾನವಾಗುತ್ತದೆ ಇದರಿಂದ ಲಿವರ್ ನ ಮೇಲಿನ ಒತ್ತಡವು ಕೂಡ ಹೆಚ್ಚಾಗುತ್ತದೆ. ಈ ಸಮಯದಲ್ಲಿ ನಿಮ್ಮ ಆಹಾರವನ್ನು ನಿರ್ಲಕ್ಷಿಸುವುದರಿಂದ ಕೊಬ್ಬು ಶೇಖರಣೆ, ಉರಿಯೂತ ಮತ್ತು ಜೀರ್ಣಕಾರಿ ಸಮಸ್ಯೆಗಳು ಉಂಟಾಗಬಹುದು.ಇದಲ್ಲದೆ, ಸಾಕಷ್ಟು ನೀರಿನ ಸೇವನೆ ಮತ್ತು ನಾರಿನ ಕೊರತೆಯು ಯಕೃತ್ತನ್ನು ದುರ್ಬಲಗೊಳಿಸುತ್ತದೆ. ಆದ್ದರಿಂದ, ಈ ಋತುವಿನಲ್ಲಿ ಸಮತೋಲಿತ ಆಹಾರವನ್ನು ಕಾಪಾಡಿ ಕೊಳ್ಳುವುದು ಮತ್ತು ಆರೋಗ್ಯಕರ ಆಹಾರವನ್ನು ಸೇರಿಸುವುದು ಬಹಳ ಮುಖ್ಯ. ಚಳಿಗಾಲದಲ್ಲಿ ನಿಮ್ಮ ಯಕೃತ್ತಿಗೆ ನೆರವಾಗುವ ಆಹಾರವನ್ನು ಸೇವನೆ ಮಾಡುವುದು ಇನ್ನಷ್ಟು ಮುಖ್ಯವಾಗುತ್ತದೆ.

**ಲಿವರ್‌ನಲ್ಲಿ ಸಮಸ್ಯೆಗಳು ಕಾಣಿಸಿಕೊಳ್ಳಲು ಕಾರಣಗಳೇನು?** ನಾವೆಲ್ಲಾರೂ ಅತಿಯಾಗಿ ಮಧ್ಯಪಾನ ಧೂಮಪಾನ ಹೆಚ್ಚಾಗಿ ಮಾಡುವವರಲ್ಲಿ ಲಿವರ್‌ನಲ್ಲಿ ಸಮಸ್ಯೆಗಳು ಕಾಣಿಸಿಕೊಳ್ಳುತ್ತದೆ ಎಂದು ಕೇಳಿದ್ದೇವೆ, ಆದರೆ ಕೇವಲ ಮದ್ಯಪಾನ ಹಾಗೂ ಧೂಮಪಾನ ಮಾತ್ರವಲ್ಲ ಎಣ್ಣೆಯಾಂಶ ಹೆಚ್ಚಿರುವ ಆಹಾರ ಪದಾರ್ಥಗಳು, ಅತಿಯಾಗಿ ಜಂಕ್ ಫುಡ್ ಅಥವಾ ಫಾಸ್ಟ್ ಫುಡ್ ಸೇವನೆ ಮಾಡುವವರಲ್ಲಿ ಹಾಗೂ ಸರಿಯಾದ ಜೀವನಶೈಲಿ ಹಾಗೂ ದೈಹಿಕ ಚಟುವಟಿಕೆ ಮಾಡ ದವರಲ್ಲಿ ಲಿವರ್ ಸಮಸ್ಯೆ ಕಾಣಿಸಿಕೊಳ್ಳುವುದರ ಜೊತೆಗೆ ಲಿವರ್ ಕ್ಯಾನ್ಸರ್ ಕಾಣಿಸಿಕೊಳ್ಳುವ ಅಪಾಯ ಹೆಚ್ಚಿರುತ್ತದೆ ಎನ್ನುತ್ತಾರೆ ಆರೋಗ್ಯ ತಜ್ಞರು. ಇನ್ನೂ ಚಳಿಗಾಲದಲ್ಲಿ ಜನರು ಎಣ್ಣೆಯಲ್ಲಿ ಕರಿದಿರುವ ಆಹಾರಗಳು, ಹೆಚ್ಚುವರಿ ಸಕ್ಕರೆ ಮತ್ತು ಸಂಸ್ಕರಿಸಿದ ಆಹಾರಗಳ ಸೇವನೆ ಹೆಚ್ಚಾಗಿರುವ ಕಾರಣ ಯಕೃತ್ತಿನಲ್ಲಿ ಕೊಬ್ಬು ಸಂಗ್ರಹವಾಗಲು ಕಾರಣವಾಗಬಹುದು. ಇದು ಯಕೃತ್ತಿನ ಸ್ವಯಂ ಶುದ್ಧೀಕರಣ ಸಾಮರ್ಥ್ಯವನ್ನು ಕಡಿಮೆ ಮಾಡುತ್ತದೆ ಮತ್ತು ಉರಿಯೂತವನ್ನು ಹೆಚ್ಚಿಸುತ್ತದೆ.

ಅದರಲ್ಲೂ ಜಂಕ್ ಫುಡ್, ಕೆಂಪು ಮಾಂಸ ಮತ್ತು ಅತಿಯಾದ ಎಣ್ಣೆಯುಕ್ತ ಆಹಾರವನ್ನು ಸೇವಿಸುವುದು ಯಕೃತ್ತಿಗೆ ಹಾನಿ ಮಾಡುವುದರ ಜೊತೆಗೆ ಫ್ಯಾಟಿ ಲಿವರ್ ಸಮಸ್ಯೆ ಕಾಣಿಸಿಕೊಳ್ಳುವ ಸಾಧ್ಯತೆ ಕೂಡ ಹೆಚ್ಚಿರುತ್ತದೆ. ಆದ್ದರಿಂದ, ಈ ಚಳಿಗಾಲದಲ್ಲಿ ಯಕೃತ್ತನ್ನು ಆರೋಗ್ಯವಾಗಿಡಲು ಯಾವ ಆಹಾರವನ್ನು ಸೇವಿಸಬೇಕು ಎಂಬುದರ ಬಗ್ಗ ಇಂದಿನ ಲೇಖನದಲ್ಲಿ ನೋಡೋಣ.

**ಪಾಲಕ್ ಸೊಪ್ಪು ಲಿವರ್ ಆರೋಗ್ಯಕ್ಕೆ ಒಳ್ಳೆಯದಾ?:** ಪಾಲಕ್ ಸೊಪ್ಪಿನಲ್ಲಿ ಆಂಟಿ ಆಕ್ಸಿಡೆಂಟ್‌ಗಳು, ವಿಟಮಿನ್ ಸಿ ಮತ್ತು ಫೋಲಿಕ್ ಆಮ್ಲವಿದ್ದು, ಇದು ಯಕೃತ್ತಿನಿಂದ ವಿಷವನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ನೀವು ಪಾಲಕ್ ಸೂಪ್ ತಯಾರಿಸುವ ಮೂಲಕ ಅಥವಾ ತರಕಾರಿಗಳೊಂದಿಗೆ ಬೆರೆಸಿ ಸೇವಿಸಬಹುದು.

# ರಾಮಾಯಣ



**ಶ್ರೀ ರಾಮನು ಜಟಾಯುವಿಗೆ ಅಗ್ನಿ ಸಂಸ್ಕಾರಾದಿಗಳನ್ನು ಮಾಡಿದ್ದು**

• ಹಿಂದಿನ ಸಂಚಿಕೆಯಿಂದ

## 120 ನೆಯ ಅಧ್ಯಾಯ

ಆದ್ದರಿಂದ ನಮಗೆ ಯಾವುದೋ ವಿಘ್ನವು ಉಂಟಾಗುವ ಹಾಗಿದೆ. ಅಲ್ಲದೆ ಎಲ್ಲಿ ನೋಡಿದರೂ ದುರ್ನಿಮಿತ್ತಗಳನ್ನು ಕಾಣುತ್ತಿರುವೆನು. ಆದಕಾರಣ ನೀನು ಜಿಲ್ಲಿಗೆ ಹೆಡೆಯನ್ನೇರಿಸಿ ಸಾವಧಾನವಾಗಿರು. ಈ ದುರ್ನಿಮಿತ್ತಗಳಿಂದ ನಿನಗೇನಾದರೂ ವಿಘ್ನವು ಸಂಭವಿಸಬಹುದು. ಮುಂದುಗಡೆ ನಮಗೆ ಜಯವಾಗುತ್ತದೆಯೆಂಬುದನ್ನು ಸೂಚಿಸುತ್ತ ಮಂಜುಳಕಪಕ್ಷಿಯು ಸ್ವರಗೈಯುತ್ತಿದೆ. ಅದನ್ನು ನೋಡಿದರೆ ಮುಂದೆ ಯಾರೊಡನೆಯೋ ನಮ್ಮಿಬ್ಬರಿಗೂ ಯುದ್ಧ ನಡೆದು ನಮಗೆ ಜಯವಾಗುವ ಹಾಗಿದೆ ಎಂದು ನುಡಿದನು. ಆ ಮೇಲೆ ರಾಮಲಕ್ಷ್ಮಣರು ಮುಂದಕ್ಕೆ ಹೋಗುತ್ತಿರುವಾಗ ಆ ವನದಲ್ಲಿ ಮಹತ್ತಾದ ಒಂದು ಧ್ವನಿಯು ಹುಟ್ಟಿ ಸರ್ವತ್ರ ವ್ಯಾಪಿಸಿತು. ರಾಮ ಲಕ್ಷ್ಮಣರು ಅದನ್ನು ಕೇಳಿ ನಾನಾದಿಕ್ಕುಗಳನ್ನೂ ನೋಡುತ್ತ ಮುಂದುಗಡೆಯಲ್ಲಿ ಪರ್ವತಾಕಾರವಾದ ಶರೀರವುಳ್ಳ ಒಬ್ಬ ಘೋರ ರಾಕ್ಷಸನನ್ನು ಕಂಡರು. ಅವನಿಗೆ ಶಿರನ್ನೂ ಇರಲಿಲ್ಲ, ಕಂಠವೂ ಇರಲಿಲ್ಲ. ಅವನ ತಲೆಯು ಹೊಟ್ಟೆಯಲ್ಲಿ ಹುದುಗಿತ್ತು, ಕಬಂಧಾಕಾರದ ಆ ದೈತ್ಯನು ಉದ್ದವಾದ ರೋಮಗಳಿಂದ ವ್ಯಾಪ್ತನಾಗಿ ಗುಡುಗಿನಂತೆ ಗರ್ಜಿಸುತ್ತಿದ್ದನು. ಅಗ್ನಿಜ್ವಾಲೆಯಂತೆ ಬೆಳಗುತ್ತಿದ್ದ ಒಂದು ಕಣ್ಣು ಹೊಟ್ಟೆಯ ಮಧ್ಯದಲ್ಲಿ ಹೊಳೆಯುತ್ತಿತ್ತು. ಕೋರೆದಾಡೆಗಳನ್ನು ಚಾಚಿಕೊಂಡು ನಾಲಿಗೆಯನ್ನು ಸವರಿಕೊಳ್ಳುತ್ತಿದ್ದನು. ಒಂದು ಯೋಜನ ಪರಿಮಿತವಾದ ಕೈಗಳಿಂದ ಸಿಂಹ ಕರಡಿ ಆನೆ ಮುಂತಾದವುಗಳನ್ನು ಹಿಡಿದು ಬಾಯಿಯಲ್ಲಿ ತೂರಿಕೊಳ್ಳುತ್ತಿದ್ದನು. ಆಗ ಕಬಂಧನು ತನ್ನ ಭುಜಗಳನ್ನು ನೀಡಿ ರಾಮಲಕ್ಷ್ಮಣರನ್ನು ಹಿಡಿದು ಭಕ್ಷಣಮಾಡುವುದಕ್ಕೆ ಯತ್ನ ಮಾಡಲು, ಕೊಂಬುಳ್ಳ ಎತ್ತುಗಳು ಮೂಗಿಗೆ ಕಟ್ಟಿದ ಹಗ್ಗದಿಂದ ಸೆಳೆಯಲ್ಪಡುವಂತೆ ಕಬಂಧನ ಭುಜಗಳಿಂದ ಸೆಳೆಯಲ್ಪಡುತ್ತಿದ್ದ ಖಡ್ಗ ಪಾಣಿಗಳೂ ಬಲಿಷ್ಠರೂ ಆದ ಅವರಿಬ್ಬರಲ್ಲಿ ಶ್ರೀರಾಮನು ಮಾತ್ರ ಧೈರ್ಯವನ್ನಾಶ್ರಯಿಸಿ ಕಂಗೆಡದಿದ್ದನು. ಲಕ್ಷ್ಮಣನು ಬಾಲಕನಾದ್ದರಿಂದ ಧೈರ್ಯವನ್ನು ತಂದುಕೊಳ್ಳಲಾರದೆಯೇ ಭಯಪಟ್ಟು ಮುಖಕಾಂತಿ ಗುಂದಿ ಶ್ರೀರಾಮನನ್ನು ಕುರಿತು ಶ್ರೀರಾಮ, ಈ ರಾಕ್ಷಸರ ಕೈಗೆ ಸಿಕ್ಕಿ ಭಯಪಟ್ಟಿರುವ ನನ್ನನ್ನು ನೋಡು. ನೀನು ನನ್ನನ್ನು ಈತನಿಗೆ ಬಲಿಯಾಗಿ ಕೊಟ್ಟು ನಿನ್ನನ್ನು ಬಿಡಿಸಿಕೊಂಡು ಹೋಗು. ನೀನು ನಮ್ಮ ಪಿತೃಪಿತಾಮಹಾದಿಗಳಿಂದ ಪರಿಪಾಲಿಸಲ್ಪಟ್ಟ ರಾಜ್ಯಕ್ಕೆ ಹೋಗಿ ಸುಖವಾಗಿರು. ನಾನು ನಿನ್ನ ಸೇವೆಮಾಡುತ್ತ ಬಂದೆನೆಂಬುದನ್ನು ಆಗಾಗ ನೆನಪು ಮಾಡಿಕೊ ಎಂದು ಹಲುಬಿದನು. ಶ್ರೀರಾಮನು ಲಕ್ಷ್ಮಣನನ್ನು ಕುರಿತು ಎಲೈ ಲಕ್ಷ್ಮಣ, ನೀನು ಮಹಾಪರಾಕ್ರಮಿ. ನಿನ್ನಂಥವರು ಕಂಗೆಡುವರೆ ? ವೃಥಾ ಅಂಜಬೇಡ ಎಂದು ಲಕ್ಷ್ಮಣನಿಗೆ ಧೈರ್ಯ ಹೇಳಿದನು. ಆ ಸಮಯದಲ್ಲಿ ಕಬಂಧನು ಅವರನ್ನು ಕುರಿತು ಎಲೈ ಪುರುಷರುಗಳಿರಾ, ನೀವು ಕೊಬ್ಬಿದ ವೃಷಭದಂತೆ ಹೆಕ್ಕತ್ತುಗಳುಳ್ಳವರಾಗಿ ಬಿಲ್ಲು ಬಾಣ ಖಡ್ಗಗಳನ್ನು ಧರಿಸಿಕೊಂಡಿದ್ದೀರಿ. ನೀವಾರು ? ಏನುಕಾರಣ ಬಂದಿರಿ ? ನೀವು ಇನ್ನು ಜೀವಸಹಿತವಾಗಿ ಹೋಗಲು ಸಾಧ್ಯವಿಲ್ಲ ಎಂದು ಆರ್ಭಟಿಸಿದನು.

**ಮುಂದುವರಿಯುವುದು...**

# ಈ ತರಕಾರಿಗಳನ್ನು ಹಸಿಯಾಗಿ ತಿನ್ನಲೇ ಬಾರದು



ಈ ಕೆಲವೊಂದು ತರಕಾರಿಗಳನ್ನು ಹಸಿಯಾಗಿ ತಿನ್ನೋದ್ರಿಂದ ಅದು ಆರೋಗ್ಯವನ್ನು ಹದಗೆಡಿಸಬಹುದು ಎನ್ನುತ್ತಾರೆ ಆರೋಗ್ಯ ತಜ್ಞೆ ಡಿಂಪಲ್ ಜಂಗ್ಡಾ. ಅಂತಹ ತರಕಾರಿಗಳು ಯಾವುವು ತಿಳಿಯೋಣ.

ಎಲ್ಲಾ ತರಕಾರಿಗಳು ಹಸಿಯಾಗಿ ತಿನ್ನಲು ಯೋಗ್ಯವಾಗಿರೋದಿಲ್ಲ. ಕೆಲವೊಂದನ್ನು ಹಸಿಯಾಗಿ ಸೇವಿಸಿದಾಗ ಅವು ಪ್ರಮುಖ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು. ಇದು ಯಕೃತ್ತಿಗೆ ಹಾನಿಯನ್ನೂ ಉಂಟುಮಾಡುತ್ತದೆ. ಇನ್‌ಸ್ಟಾಗ್ರಾಮ್‌ನಲ್ಲಿನ ಇತ್ತೀಚಿನ ವೀಡಿಯೊದಲ್ಲಿ, ಆರೋಗ್ಯ ತಜ್ಞೆ ಡಿಂಪಲ್ ಜಂಗ್ಡಾ ಅವರು ಎಂದಿಗೂ ಕಚ್ಚಾ ಸೇವಿಸಬಾರದ ತರಕಾರಿಗಳ ಬಗ್ಗೆ ತಿಳಿಸಿದ್ದಾರೆ. ಅವರ ಪ್ರಕಾರ, ಅವು ಪರಾವಲಂಬಿಗಳು ಮತ್ತು ಇ. ಕೋಲಿ ಅಥವಾ ಟೇಪ್‌ವರ್ಮ್‌ಗಳು ಮತ್ತು ಟೇಪ್‌ವರ್ಮ್ ಮೊಟ್ಟೆಗಳಂತಹ ಬ್ಯಾಕ್ಟೀರಿಯಾಗಳಿಗೆ ನೆಲೆಯಾಗಿದೆ. ಅವು ಕರುಳು, ರಕ್ತಪ್ರವಾಹಕ್ಕೆ ಪ್ರವೇಶಿಸಿದರೆ ಅಥವಾ ಮೆದುಳಿಗೆ ಪ್ರವೇಶಿಸಿದರೆ, ಅವು ಸಿಸ್ಟಿಸರ್ಕೋಸಿಸ್, ರೋಗಗ್ರಸ್ತವಾಗುವಿಕೆಗಳು, ತಲೆನೋವು, ಯಕೃತ್ತಿಗೆ ಹಾನಿಯಂತಹ ಗಂಭೀರ ಕಾಯಿಲೆಗಳಿಗೆ ಕಾರಣವಾಗಬಹುದು.

**ಎಲೆಕೋಸು:** ಎಲೆಕೋಸಿನಲ್ಲಿ ಬರಿಗಣ್ಣಿಗೆ ಕಾಣದ ಟೇಪ್‌ವರ್ಮ್‌ಗಳು ಮತ್ತು ಅದರ ಮೊಟ್ಟೆಗಳಿರುತ್ತವೆ. ಆದ್ದರಿಂದ ಅವುಗಳನ್ನ ಕ್ರಿಮಿಗಳಿಂದ ಮುಕ್ತಗೊಳಿಸಲು ಕಠಿಣ ಕ್ರಿಮಿನಾಶಕಗಳನ್ನು ಅಳವಡಿಸಲಾಗುತ್ತದೆ.

ಆದ್ದರಿಂದ ನೀವು ತರಕಾರಿಗಳನ್ನು ತೊಳೆಯುವುದು ಬಹಳ ಮುಖ್ಯ. ಎಲೆಕೋಸನ್ನು ಬಿಸಿ ನೀರಿನಲ್ಲಿ ಬ್ಲಾಂಚ್ ಮಾಡಿ ಮತ್ತು ನಂತರ ನೀವು ಅದನ್ನು ಚೆನ್ನಾಗಿ ಬೇಯಿಸಿ ಸೇವಿಸುವುದು ಉತ್ತಮ.

**ಕ್ಯಾಪ್ಸಿಕಂ:** ಜನರು ಸಾಮಾನ್ಯವಾಗಿ ಕ್ಯಾಪ್ಸಿಕಂನ್ನು ತೊಳೆದು ಹಾಗೆಯೇ ಸಲಾಡ್‌ಗೆ ಸೇರಿಸುತ್ತಾರೆ. ಆದರೆ ಈ ಅಭ್ಯಾಸವನ್ನು ನಿಲ್ಲಿಸಬೇಕು. ಕ್ಯಾಪ್ಸಿಕಂನ ಬೀಜಗಳಲ್ಲೂ ಬದುಕುಳಿಯುವ ಟೇಪ್ ವರ್ಮ್ ಮೊಟ್ಟೆಗಳಿಗೂ ನೆಲೆಯಾಗಿರಬಹುದು. ಹಾಗಾಗಿ ಅದನ್ನು ಬಿಸಿ ನೀರಿನಲ್ಲಿ ಬ್ಲಾಂಚ್ ಮಾಡುವುದು ಮುಖ್ಯ.

**ಕೆಸುವಿನ ಎಲೆಗಳು:** ಕೆಸುವಿನ ಎಲೆಗಳನ್ನು ಅರ್ಬಿ ಎಲೆ ಎಂದೂ ಕರೆಯುತ್ತಾರೆ. ಅವುಗಳನ್ನು ಎಂದಿಗೂ ಹಸಿಯಾಗಿ ಸೇವಿಸಬಾರದು. ನಿಮ್ಮ ಆಹಾರದಲ್ಲಿ ಬಳಸುವ ಮೊದಲು ಅವುಗಳನ್ನು ಯಾವಾಗಲೂ ಬಿಸಿ ನೀರಿನಲ್ಲಿ ಬ್ಲಾಂಚ್ ಮಾಡಿ. ವೀಡಿಯೊದಲ್ಲಿ ಅವರು ಪಾಲಕ್ ಮತ್ತು ಕೇಲ್‌ಗೂ ಇದೇ ನಿಯಮ ಅನ್ವಯಿಸುತ್ತದೆ ಎಂದು ಉಲ್ಲೇಖಿಸಿದ್ದಾರೆ. ಬಿಸಿ ನೀರಿನಲ್ಲಿ ಬ್ಲಾಂಚ್ ಮಾಡಿ ಏಕೆಂದರೆ ಅವು ಹೆಚ್ಚಿನ ಆಕ್ಸಲೇಟ್ ಮಟ್ಟಕ್ಕೆ ಸಂಬಂಧಿಸಿದ್ದು ಮತ್ತು ಇದನ್ನು ಬ್ಲಾಂಚ್ ಮಾಡಿದಾಗ ಆಕ್ಸಲೇಟ್ ಮಟ್ಟ ಕಡಿಮೆಯಾಗುತ್ತದೆ.

**ಹಾಗಲಕಾಯಿ:** ಹಾಗಲಕಾಯಿ ಎಂದೂ ಕರೆಯಲ್ಪಡುವ

### ಅಣಬೆಗಳು

**ತಜ್ಞರ ಪ್ರಕಾರ ಅಂಗಡಿಯಲ್ಲಿ ಖರೀದಿಸಿದ ಬಿಳಿ ಅಣಬೆಗಳು ವಿಷಕಾರಿ ವಸ್ತುಗಳು ಮತ್ತು ಕಚ್ಚಾ ಸ್ಥಿತಿಯಲ್ಲಿ ಕಳಪೆಯಾಗಿ ಜೀರ್ಣವಾಗುವ ಕಠಿಣ ನಾರುಗಳನ್ನು ಹೊಂದಿರುತ್ತವೆ. ಅವುಗಳನ್ನು ಸ್ವಚ್ಛಗೊಳಿಸುವುದು ಮತ್ತು ಸರಿಯಾಗಿ ಬೇಯಿಸುವುದು ಪೋಷಕಾಂಶಗಳ ಹೀರಿಕೊಳ್ಳುವಿಕೆಯನ್ನು ಸುಧಾರಿಸುತ್ತದೆ ಮತ್ತು ಹಾನಿಕಾರಕ ಸೂಕ್ಷ್ಮಜೀವಿಗಳನ್ನು ಕೊಲ್ಲುತ್ತದೆ.**

ಇವು ಸೂಕ್ಷ್ಮ ವ್ಯಕ್ತಿಗಳಲ್ಲಿ ಹೊಟ್ಟೆಯನ್ನು ಕೆರಳಿಸಬಹುದು ಮತ್ತು ವಾಕರಿಕೆ, ಅತಿಸಾರ ಅಥವಾ ಹೈಪೊಗ್ಲಿಸಿಮಿಯಾಕ್ಕೆ ಕಾರಣವಾಗಬಹುದು. ತಜ್ಞರ ಪ್ರಕಾರ ಮಸಾಲೆಗಳೊಂದಿಗೆ ಅವುಗಳನ್ನು ಬೇಯಿಸುವುದು ಕಠಿಣ ಸಂಯುಕ್ತಗಳು ಮತ್ತು ಕಹಿಯನ್ನು ಕಡಿಮೆ ಮಾಡುತ್ತದೆ.

**ಬದನೇಕಾಯಿ:** ಬದನೇಕಾಯಿ ಬೀಜಗಳು ಮತ್ತೆ ಟೇಪ್ ವರ್ಮ್ ಮೊಟ್ಟೆಗಳಿಗೆ ನೆಲೆಯಾಗಿದೆ.

ಈ ಪರಾವಲಂಬಿಗಳು, ಟೇಪ್ ವರ್ಮ್‌ಗಳು ಮತ್ತು ಟೇಪ್ ವರ್ಮ್ ಮೊಟ್ಟೆಗಳನ್ನು ನಮ್ಮ ರಕ್ತಪ್ರವಾಹಕ್ಕೆ ಪ್ರವೇಶಿಸದಂತೆ ತಡೆಯಲು ಇದನ್ನು ಚೆನ್ನಾಗಿ ಬೇಯಿಸಲು ಮರೆಯದಿರಿ. ಬದನೇಕಾಯಿ ಸಂಕೀರ್ಣವಾದ ತರಕಾರಿಯಾಗಿದ್ದು ಅಂತಹ ತರಕಾರಿಗಳನ್ನು ಬೇಯಿಸುವಾಗ ಹೆಚ್ಚುವರಿ ಕಾಳಜಿ ವಹಿಸುವುದು ಮುಖ್ಯ.

## ಭೂ ಮಾಪನ ತಿಳಿಸುವ ಕತ್ತಿಬಂಡೆ ಶಾಸನ ಅವಸಾನದತ್ತ

• ಉದಯವಾಹಿನಿ, ಕುರುಗೋಡು

ಶತಮಾನಗಳ ಹಿಂದೆ ಕರ್ನಾಟಕದಲ್ಲಿ ಭೂಮಿಯನ್ನು ಮಾಪನ ಮಾಡಲು ಬಳಕೆಯಲ್ಲಿದ್ದ ತಂತ್ರಜ್ಞಾನವನ್ನು ವಿವರಿಸುವ ಶಾಸನವುಳ್ಳ ಕುರುಗೋಡಿನ ಉಜ್ಜಳಪೇಟೆಯಲ್ಲಿರುವ ಕತ್ತಿಬಂಡೆ ಶಾಸನ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಕೃಷಿ ಭೂಮಿಯಲ್ಲಿನ ನಿಸರ್ಗದತ್ತ ಹಾಸು ಬಂಡೆಯ ಒಂದು ಭಾಗದ ಮೇಲೆ ಕೆತ್ತಿರುವ ಆಕಳು, ಕರು ಮತ್ತು ಹಂದಿಯ ಚಿತ್ರವನ್ನು ಕತ್ತೆ ಎಂದು ಭಾವಿಸಿ ಇದನ್ನು 'ಕತ್ತೆ ಬಂಡೆ' ಎಂದು ಕರೆಯಲಾಗುತ್ತಿದೆ. ಅದಕ್ಕಾಗಿಯೇ ಇದನ್ನು ಕತ್ತೆಬಂಡೆ ಶಾಸನ ಎಂದು ಹಸರಿಸಲಾಗಿದೆ.

5 ಸಾಲಿನ ಈ ಶಾಸನದ ಪ್ರಾರಂಭದಲ್ಲಿ 'ಸ್ವಸ್ತಿ ಶ್ರೀ ಸತ್ಯಾಶ್ರಯ' ಎಂದು ಹೇಳಿರುವುದರಿಂದ ಮತ್ತು ಶಾಸನದ ಲಿಪಿಯ ಮಾದರಿಯಿಂದ ಇದು ಚಾಲುಕ್ಯ ಸಾಮ್ರಾಟ ಇಮ್ಮಡಿ ಪುಲಕೇಶಿಯು ಕ್ರಿ.ಶ. 7ನೇ ಶತಮಾನದಲ್ಲಿ ಹೊರಡಿಸಿರಬಹುದು ಎಂದು ಶಾಸನ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಭೂಮಿಯನ್ನು ಮಾರಾಟಮಾಡಿದಾಗ ಮತ್ತು ಕೊಂಡಾಗ ಭೂಮಿಯನ್ನು ಅಳತೆ ಮಾಡಲು 18 ಗೇಣಿನ ನಿರ್ದಿಷ್ಟ ಮಾಪನ ಬಳಕೆಯಲ್ಲಿತ್ತು ಎನ್ನುವುದು ಶಾಸನದಿಂದ ತಿಳಿದುಬರುತ್ತದೆ. ಯುರೋಪಿಯನ್ನರು ಗಜ, ಮಿಲಿ ಮೀಟರ್, ಸೆಂಟಿಮೀಟರ್, ಮೀಟರ್ ಮೊದಲಾದ ಮಾಪನಗಳನ್ನು ಒಂದು ಶತಮಾನದ ಹಿಂದಷ್ಟೇ ಕಂಡುಕೊಂಡು ಉಪಯೋಗಕ್ಕೆ ತಂದಿದ್ದಾರೆ. ಆದರೆ ಇಂಥ ಮಾಪನಗಳನ್ನು ಭಾರತೀಯರು ಅದರಲ್ಲೂ ಕರ್ನಾಟಕದ ರಾಜರು, ಪ್ರಜೆಗಳು ಬಹಳ ಹಿಂದೆಯೇ ಬಳಕೆ ಮಾಡುತ್ತಿದ್ದರು ಎಂದು ಈ ಶಾಸನದಿಂದ ತಿಳಿಸುತ್ತದೆ.

ಬಾದಾಮಿ ಚಾಲುಕ್ಯರು ಚಲಾವಣೆಗೆ ತಂದಿದ್ದ ನಾಣ್ಯಗಳ ಮೇಲೆ ನವಿಲಿನ ಚಿತ್ರ ಚಿತ್ರಿಸಿದ್ದರು. ನವಿಲಚ್ಚಿನ ನಾಣ್ಯಗಳನ್ನು ತಯಾರಿಸುವ ಟಂಕಶಾಲೆ ಕುಡುತಿನಿಯಲ್ಲಿತ್ತು ಎಂಬ ವಿಷಯ ಶಾಸಕದಿಂದ ತಿಳಿದುಬರುವ ಮತ್ತೊಂದು ಮಹತ್ವದ ವಿಷಯವಾಗಿದೆ ಎಂದು ಸಂಶೋಧಕ ವೈ. ಹನುಮಂತ ರೆಡ್ಡಿ ಅವರು ರಚಿಸಿದ 'ಕುರುಗೋಡಿನ ಸಾಂಸ್ಕೃತಿಕ ಇತಿಹಾಸ' ಪುಸ್ತಕದಿಂದ ತಿಳುದುಬರುತ್ತದೆ.

> ಪಟ್ಟಣದಲ್ಲಿ ಮಹತ್ವದ ಶಾಸನಗಳು ಸೇರಿದಂತೆ ಐತಿಹಾಸಿಕ ಮಹತ್ವದ ಸುಂದರ ಕೆತ್ತನೆಯಿಂದ ಕೂಡಿದ ದೇವಾಲಯಗಳಿಗೆ. ಇವುಗಳ ಸಂರಕ್ಷಣೆಗಾಗಿ ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಗುವುದು.
> -ನರಸಪ್ಪ ತಹಶೀಲ್ದಾರ್ ಕುರುಗೋಡು


ಉದಯವಾಹಿನಿ ಚಿತ್ರ

ಹಾವೇರಿ ನಗರಸಭೆ ನಿಷ್ಕಾಳಜಿ • ಯಾಲಕ್ಕಿ ಕಂಪಿನ ನಾಡಿಗೆ ಕಳಂಕ • ಉಸ್ತುವಾರಿ ಕೊರತೆಯಿಂದ ಸೊರಗುತ್ತಿರುವ ಸ್ವಚ್ಛತಾ ವ್ಯವಸ್ಥೆ

# ವಿಲೇವಾರಿಯಾಗದ ಕಸ: ದುರ್ನಾತಕ್ಕೆ ಬೇಸತ್ತ ಜನ

• ಉದಯವಾಹಿನಿ, ಹಾವೇರಿ

ಎಲ್ಲೆಂದರಲ್ಲಿ ಕಾಣುವ ಕಸದ ರಾಶಿ. ಬೀದಿನಾಯಿ-ಹಂದಿಗಳಿಂದ ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿ ಬೀಳುವ ತ್ಯಾಜ್ಯ. ಗಲೀಜು ಪ್ರದೇಶವಾದ ಮಾರುಕಟ್ಟೆ. ಮೂಗು ಮುಚ್ಚಿಕೊಂಡು ಓಡಾಡುವ ಜನರು... ನಗರದಲ್ಲಿ ನಿತ್ಯವೂ ಕಂಡುಬರುವ ದೃಶ್ಯವಿದು. ನಗರದಲ್ಲಿ ಕಸ ವಿಲೇವಾರಿಗೂ ನಗರಸಭೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದು, ಇದರಿಂದಾಗಿ ಕಸದ ರಾಶಿಗಳು ವಾರಗಟ್ಟಲೇ ಒಂದೇ ಸ್ಥಳದಲ್ಲಿ ಇರುವಂತಾಗಿದೆ.

ಬಸ್ ನಿಲ್ದಾಣ, ಮಾರುಕಟ್ಟೆ, ಪ್ರಮುಖ ರಸ್ತೆ, ಶಾಲೆ-ಕಾಲೇಜು, ಆಸ್ಪತ್ರೆ ಸೇರಿದಂತೆ ವಿವಿಧ ಕಡೆಗಳಲ್ಲಿ ಕಸದ ರಾಶಿಗಳು ಕಣ್ಣಿಗೆ ಬಿದ್ದರೂ ಅದರ ವಿಲೇವಾರಿಗೆ ಅಧಿಕಾರಿಗಳು ಕ್ರಮ ಕೈಗೊಳ್ಳದಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಯಾಲಕ್ಕಿ ಕಂಪಿನ ನಾಡು' ಎಂಬ ಖ್ಯಾತಿ ಪಡೆದಿರುವ ಹಾವೇರಿ, ಇತ್ತೀಚಿನ ದಿನಗಳಲ್ಲಿ ಕಸದ ಸಮಸ್ಯೆಯಿಂದ ಅಪಖ್ಯಾತಿಗೆ ಒಳಗಾಗುತ್ತಿದೆ. ನಗರದ ಪ್ರಮುಖ ಪ್ರದೇಶಗಳಲ್ಲಿ ಚರಂಡಿಗಳು ತುಂಬಿ ಹೋಗಿದ್ದು, ಹೂಳು ತೆಗೆಯುವ ಕೆಲಸವಾಗಿಲ್ಲ. ಚರಂಡಿಯಲ್ಲಿ ನೀರು ನಿಂತು, ದುರ್ನಾತ ಬರುತ್ತಿದ್ದರೂ ನಗರಸಭೆ ಅಧಿಕಾರಿಗಳು ಕ್ಯಾರೆ ಎನ್ನುತ್ತಿಲ್ಲ. ಇದರ ಜೊತೆಯಲ್ಲಿಯೇ, ಕಸದ ಸಮಸ್ಯೆಯೂ ಉಲ್ಬಣಿಸುತ್ತಿದೆ. ಮನೆ ಹಾಗೂ ವ್ಯಾಪಾರ ಸ್ಥಳದಿಂದ ಕಸ ಸಂಗ್ರಹ ಮಾಡುವ ವ್ಯವಸ್ಥೆ ನಗರದಲ್ಲಿದೆ. ಆದರೆ, ಬಹುತೇಕ ಜನರು ಇಂದಿಗೂ ರಸ್ತೆ ಅಕ್ಕ-ಪಕ್ಕದಲ್ಲಿ ಕಸದ ರಾಶಿ ಹಾಕುತ್ತಿದ್ದಾರೆ. ಪ್ರಮುಖ ವೃತ್ತಗಳಲ್ಲಿ ಕಸ ಸಂಗ್ರಹಕ್ಕೆ ಇಟ್ಟಿರುವ ಕಬ್ಬಿಣದ ಬುಟ್ಟಿಗಳು ಕಿತ್ತುಹೋಗಿ ವರ್ಷವೇ ಆಗಿದೆ. ಅದೇ ಸ್ಥಳದಲ್ಲೂ ಕಸದ ರಾಶಿ ಹೆಚ್ಚಾಗುತ್ತಿದೆ.

ಮನೆ ಮನೆ ಕಸ ಸಂಗ್ರಹಿಸುವ ಸಿಬ್ಬಂದಿ, ರಸ್ತೆ ಅಕ್ಕ-ಪಕ್ಕದ ಕಸದ ರಾಶಿ ಸಂಗ್ರಹಿಸುತ್ತಿಲ್ಲ. ಅದು ತಮಗೆ ಸಂಬಂಧವಿಲ್ಲವೆಂದು ಹೇಳುತ್ತಿದ್ದಾರೆ. ಇದೇ ಕಾರಣಕ್ಕೆ ಹಲವು ದಿನಗಳ ಕಾಲ ಕಸದ ರಾಶಿ ವಿಲೇವಾರಿಯಾಗುತ್ತಿಲ್ಲ. ಕಸದ ಸ್ಥಳದಲ್ಲಿ ದುರ್ನಾತ ಬರುತ್ತಿದ್ದು, ರಸ್ತೆಯಲ್ಲಿ ಓಡಾಡುವ ಜನರು ಮೂಗು ಮುಚ್ಚಿಕೊಂಡು ಓಡಾಡಬೇಕಾದ ಸ್ಥಿತಿಯಿದೆ.

ಎಂ.ಜಿ. ರಸ್ತೆ, ಲಾಲ್ ಬಹದ್ದೂರ್ ಶಾಸ್ತ್ರಿ ಮಾರುಕಟ್ಟೆ, ದಾನೇಶ್ವರಿನಗರ, ಕೇರಿಮತ್ತೀಹಳ್ಳಿ ರಸ್ತೆ, ರೈಲ್ವೆ ನಿಲ್ದಾಣ ರಸ್ತೆ, ಹಾನಗಲ್ ರಸ್ತೆ, ಹಳೇ ಪಿ.ಬಿ. ರಸ್ತೆ ಹಾಗೂ ಸುತ್ತಮುತ್ತಲಿನ ರಸ್ತೆಗಳಲ್ಲಿ ನಿತ್ಯವೂ ಕಸದ ರಾಶಿ ಕಾಣಸಿಗುತ್ತಿದೆ.

ಕಸ ಸಂಗ್ರಹ ಹಾಗೂ ವಿಲೇವಾರಿ ಜವಾಬ್ದಾರಿ ವಹಿಸಿಕೊಂಡಿರುವ ಅಧಿಕಾರಿಗಳು, ತಮ್ಮ ಕೆಲಸವನ್ನು ಅಚ್ಚುಕಟ್ಟಾಗಿ ಮಾಡದಿರುವುದೇ ಕಸದ ಸಮಸ್ಯೆ ಹೆಚ್ಚಾಗಲು ಕಾರಣವೆಂದು ಜನರು ದೂರುತ್ತಿದ್ದಾರೆ.

**ರಸ್ತೆಯಲ್ಲಿ ಹರಡುವ ತ್ಯಾಜ್ಯ:** 'ಮಾರುಕಟ್ಟೆ ಪ್ರದೇಶದಲ್ಲಿರುವ ಅಂಗಡಿಯವರು ಸಹ ಕಸವನ್ನು ರಸ್ತೆಯ ಅಕ್ಕ-ಪಕ್ಕದಲ್ಲಿ ರಾಶಿ ಹಾಕುತ್ತಿದ್ದಾರೆ. ಈ ಕಸ, ಬೀದಿನಾಯಿಗಳು ಹಾಗೂ ಹಂದಿಗಳಿಂದಾಗಿ ರಸ್ತೆಯಲ್ಲೆಲ್ಲ ಹರಡುತ್ತಿದೆ' ಎಂದು ನಿವಾಸಿಗಳು ದೂರಿದರು. 'ಕಸವೆಲ್ಲವೂ ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿ ಬೀಳುತ್ತಿದೆ. ಈ ಮಾರ್ಗದಲ್ಲಿ ನಡೆದುಕೊಂಡು ಹೋಗುವ ಪಾದಚಾರಿಗಳು ಸಮಸ್ಯೆ ಅನುಭವಿಸುತ್ತಿದ್ದಾರೆ. ಮಾರುಕಟ್ಟೆ ಪ್ರದೇಶದಲ್ಲಂತೂ ಕಸದ ಮೇಲೆಯೇ ನಡಿಗೆ ಎಂಬ ಸ್ಥಿತಿಯಿದೆ. ಮಕ್ಕಳು, ವೃದ್ಧರು ಮಾರುಕಟ್ಟೆಗೆ ಹೋಗುವ ಸ್ಥಿತಿಯಿಲ್ಲ. ಹೋದರೆ, ಆರೋಗ್ಯ ಸಮಸ್ಯೆ ಉಂಟಾಗುವುದು ಖಚಿತ' ಎಂದು ಹೇಳಿದರು.

**ತೆರಿಗೆ ಸಂಗ್ರಹ:** 'ರಸ್ತೆಯ ಅಕ್ಕ-ಪಕ್ಕದಲ್ಲಿ ಹಾಗೂ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡುವ ವ್ಯಾಪಾರಿಗಳಿಂದ ನಗರಸಭೆಯವರು ತೆರಿಗೆ ಸಂಗ್ರಹ ಮಾಡುತ್ತಾರೆ. ಆದರೆ, ಕಸ ವಿಲೇವಾರಿಗೆ ಮಾತ್ರ ಅಧಿಕಾರಿಗಳು ಆಸಕ್ತಿ ತೋರುತ್ತಿಲ್ಲ. ತೆರಿಗೆ ಮಾತ್ರ ಸಂಗ್ರಹಿಸಿ ಲೆಕ್ಕ ತೋರಿಸುವ ಅಧಿಕಾರಿಗಳು, ಕಸ ಸಂಗ್ರಹ ಹಾಗೂ ವಿಲೇವಾರಿಯಲ್ಲಿ ಸಂಪೂರ್ಣ ನಿರ್ಲಕ್ಷ್ಯ ವಹಿಸುತ್ತಿದ್ದಾರೆ' ಎಂದು ಲಾಲ್ ಬಹದ್ದೂರ್ ಶಾಸ್ತ್ರಿ ಮಾರುಕಟ್ಟೆಯ ತರಕಾರಿ ವ್ಯಾಪಾರಿ ಇಮಾಮ್ ದೂರಿದರು.

ನಾನು ನಿತ್ಯವೂ ತರಕಾರಿ ಮಾರುತ್ತೇನೆ. ನಗರಸಭೆಯವರಿಗೆ ಜಾಗದ ಶುಲ್ಕ ನೀಡುತ್ತೇನೆ. ಸಂಜೆಯಾದ ನಂತರ, ಉಳಿದ ತರಕಾರಿಯನ್ನು ಮಾರುಕಟ್ಟೆಯ ನಿಗದಿತ ಜಾಗದಲ್ಲಿ ಹಾಕುತ್ತೇನೆ. ಆದರೆ, ಈ ಕಸವನ್ನು ಎರಡೂರು ದಿನವಾದರೂ ವಿಲೇವಾರಿ ಮಾಡುವುದಿಲ್ಲ. ವಿಲೇವಾರಿಯಾಗದ ಕಸದಿಂದ ದುರ್ನಾತ ಹೆಚ್ಚಾಗಿ, ಮಾರುಕಟ್ಟೆಯಲ್ಲಿ ಕುಳಿತುಕೊಳ್ಳಲು ಆಗುತ್ತಿಲ್ಲ ಎಂದು ಅಳಲು ತೋಡಿಕೊಂಡರು.


ಉದಯವಾಹಿನಿ ಚಿತ್ರ

### ಧರಣಿ ಸಂದರ್ಭದಲ್ಲೂ ಸಮಸ್ಯೆ

ಸರ್ಕಾರಿ ನೌಕರರೆಂದು ಪರಿಗಣಿಸಬೇಕು. ಗುತ್ತಿಗೆ ಆಧಾರದಲ್ಲಿರುವ ನೌಕರರಿಗೆ ನೇರ ವೇತನ ಪಾವತಿ ಮಾಡಬೇಕು' ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪೌರ ನೌಕರರು ಇತ್ತೀಚೆಗೆ ಧರಣಿ ನಡೆಸಿದ್ದರು. ಈ ಸಂದರ್ಭದಲ್ಲಿಯೂ ಹಾವೇರಿ ನಗರದಲ್ಲಿ ಕಸದ ಸಮಸ್ಯೆ ಉಂಟಾಗಿತ್ತು. ಈಗ ಯಾವುದೇ ಧರಣಿಯಿಲ್ಲ. ಅಷ್ಟಾದರೂ ಕಸದ ವಿಲೇವಾರಿ ಆಗುತ್ತಿಲ್ಲವೆಂದು ಜನರು ನಗರಸಭೆ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. 'ಕಸ ಸಂಗ್ರಹ ವಾಹನದ ಚಾಲಕರು ಲೋಡರ್ಸ್ ಕ್ಲೀನರ್ಸ್ ಮೇಲ್ವಿಚಾರಕರು ಏನು ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ನಗರಸಭೆ ಅಧಿಕಾರಿಗಳು ಮೇಲ್ವಿಚಾರಣೆ ಮಾಡುತ್ತಿಲ್ಲ. ಇದರಿಂದಾಗಿ ಕಸದ ಸಮಸ್ಯೆಯಾಗುತ್ತಿದೆ. ರಸ್ತೆಯಲ್ಲಿ ಓಡಾಡಲು ಆಗುತ್ತಿಲ್ಲ' ಎಂದು ಜನರು ಅಳಲು ತೋಡಿಕೊಂಡರು.

### ಸದಸ್ಯರ ಮಾತು ಕೇಳದ ಅಧಿಕಾರಿಗಳು

ಹಾವೇರಿ ನಗರಸಭೆಯಲ್ಲಿರುವ ಅಧಿಕಾರಿಗಳು ಸದಸ್ಯರ ಮಾತು ಕೇಳುತ್ತಿಲ್ಲವೆಂಬ ಆರೋಪವಿದೆ. ಕಸ ಹಾಗೂ ಇತರೆ ಸಮಸ್ಯೆ ಅನುಭವಿಸುತ್ತಿರುವ ಜನರು ತಮ್ಮ ಸದಸ್ಯರ ಬಳಿ ಅಳಲು ತೋಡಿಕೊಳ್ಳುತ್ತಿದ್ದಾರೆ. ಅದೇ ಸಮಸ್ಯೆಯನ್ನು ಸದಸ್ಯರು ಅಧಿಕಾರಿಗಳ ಗಮನಕ್ಕೆ ತಂದರೆ ಯಾವುದೇ ಪ್ರತಿಕ್ರಿಯೆ ನೀಡುತ್ತಿಲ್ಲವೆಂಬ ಆರೋಪ ಹೆಚ್ಚಾಗಿದೆ. ಅಧ್ಯಕ್ಷ ಉಪಾಧ್ಯಕ್ಷ ಹಾಗೂ ಸದಸ್ಯರು ಜನರಿಂದ ಆಯ್ಕೆಯಾಗಿ ನಗರಸಭೆಗೆ ಬಂದಿದ್ದಾರೆ. ಆದರೆ ಇವರು ಹೇಳಿದ ಮಾತುಗಳನ್ನು ಅಧಿಕಾರಿಗಳು ಕೇಳುತ್ತಿಲ್ಲ. ಇದೇ ಕಾರಣಕ್ಕೆ ನಗರದಲ್ಲಿ ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ. ಕಸ ಕುಡಿಯುವ ನೀರು ಸ್ವಚ್ಛತೆ ಕೊರತೆ ಸೇರಿ ವಿವಿಧ ಸಮಸ್ಯೆಗಳು ಹೆಚ್ಚಾಗುತ್ತಿವೆ' ಎಂದು ಸದಸ್ಯರೊಬ್ಬರು ಹೇಳಿದರು.

## ಬೆಳಗಾವಿ ಅಧಿವೇಶನದಲ್ಲಿ ಉ.ಕರ್ನಾಟಕದ ಪರ ಧ್ವನಿ ಎತ್ತುತ್ತೇವೆ: ಸಿ.ಟಿ ರವಿ

• ಉದಯವಾಹಿನಿ, ಚಿಕ್ಕಮಗಳೂರು.

ಬೆಳಗಾವಿ ಅಧಿವೇಶನ ಒಂದು ವಿಶೇಷವಾದ ಅಧಿವೇಶನ. ಇಲ್ಲಿ ಮುಖ್ಯವಾಗಿ ಸಮಸ್ತ ಸಮಸ್ಯೆಗಳನ್ನೂ ಚರ್ಚಿಸುವ ಉದ್ದೇಶ ನಮಗಿದೆ. ಅದರಲ್ಲೂ, ಉತ್ತರ ಕರ್ನಾಟಕದಲ್ಲಿ ಸಾಕಷ್ಟು ಸಮಸ್ಯೆಗಳಿದ್ದು, ಅವೆಲ್ಲವನ್ನೂ ಚರ್ಚಿಸುವುದು ಬಿಜೆಪಿ ಉದ್ದೇಶವಾಗಿದೆ. ಆದರೆ, ಇಲ್ಲಿ ನಡೆದಿರುವ ಚರ್ಚೆಗಳು ಕಾರ್ಯರೂಪಕ್ಕೆ ಬರದೆ, ಒಣ ಚರ್ಚೆಯಾಗಿಯೇ ಉಳಿದರೆ ಅದರಿಂದ ಯಾವುದೇ ಪ್ರಯೋಜನವಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ ರವಿ ಹೇಳಿದರು.


ಅವರು ಬೆಳಗಾವಿ ಅಧಿವೇಶನದ ಹಿನ್ನಲೆಯಲ್ಲಿ ಮಾಧ್ಯಮಗಳೊಡನೆಮಾತನಾಡುತ್ತಿದ್ದರು. ಕೇವಲ ಒಣ ಚರ್ಚೆಯನ್ನಷ್ಟೇ ನಡೆಸುತ್ತಿದ್ದರೆ, ಬೆಳಗಾವಿ ಅಧಿವೇಶನದಿಂದ ಯಾವುದೇ ಪ್ರಯೋಜನವಿಲ್ಲ. ಇದು ಒಂದು ರೀತಿ ಮೊಹಮ್ಮದ್ ಬಿನ್ ತುಘಲಕ್ ದೆಹಲಿಯಿಂದ ದೇವಗಿರಿಗೆ ರಾಜಧಾನಿ ವರ್ಗಾಯಿಸಿ, ಜನರಿಗೆ ತೊಂದರೆ ನೀಡಿದಂತಾಗುತ್ತದೆ ಅಷ್ಟೇ. ಇಲ್ಲಿ ನಡೆದ ಚರ್ಚೆಗಳಿಂದ ಜನರಿಗೆ ಪ್ರಯೋಜನ ಆಗಬೇಕು. ನಿರ್ಣಯಗಳು ಅನುಷ್ಠಾನಕ್ಕೆ ಬರಬೇಕು ಎಂದು ರವಿ ಹೇಳಿದರು. ಸದನದಲ್ಲಿ ವಸ್ತುನಿಷ್ಠವಾಗಿ ಚರ್ಚಿಸಬೇಕು. ಭ್ರಷ್ಟಾಚಾರ ಈಗ ರಾಜ್ಯದಲ್ಲಿ ಮಿತಿಮೀರುತ್ತಿದೆ. ಇದರಿಂದಾಗಿ ಜನರು ವ್ಯವಸ್ಥೆಯ ಮೇಲೆ ನಂಬಿಕೆ ಕಳೆದುಕೊಳ್ಳುವ ಸ್ಥಿತಿ ಎದುರಾಗಬಹುದು. ಇಷ್ಟು ಸುಂದರವಾದ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಜನ ನಂಬಿಕೆ ಕಳೆದುಕೊಳ್ಳುವಂತೆ ಆಗಬಾರದು ಎನ್ನುವುದು ನಮ್ಮ ಕಾಳಜಿ ಎಂದರು.

ಅಕ್ರಮ ಗೋ ಸಾಗಾಣಿಕೆ ಮತ್ತು ದ್ವೇಷ ಭಾಷಣಕ್ಕೆ ಸಂಬಂಧಿಸಿದಂತೆ, ಸರ್ಕಾರ ಸತ್ಯವನ್ನೂ ದ್ವೇಷ ಎನ್ನುತ್ತಿದ್ದೆಯೇ? ಅಥವಾ ಗೋ ಕಳ್ಳ ಸಾಗಣೆದಾರರ ಮೇಲೆ ಸರ್ಕಾರಕ್ಕೆ ಸಿಂಪತಿಯೇ? ಈ ಕುರಿತು ಸದನದಲ್ಲಿ ಚರ್ಚೆ ಆಗಬೇಕಲ್ಲ? ಎಂದರು. ನಾಳೆ ರೈತರ ಪರವಾಗಿ ನಮ್ಮ ಪ್ರತಿಭಟನೆ ನಡೆಯಲಿದ್ದು, ಇದು ಪಕ್ಷಾಧಾರಿತವೂ ಅಲ್ಲ, ಸಾಂಕೇತಿಕವೂ ಅಲ್ಲ. ಕಳೆದ ಒಂದೂವರೆ ತಿಂಗಳಿಂದ ರೈತರು ಎಫ್‌ಆರ್‌ಪಿ ಕೇಳಿ ಪ್ರತಿಭಟನೆ ನಡೆಸುತ್ತಿದ್ದಾರೆ. ಅವರು ಬೀದಿಗೆ ಬಂದು ನ್ಯಾಯ ಕೇಳುತ್ತಿದ್ದಾರೆ. ಕೇಂದ್ರ ಸರ್ಕಾರ 3,550 ರೂಪಾಯಿ ಎಫ್‌ಆರ್‌ಪಿ ನಿಗದಿಪಡಿಸಿದ ನಂತರವೂ, ರಾಜ್ಯ ಸರ್ಕಾರ ರೈತರಿಗೆ ಅದನ್ನು ಕೊಡಿಸಲು ಯಾವ ಕ್ರಮ ಕೈಗೊಂಡಿದೆ ಎಂದು ರವಿ ಪ್ರಶ್ನಿಸಿದರು.

ಮೆಕ್ಕೆ ಜೋಳಕ್ಕೆ ಕೇಂದ್ರ ಸರ್ಕಾರ 2,400 ರೂಪಾಯಿ ಎಂಎಸ್‌ಪಿ ನಿಗದಿಪಡಿಸಿದೆ.

ರಾಜ್ಯ ಸರ್ಕಾರಕ್ಕೆ ಖರೀದಿ ಕೇಂದ್ರ ತೆರೆಯುವ ಕೆಲಸವಷ್ಟೇ ಇತ್ತು. ಆದರೆ, ಇವರು ಅದನ್ನೂ ಮಾಡಿಲ್ಲ. 90% ರೈತರು ಈಗಾಗಲೇ ಮೆಕ್ಕೆಜೋಳವನ್ನು 1,700-1,800 ರೂಪಾಯಿಗೆ ಮಾರಾಟ ಮಾಡಿಬಿಟ್ಟಿದ್ದಾರೆ. ನಾವು ಹೋರಾಟ ಮಾಡಿದ ಮೇಲೆ, ಖರೀದಿ ಕೇಂದ್ರ ತೆರೆದು, ಎಕರೆಗೆ 5 ಕ್ವಿಂಟಾಲ್ ಹಾಗೆ ಖರೀದಿ ಮಾಡುವುದಾಗಿ ಹೇಳಿದ್ದಾರೆ. ಅಂದರೆ, ಸರ್ಕಾರ ರೈತರ ಪರವಾಗಿದೆಯೇ ಅಥವಾ ದಲ್ಲಾಳಿಗಳ ಪರವೇ ಎಂದು ರವಿ ರಾಜ್ಯ ಸರ್ಕಾರವನ್ನು ಟೀಕಿಸಿದರು.

> ತುಂಗಭದ್ರಾ ಅಣೆಕಟ್ಟಿಗೆ ಗೇಟ್ ಹಾಕಲು ಸರ್ಕಾರಕ್ಕೆ ಎರಡು ವರ್ಷ ಬೇಕೇ? ಸರ್ಕಾರದ ಆದ್ಯತೆ ಯಾವುದು ಬೆಳಗಿನ ತಿಂಡಿ, ಮಧ್ಯಾಹ್ನದ ಊಟ ಇದೇ ಇವರಿಗೆ ಮುಖ್ಯ ವಿಚಾರವಾಗಿದೆ. ನಾವು ರಾಜ್ಯದ 170 ತಾಲ್ಲೂಕುಗಳಲ್ಲಿ ರೈತರ ಪರವಾಗಿ ಹೋರಾಟ ಮಾಡಿದ ನಂತರವೇ ಬೆಳಗಾವಿಗೆ ಬಂದಿದ್ದೇವೆ. ಸರ್ಕಾರಕ್ಕೆ ರೈತರ ಧ್ವನಿ ಕೇಳದ ಕಾರಣ ನಾವು ಪ್ರತಿಭಟನೆಗೆ ಇಳಿದಿದ್ದೇವೆ. -ಸಿ.ಟಿ ರವಿ



## ನಗರ ಕೇಂದ್ರ ಗ್ರಂಥಾಲಯದಲ್ಲಿ ಶೌಚಾಲಯ ಸಮಸ್ಯೆ

• ಉದಯವಾಹಿನಿ, ಕಲಬುರಗಿ

ಇಲ್ಲಿನ ನಗರ ಕೇಂದ್ರ ಗ್ರಂಥಾಲಯದಲ್ಲಿ ಶೌಚಾಲಯ ಸಮಸ್ಯೆ ತಲೆದೋರಿದೆ. ಪತ್ರಿಕೆ, ಪುಸ್ತಕ ಮತ್ತು ಸ್ಪರ್ಧಾತ್ಮಕ ಪರೀಕ್ಷೆ ತಯಾರಿಗಾಗಿ ಆಕರ ಗ್ರಂಥಗಳನ್ನು ಓದಲು ಗ್ರಂಥಾಲಯಕ್ಕೆ ಬರುವ ವಿದ್ಯಾರ್ಥಿಗಳು, ವೃದ್ಧರು, ಸಾರ್ವಜನಿಕರು ಅಗತ್ಯವಾದ ಶೌಚಾಲಯ ವ್ಯವಸ್ಥೆ ಇಲ್ಲದೆ ಪರದಾಡುವಂತಾಗಿದೆ.

ಗ್ರಂಥಾಲಯಕ್ಕೆ ನಿತ್ಯ ಸರಿ ಸುಮಾರು 400 ರಿಂದ 500 ಜನರು ಬಂದು ಹೋಗುತ್ತಾರೆ. ಆದರೆ, ಗ್ರಂಥಾಲಯದಲ್ಲಿ ಪುರುಷ ಮತ್ತು ಮಹಿಳೆಯರಿಗಾಗಿ ತಲಾ ಒಂದೊಂದು ಶೌಚಾಲಯವಿರುವುದರಿಂದ ಮೂತ್ರ ವಿಸರ್ಜನೆಗಾಗಿ ತಾಸೊತ್ತು ಸರತಿ ಸಾಲಿನಲ್ಲಿ ನಿಲ್ಲಬೇಕಾದ ಪರಿಸ್ಥಿತಿ ಎದುರಾಗಿದೆ.

ಗ್ರಂಥಾಲಯಕ್ಕೆ ಆಗಮಿಸುವ ವಿದ್ಯಾರ್ಥಿಗಳು, ಸಾರ್ವಜನಿಕರು ಮತ್ತು ವೃದ್ಧರು ಇದರಿಂದ ಸಾಕಷ್ಟು ತೊಂದರೆಯನ್ನು ಅನುಭವಿಸುವಂತಾಗಿದೆ. ಗ್ರಂಥಾಲಯ ಪಕ್ಕದಲ್ಲಿ ಹೆಚ್ಚಿನ ಮೂತ್ರಾಲಯಗಳನ್ನು ನಿರ್ಮಿಸುವಂತೆ ಮುಖ್ಯ ಗ್ರಂಥಪಾಲಕರಿಗೆ, ಮಹಾನಗರ ಪಾಲಿಕೆ ಆಯುಕ್ತರಿಗೆ ಕಳೆದ ಎರಡು ವರ್ಷಗಳಿಂದ ಮನವಿ ಮಾಡುತ್ತ ಬಂದಿದ್ದರೂ ಅನುದಾನವಿಲ್ಲ, ಅನುದಾನ ಬಂದ ಮೇಲೆ ಅಗತ್ಯವಾದ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳುತ್ತಲೇ ಇದ್ದಾರೆಯೇ ಹೊರತು ಗ್ರಂಥಾಲಯದ ಪಕ್ಕದಲ್ಲಿ ಹೆಚ್ಚಿನ ಮೂತ್ರಾಲಯಗಳ ನಿರ್ಮಾಣಕ್ಕೆ ಇದುವರೆಗೂ ಮುಂದಾಗಿಲ್ಲ ಎಂದು ಸಾಮಾಜಿಕ ಕಾರ್ಯಕರ್ತ ಶ್ರೀಕಾಂತ ಬಿರಾದಾರ ದೂರಿದ್ದಾರೆ.

ಮುಖ್ಯ ಗ್ರಂಥಪಾಲಕರು ಮತ್ತು ಮಹಾನಗರ ಪಾಲಿಕೆ ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ಮತ್ತು ವೃದ್ಧರಿಗೆ ಆಗುತ್ತಿರುವ ಈ ತೊಂದರೆಯ ಬಗ್ಗೆ ಗಮನ ಹರಿಸಿ ಅಗತ್ಯವಾದ ಶೌಚಾಲಯ ಮತ್ತು ಮೂತ್ರಾಲಯಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕಿದೆ.


ಉದಯವಾಹಿನಿ ಚಿತ್ರ

**ಶೌಚಾಲಯ ವ್ಯವಸ್ಥೆ ಇಲ್ಲದೆ ಪರದಾಟ**

## ಕಲಿಕೆಗೆ ಅನುಕೂಲ ವಾತಾವರಣ ಮಕ್ಕಳ ಭವಿಷ್ಯಕ್ಕೆ ಹೊಸ ಚೈತನ್ಯ

• ಉದಯವಾಹಿನಿ, ವಿಜಯಪುರ

ಉತ್ತಮ ಮೂಲಸೌಕರ್ಯ, ಸುಸಜ್ಜಿತ ತರಗತಿ ಕೊಠಡಿಗಳು ಮತ್ತು ಕಲಿಕೆಗೆ ಅನುಕೂಲವಾದ ವಾತಾವರಣ ಮಕ್ಕಳ ಭವಿಷ್ಯಕ್ಕೆ ಹೊಸ ಚೈತನ್ಯ ತುಂಬುತ್ತವೆ ಎಂದು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ. ಬಬಲೇಶ್ವರತಿಕೋಟಾ ತಾಲ್ಲೂಕಿನ ಕಣಮುಚನಾಳದಲ್ಲಿ ಟೊಯೋಟಾ ಕಿರ್ಲೋಸ್ಕರ್ ಸಂಸ್ಥೆ ವತಿಯಿಂದ ಸಿ.ಎಸ್.ಆರ್ ಅನುದಾನದಲ್ಲಿ ನಿರ್ಮಿಸಲಾಗಿರುವ ಸರಕಾರಿ ನೂತನ ಪ್ರೌಢಶಾಲೆ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು. ಈ ಪ್ರೌಢಶಾಲೆ ಕಟ್ಟಡ ನಿರ್ಮಾಣಕ್ಕೆ ಅದೇ ವರ್ಷದ ಜನವರಿಯಲ್ಲಿ ಗುದ್ದಲಿ ಪೂಜೆ ನೆರವೇರಿಸಿ ಇದೇ ವರ್ಷಾಂತ್ಯದೊಳಗೆ ಲೋಕಾರ್ಪಣೆ ಮಾಡುವ ಭರವಸೆ ನೀಡಿದ್ದೆ. ಅದು ಈಗ ಸಾಕಾರವಾಗಿದೆ. ಸಕಾಲಕ್ಕೆ ಅನುದಾನ ನೀಡಿರುವ ಸಂಸ್ಥೆಗೆ ಕೃತಜ್ಞತೆಗಳು. ಈ ಶಾಲೆಯಲ್ಲಿ ಮಕ್ಕಳಿಗೆ ಬಿಸಿ ಊಟ ತಯಾರಿಸಲು ಗುಣಮಟ್ಟದ ಅಡುಗೆ ಮನೆ, ಭೋಜನ ಶಾಲೆ, ಉಪಾಧ್ಯಾಯರಿಗೆ ವಿರಮಿಸಿಕೊಳ್ಳಲು ಸ್ಟಾಫ್ ರೂಂ, ಶೌಚಾಲಯ ಸೇರಿದಂತೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ. ಈ ಆಧುನಿಕ ಶಾಲಾ ಕಟ್ಟಡವು ಗ್ರಾಮೀಣ ಮಕ್ಕಳ ಗುಣಮಟ್ಟದ ಶಿಕ್ಷಣಕ್ಕೆ ಹೊಸ ದಿಕ್ಕುನೀಡಲಿದೆ ಎಂದರು.


ಉದಯವಾಹಿನಿ ಚಿತ್ರ


## ಬೆಳೆಹಾನಿ ಪರಿಹಾರ ಪಾವತಿಯಲ್ಲಿ ತಾರತಮ್ಯ ದೂರು: ಪರಿಶೀಲಿಸಿ ಸರಿಪಡಿಸುವಂತೆ ಡಾ.ಅಜಯ್ ಸಿಂಗ್ ಸೂಚನೆ

• ಉದಯವಾಹಿನಿ, ಕಲಬುರಗಿ

ಬೆಳೆಹಾನಿಗೆ ಪರಿಹಾರ ನೀಡುವಲ್ಲಿ ರಾಜ್ಯ ಸರ್ಕಾರದ ಕ್ರಮವನ್ನು ರಾಜ್ಯದ ರೈತರು ವ್ಯಾಪಕ ಶ್ಲಾಘನೆ ವ್ಯಕ್ತಪಡಿಸಿದ್ದಾರೆ, ಆದಾಗ್ಯೂ ಕೆಲವು ಕಡೆ ಪರಿಹಾರ ವಿತರಣೆಯಲ್ಲಿ ಹೆಚ್ಚುಕಮ್ಮಿ ಆಗಿದೆ ಎಂಬ ದೂರುಗಳಿವೆ. ಇವನ್ನೆಲ್ಲ ಗಮನಿಸಲಾಗಿದ್ದು ಬೆಳಗಾವಿ ಸದನದಲ್ಲಿ ಪ್ರಸ್ತಾಪಿಸಿ ರೈತರಿಗೆ ಹೆಚ್ಚಿನ ಪರಿಹಾರ ದೊರಕಿಸಲು ಯತ್ನಿಸಲಾಗುತ್ತದೆ ಎಂದು ಕೆಕೆಆರ್‌ಡಿಬಿ ಅಧ್ಯಕ್ಷರು ಹಾಗೂ ಜೇವರ್ಗಿ ಶಾಸಕರೂ ಆಗಿರುವ ಡಾ. ಅಜಯ್ ಧರ್ಮಸಿಂಗ್ ಹೇಳಿದ್ದಾರೆ.

ಈ ಕುರಿತಂತೆ ಹೇಳಿಕೆ ನೀಡಿರುವ ಅವರು, ರಾಜ್ಯದ 14.24 ಲಕ್ಷ ಫಲಾನುಭವಿಗಳಿಗೆ ಒಟ್ಟು 1,033.60 ಕೋಟಿ ಇನ್ ಪುಟ್ ಸಬ್ಸಿಡಿ ಮೊತ್ತ ರೈತರ ಖಾತೆಗೆ ವರ್ಗಾವಣೆ ಆರಂಭಿಸಿದೆ, ಈಗಾಗಲೇ 2 ಕಂತುಗಳಲ್ಲಿ ಹಣ ರೈತರ ಖಾತೆಗೆ ತಲುಪಿದೆ. ಕೆಲವು ಖಾತೆಗಳು ಲಿಂಕ್ ಆಗದ್ದಕ್ಕೆ ಹಣ ವರ್ಗಾವಣೆಯಾಗಿಲ್ಲ. ಆ ಸಮಸ್ಯೆ ಕೂಡಾ ಪರಿಹರಿಸುವ ಕೆಲಸ ಜಿಲ್ಲಾಡಳಿತ ಮಾಡುತ್ತಿದೆ. ಕಲಬುರಗಿ ಜಿಲ್ಲೆಯ ಒಟ್ಟು 3.24 ಲಕ್ಷ ಹೆಕ್ಟೇರ್ ಪ್ರದೇಶದ ಬೆಳೆ ಹಾನಿಯಾಗಿದ್ದು, ಅದರಲ್ಲಿ ಪಾವತಿಗೆ ಪರಿಗಣಿಸಲಾಗಿರುವ ವಿಸ್ತೀರ್ಣ 2,91,381.52 ಹೆಕ್ಟರ್ ಇದ್ದು ಒಟ್ಟು 3.23 ಲಕ್ಷ ಫಲಾನುಭವಿ ರೈತರಿಗೆ ರೂ 25,097.21 ಲಕ್ಷ ಪಾವತಿ ಪ್ರಕ್ರಿಯೆಯಲ್ಲಿದೆ. ರಾಜ್ಯದ 14.24 ಲಕ್ಷ ಫಲಾನುಭವಿಗಳಿಗೆ ಇನ್ ಪುಟ್ ಸಬ್ಸಿಡಿ ರೂ 1,033.60 ಕೋಟಿ ರೈತರ ಖಾತೆಗೆ ವರ್ಗಾವಣೆಗೆ ಕ್ರಮವಹಿಸಲಾಗಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾಂಕೇತಿಕವಾಗಿ ಪರಿಹಾರದ ಹಣವನ್ನು ರೈತರ ಖಾತೆಗೆ ವರ್ಗಾಯಿಸುವ ಮೂಲಕ ಪರಿಹಾರ ಹಂಚಿಕೆಗೆ ಚಾಲನೆ ನೀಡಿದ್ದಾರೆ.

> ಈ ಮಧ್ಯೆ ಸಮೀಕ್ಷೆಯಲ್ಲಿನ ಕೆಲವು ದೋಷಗಳು, ಹಣ ವಿತರಣೆಯಲ್ಲಿನ ಹೆಚ್ಚು ಕಮ್ಮಿ ಇವೆಲ್ಲವೂ ಚರ್ಚೆಯಲ್ಲಿವೆ. ಪತ್ರಿಕೆ ವರದಿಗಳನ್ನೂ ಗಮನಿಸಲಾಗಿದೆ. ಇವನ್ನೆಲ್ಲ ಬೆಳಗಾವಿ ಸದನದಲ್ಲಿ ಸರ್ಕಾರದ ಗಮನಕ್ಕೆ, ಸಿಎಂ ಹಾಗೂ ಕೃಷಿ ಸಚಿವರ ಗಮನಕ್ಕೆ ತಂದು ರೈತರಿಗೆ ಪರಿಹಾರ ಕೈ ತಲುಪುವಂತೆ ಮಾಡಲಾಗುತ್ತದೆ.
> -ಡಾ. ಅಜಯ್ ಸಿಂಗ್



# ಹದಗೆಟ್ಟ ರಸ್ತೆಗಳು; ಸಂಚಾರ ಸಂಕಟ: ಅಧಿಕಾರಿಗಳ ವಿರುದ್ಧ ಜನರ ಹಿಡಿಶಾಪ

### ಏಷ್ಯಾ ಖಂಡದಲ್ಲಿಯೇ ಅತೀ ದೊಡ್ಡ ಮೆಣಸಿನಕಾಯಿ ಮಾರುಕಟ್ಟೆ' ಹೊಂದಿರುವ ಖ್ಯಾತಿ ಪಡೆದ ಬ್ಯಾಡಗಿ ಪಟ್ಟಣ

• ಉದಯವಾಹಿನಿ, ಬ್ಯಾಡಗಿ

ಕಿತ್ತುಹೋದ ಡಾಂಬರ್ ರಸ್ತೆಯಲ್ಲಿ ಹೆಚ್ಚಾದ ಗುಂಡಿಗಳು. ಮಳೆ ನೀರು ನಿಂತು ಹಾಳಾದ ರಸ್ತೆಯಲ್ಲಿ ಸಂಚರಿಸಲು ಭಯಪಡುವ ಜನರು. ಭಾರಿ ವಾಹನಗಳ ಓಡಾಟದಿಂದ ಹೆಚ್ಚಾದ ದೂಳು. ಹದಗೆಟ್ಟ ರಸ್ತೆಗಳ ದುಸ್ಥಿತಿ ಕಂಡು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಹಿಡಿಶಾಪ ಹಾಕುವ ಜನರು...

'ಏಷ್ಯಾ ಖಂಡದಲ್ಲಿಯೇ ಅತೀ ದೊಡ್ಡ ಮೆಣಸಿನಕಾಯಿ ಮಾರುಕಟ್ಟೆ' ಹೊಂದಿರುವ ಖ್ಯಾತಿ ಪಡೆದ ಬ್ಯಾಡಗಿ ಪಟ್ಟಣ, ಇತ್ತೀಚಿನ ದಿನಗಳಲ್ಲಿ ಹದಗೆಟ್ಟ ರಸ್ತೆಗಳಿಂದಾಗಿ ಅಪಖ್ಯಾತಿ ಪಡೆಯುತ್ತಿದೆ.

ವ್ಯಾಪಾರಕ್ಕೆ ಹೇಳಿ ಮಾಡಿಸಿದ ಪಟ್ಟಣವಾಗಿದ್ದ ಬ್ಯಾಡಗಿಯಲ್ಲಿ ಈ ಹಿಂದೆ ಬೆಲ್ಲ, ಶೇಂಗಾ, ಹತ್ತಿ, ಬೆಳ್ಳುಳ್ಳಿ, ಅಡಿಕೆ ಸೇರಿದಂತೆ ಎಲ್ಲಾ ದಿನಸಿ ವಸ್ತುಗಳ ಮಾರಾಟ ಜೋರಾಗಿತ್ತು. ಈಗ, ಸಾರಿಗೆ ಸಂಪರ್ಕ ಸಮಸ್ಯೆ ಹಾಗೂ ರಾಜಕಾರಣಿಗಳ ಇಚ್ಛಾಶಕ್ತಿಯ ಕೊರತೆಯಿಂದ ದಿನಸಿ ವಸ್ತುಗಳ ಮಾರಾಟ ಕಣ್ಮರೆಯಾಗಿದೆ. ಮೆಣಸಿನಕಾಯಿ ಮಾತ್ರ ಉಳಿದುಕೊಂಡು, ಬ್ಯಾಡಗಿಗೆ ಹೆಸರು ತಂದುಕೊಟ್ಟಿದೆ.

ಇಕ್ಕಟ್ಟಾದ ರಸ್ತೆಗಳು, ಪದೇ ಪದೇ ನಿರ್ಮಿಸಿದರೂ ಕಳಪೆ ಕಾಮಗಾರಿಯಿಂದ ಬಹುಬೇಗನೇ ಹಾಳಾದ ರಸ್ತೆಗಳು. ಸ್ಥಳೀಯರು ಮಾತ್ರವಲ್ಲದೇ ಮೆಣಸಿನಕಾಯಿ ವ್ಯಾಪಾರಕ್ಕಾಗಿ ಬ್ಯಾಡಗಿಗೆ ಬರುವ ಹೊರ ಜಿಲ್ಲೆ ಹಾಗೂ ಹೊರ ರಾಜ್ಯದವರು, ಸ್ಥಳೀಯ ಶಾಸಕ ಹಾಗೂ ಜನಪ್ರತಿನಿಧಿಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ.

ಲೋಕೋಪಯೋಗಿ ಇಲಾಖೆಯ ಸುಪರ್ದಿಯಲ್ಲಿರುವ ರಾಜ್ಯ ಹೆದ್ದಾರಿಯು ಇಂದಿಗೂ ವಿಸ್ತರಣೆಯಾಗುತ್ತಿಲ್ಲ. ಪಟ್ಟಣ ಸಂಪರ್ಕಿಸುವ ಬ್ಯಾಡಗಿ-ಕುಮ್ಮೂರು ರಸ್ತೆ, ಕಾಗಿನೆಲೆ ರಸ್ತೆ, ಕದರಮಂಡಲಗಿ ರಸ್ತೆ, ಕಾಕೋಳ ರಸ್ತೆ, ಮೋಟೆಬೆನ್ನೂರು ರಸ್ತೆ, ರಟ್ಟಿಹಳ್ಳಿ ರಸ್ತೆ, ಹಂಸಬಾವಿ ರಸ್ತೆಗಳು ಭಾಗಶಃ ಹಾಳಾಗಿವೆ. ಎಲ್ಲೆಂದರಲ್ಲಿ ತಗ್ಗುಗಳು ಬಿದ್ದು, ಸಂಚಾರ ಸಂಕಟ ಎದುರಾಗಿದೆ. ಗುಮ್ಮನಹಳ್ಳಿ, ಅಗರಗಟ್ಟಿ, ಮಾಸಣಗಿ, ಕುಮ್ಮೂರು ಗ್ರಾಮಗಳನ್ನು ಸಂಪರ್ಕಿಸುವ, ತೆರೆದಹಳ್ಳಿ, ಮಲ್ಲೂರು, ಹೆಡಿಗೊಂಡ, ಕಾಗಿನೆಲೆ ಗ್ರಾಮಗಳನ್ನು ಸಂಪರ್ಕಿಸುವ ರಸ್ತೆಗಳು ತೀರಾ ಹದಗೆಟ್ಟಿವೆ. ಈ ರಸ್ತೆಗಳ ಬದಿಯಲ್ಲಿ 30ಕ್ಕೂ ಹೆಚ್ಚು ಕೋಲ್ಡ್ ಸ್ಟೋರೇಜ್, ಖಾರದಪುಡಿ ತಯಾರಿಸುವ ಬೃಹತ್ ಕೈಗಾರಿಕಾ ಘಟಕಗಳಿವೆ. ನಿತ್ಯ ಸಾವಿರಾರು ವಾಹನಗಳ ಓಡಾಟ ನಡೆಯುತ್ತಿದ್ದರೂ ರಸ್ತೆ ದುರಸ್ತಿಗೆ ಸರ್ಕಾರ ಮುಂದಾಗುತ್ತಿಲ್ಲ ಎನ್ನುವುದು ಸಾರ್ವಜನಿಕರ ಆರೋಪವಾಗಿದೆ.

**ಮುಖ್ಯ ರಸ್ತೆ ಕೆಲಸವೂ ವಿಳಂಬ:** ಸೊರಬ-ಗಜೇಂದ್ರಗಡ ರಾಜ್ಯ ಹೆದ್ದಾರಿ ಹಾದು ಹೋಗಿರುವ ಪಟ್ಟಣದ ಮುಖ್ಯ ರಸ್ತೆ ವಿಸ್ತರಣೆಗೆ 14 ವರ್ಷಗಳಿಂದ ಹೋರಾಟ ನಡೆಯುತ್ತಿದೆ. ಆದರೆ, ಇಂದಿಗೂ ರಸ್ತೆ ವಿಸ್ತರಣೆ ವಿಳಂಬವಾಗಿದೆ.




ಉದಯವಾಹಿನಿ ಚಿತ್ರ

> ಬ್ಯಾಡಗಿಯ ಬಹುತೇಕ ರಸ್ತೆಗಳು ಹದಗೆಟ್ಟು ಗುಂಡಿ ಬಿದ್ದಿವೆ. ಅಲ್ಲಲ್ಲಿ ಜಲ್ಲಿಕಲ್ಲು ಹಾಕಿದರೂ ಬೇಗನೇ ಕಿತ್ತು ಹೋಗುತ್ತಿವೆ. ಇಂಥ ರಸ್ತೆಯಲ್ಲಿ ಓಡಾಡುವುದು ಕಷ್ಟವಾಗಿದೆ.
> -ರಾಮಣ್ಣ ಬ್ಯಾಡಗಿ ನಿವಾಸಿ

**ಹದಗೆಟ್ಟ ರಸ್ತೆಗಳಿಂದಾಗಿ ಅಪಖ್ಯಾತಿ**

### ಹೆಚ್ಚಾದ ದೂಳು: ರೋಗ ಭೀತಿ

ಬ್ಯಾಡಗಿಯ ಹಲವು ರಸ್ತೆಗಳಲ್ಲಿ ಭಾರಿ ವಾಹನಗಳು ಓಡಾಡುತ್ತಿವೆ. ರಸ್ತೆಯೂ ಹಾಳಾಗಿದ್ದರಿಂದ ದೂಳು ಹೆಚ್ಚಾಗಿ ಏಳುತ್ತಿವೆ. ಇದರಿಂದಾಗಿ ಸ್ಥಳೀಯ ಜನರು ರೋಗ ಭೀತಿ ಎದುರಿಸುತ್ತಿದ್ದಾರೆ ಎಂದು ಮಾಜಿ ಸೈನಿಕ ಎಂ.ಡಿ. ಚಿಕ್ಕಣ್ಣನವರ ಹೇಳಿದರು. ನಿತ್ಯವೂ ಅಪಾರ ಪ್ರಮಾಣದ ದೂಳು ಬರುತ್ತಿದೆ. ಪಾದಚಾರಿಗಳು ರಸ್ತೆ ಅಕ್ಕ ಪಕ್ಕದ ಮಳಿಗೆ ಮಾಲೀಕರು ಗ್ರಾಹಕರಿಗೆ ದೂಳಿನ ಮಜ್ಜನವಾಗುತ್ತಿದೆ. ಅದರಿಂದ ಅಸ್ತಮಾ ಹಾಗೂ ಟಿ.ಬಿ.ಯಂಥ ಕಾಯಿಲೆಗಳು ಬರುವ ಸಾಧ್ಯತೆ ಇದೆ. ಹೀಗಾಗಿ ನಿತ್ಯ ಮಾಸ್ಕ್ ಧರಿಸಿಯೇ ಓಡಾಡಬೇಕಾದ ಸ್ಥಿತಿಯಿದೆ ಎಂದರು.

## ಮಿನಿ ನ್ಯೂಸ್

### ಅಡಿಕೆ ಸಂಶೋಧನೆಗೆ 100 ಕೋಟಿ ನೀಡುವಂತೆ ತಹಶೀಲ್ದಾರ್‌ಗೆ ಮನವಿ

• ಉದಯವಾಹಿನಿ ತೀರ್ಥಹಳ್ಳಿ

ಮಲೆನಾಡಿನ ಸಾಂಪ್ರದಾಯಿಕ ಅಡಿಕೆ ಬೆಳೆ ವಿಪರೀತ ಮಳೆ, ಎಲೆಚುಕ್ಕಿ, ಹಳದಿ ರೋಗ ಸೇರಿದಂತೆ ವಿವಿಧ ರೋಗಗಳಿಂದ ನೆಲಕಚ್ಚಿದೆ. ಅಡಿಕೆ ರೋಗ ನಿಯಂತ್ರಣ ಸಂಬಂಧ ಸಂಶೋಧನೆಗೆ ಕನಿಷ್ಟ ರೂ. 100 ಕೋಟಿ ತಕ್ಷಣ ಬಿಡುಗಡೆ ಮಾಡಬೇಕು ಎಂದು ಮಲೆನಾಡು ಸಂಘರ್ಷ ಕ್ರಿಯಾ ಸಮಿತಿ ಆಗ್ರಹಿಸಿ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗೆ ಈಚೆಗೆ ಮನವಿ ಸಲ್ಲಿಸಿದರು. ಸಂಶೋಧನೆ ಜೊತೆಗೆ ದೇಶಾವರಿ ಅಡಿಕೆ ತಳಿ ರಕ್ಷಣೆ ಮತ್ತು ವಿಶ್ವ ಮಾನ್ಯತೆ ನೀಡಲು ತಜ್ಞರ ಸಮಿತಿ ರಚಿಸಬೇಕು. ಆಹಾರ ಬೆಳೆ ಬೆಳೆಯಲು ಮೀಸಲಾಗಿರುವ ಜಲಾಶಯದ ನಾಲಾ ವಲಯದಲ್ಲಿ ಅಡಿಕೆ ಬೆಳೆಯುವುದನ್ನು ನಿಯಂತ್ರಿಸಬೇಕು. ಅಡಿಕೆ ಸಂಬಂಧಿತ ಸಹಾಯಧನ, ಪರಿಹಾರ, ಸಾಲ ಸೌಲಭ್ಯ ಇತ್ಯಾದಿಗಳಲ್ಲಿ ಬಯಲುನಾಡು ಮತ್ತು ಮಲೆನಾಡಿಗೆ ಪ್ರತ್ಯೇಕ ಮಾನದಂಡ ನೀಡಬೇಕೆಂದು ಒತ್ತಾಯಿಸಿದರು.

ಮಳೆ ಪ್ರಮಾಣ ಆಧರಿಸಿ ಪಶ್ಚಿಮಘಟ್ಟ ವ್ಯಾಪ್ತಿಯ ತಾಲ್ಲೂಕುಗಳನ್ನು ವಿಶೇಷ ಆರ್ಥಿಕ ವಲಯವನ್ನಾಗಿ ಮಾಡಬೇಕು. ಕಾಡುಪ್ರಾಣಿ ಹಾವಳಿಯಿಂದಾಗುವ ಹಾನಿಗೆ ವಿಶೇಷ ಪ್ಯಾಕೇಜ್ ಘೋಷಿಸಬೇಕು. ಮಂಗಗಳ ನಿಯಂತ್ರಣಕ್ಕಾಗಿ ಪರಿಸರ ಸ್ನೇಹಿ ಯೋಜನೆಯನ್ನು ರೂಪಿಸಬೇಕು ಎಂದು ಆಗ್ರಹಿಸಿದ್ದಾರೆ. ಸಮಿತಿಯ ಸಚಾಲಕ ನೆಂಪೆ ದೇವರಾಜ್, ಪಡುವಳ್ಳಿ ಕಿಟ್ಟಪ್ಪ ಇದ್ದರು.

### ರಸ್ತೆಗಳ ಅಭಿವೃದ್ಧಿಗೆ ಆದ್ಯತೆ: ಶಾಸಕ ಹಿಟ್ನಾಳ

• ಉದಯವಾಹಿನಿ ಕೊಪ್ಪಳ

ಶಾಸಕ ಕೆ. ರಾಘವೇಂದ್ರ ಹಿಟ್ನಾಳ ಅವರು ಕೊಪ್ಪಳ, ನರೇಗಲ್, ಯತ್ನಟ್ಟಿ, ಚಿಲವಾಡಗಿ ಹಾಗೂ ಕಲಿಕೇರಿ ಗ್ರಾಮಗಳಲ್ಲಿ 9.50 ಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅಡಿಗಲ್ಲು ನೆರವೇರಿಸಿದರು.

ನರೇಗಲ್ ಗ್ರಾಮದಲ್ಲಿ ರೂ.2 ಕೋಟಿ ವೆಚ್ಚದಲ್ಲಿ ನರೇಗಲ್ - ಮಾದಿನೂರು ಕ್ರಾಸ್‌ವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಅಡಿಗಲ್ಲು ನೆರವೇರಿಸಿ ಮಾತನಾಡಿ ಕ್ಷೇತ್ರದಲ್ಲಿ ಹದಗೆಟ್ಟಿರುವ ಎಲ್ಲಾ ರಸ್ತೆಗಳಿಗೂ ಅನುದಾನ ತರುವ ಕೆಲಸ ಮಾಡುತ್ತಿದ್ದೇವೆ. ಹಂತಹಂತವಾಗಿ ಎಲ್ಲಾ ರಸ್ತೆಗಳನ್ನು ಅಭಿವೃದ್ಧಿ ಪಡಿಸುತ್ತೇವೆ. ದದೇಗಲ್‌ನಿಂದ ನರೇಗಲ್ ತನಕ ಉತ್ತಮ ರಸ್ತೆ ನಿರ್ಮಿಸಲಾಗುವುದು ಎಂದು ತಿಳಿಸಿದರು.

ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಮಹತ್ವ ನೀಡಿದ್ದೇವೆ. ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ, ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಡಿಯಲ್ಲಿ ಹದಗೆಟ್ಟಿರುವ ರಸ್ತೆಗಳಿಗೆ ಅನುದಾನ ನೀಡಲಾಗಿದೆ' ಎಂದರು. ನಗರದ ಶಿವಪ್ರಿಯ ಲೇ ಔಟ್‌ನಲ್ಲಿ ರೂ. 5 ಕೋಟಿ ವೆಚ್ಚದಲ್ಲಿ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವೃತ್ತಿಪರ ವಸತಿ ನಿಲಯದ ಕಟ್ಟಡಕ್ಕೆ ಶಾಸಕರು ಭೂಮಿಪೂಜೆ ನೆರವೇರಿಸಿದರು.

### ಆರು ತಿಂಗಳ ವೇತನ ನೀಡಲು ಆಗ್ರಹ

• ಉದಯವಾಹಿನಿ ಹುನಗುಂದ

ನರೇಗಾ ಯೋಜನೆ ಅಡಿಯಲ್ಲಿ ಗ್ರಾಮೀಣ ಕೂಲಿ ಕಾರ್ಮಿಕರು ಕೆಲಸ ಮಾಡಿದರೂ ಕಳೆದ ಆರು ತಿಂಗಳಿನಿಂದ ವೇತನ ನೀಡಲು ಪಿಡಿಒ ಮತ್ತು ಕಂಪ್ಯೂಟರ್ ಆಪರೇಟರ್ ನಿರ್ಲಕ್ಷ್ಯ ಹಾಗೂ ಅವರ ಕಾರ್ಯ ವೈಖರಿ ಖಂಡಿಸಿ ತಾಲ್ಲೂಕಿನ ಇದ್ದಲಗಿ ಗ್ರಾಮದ ನೂರಾರು ನರೇಗಾ ಕೂಲಿ ಕಾರ್ಮಿಕರು ಹತ್ತಾರು ಟ್ರ್ಯಾಕ್ಟರ್ ಗಳಲ್ಲಿ ಆಗಮಿಸಿ ಧನ್ನೂರ ಗ್ರಾಮ ಪಂಚಾಯಿತಿ ಎದುರು ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಪ್ರತಿಭಟಿಸಿದರು.

ಪ್ರತಿಭಟನಾ ನಿರತ ಶರಣಪ್ಪ ಮುಳ್ಳೂರ ಮಾತನಾಡಿ, 'ಏಪ್ರಿಲ್ ತಿಂಗಳಲ್ಲಿ ಮಾಡಿರುವ ಒಂದು ಕೆಲಸಕ್ಕೆ ಮೂರು ಬಾರಿ ಎನ್‌ಎಂಆರ್ ಜೀರೋ ಮಾಡಿದ್ದು, ಇದರಿಂದ 30ಕ್ಕೂ ಹೆಚ್ಚು ಜನ ಕೂಲಿ ಕಾರ್ಮಿಕರು ಮಾಡಿದ ಕೆಲಸಕ್ಕೆ ವೇತನ ಇಲ್ಲದೇ ನಿತ್ಯ ಸಂಕಷ್ಟ ಪಡುವಂತಾಗಿದೆ. ಒಂದು ಕೆಲಸಕ್ಕೆ ಆರು ತಿಂಗಳಲ್ಲಿ ಮೂರು ಬಾರಿ ಎನ್‌ಎಂಎಂಎಸ್ ಮಾಡಿಸಿದರೂ ಅಧಿಕಾರಿಗಳ ಬೇಜವಾಬ್ದಾರಿಯಿಂದ ವೇತನ ಆಗುತ್ತಿಲ್ಲ ಎಂದರು. ಅಧಿಕಾರಗಳ ನಿರ್ಲಕ್ಷ್ಯಕ್ಕೆ ಕಾರ್ಮಿಕರು ನಿತ್ಯ ಕೃಷಿ ಕೆಲಸ ಬಿಟ್ಟು ಮತ್ತೆ ಎನ್‌ಎಂಎಂಎಸ್ ಮಾಡಿದರೂ ವೇತನ ಆಗುತ್ತೇ ಎನ್ನುವ ಗ್ಯಾರಂಟಿ ಇಲ್ಲದಂತಾಗಿದೆ. ಪದೇ ಪದೇ ಯಾಕೆ ಎನ್‌ಎಂಆರ್ ಶೂನ್ಯ ಆಗುತ್ತೇ ಅದಕ್ಕೆ ಕಾರಣ ಕೇಳಿದರೇ ತಾಂತ್ರಿಕ ದೋಷ ಮತ್ತು ಭಾವಚಿತ್ರ ಮ್ಯಾಚ್ ಆಗುತ್ತಿಲ್ಲ ಎನ್ನುತ್ತಾರೆ. ನಮ್ಮ ಬೇಡಿಕೆಗಳು ಈಡೇರಿಸುವವರೆಗೂ ಪ್ರತಿಭಟನೆಯಿಂದ ಹಿಂದೆ ಸರಿಯುವುದಿಲ್ಲ ಎಂದು ಎಚ್ಚರಿಕೆ ನೀಡಿದರು.


### ರೈತನೇ ಜಗದ ಒಡೆಯ: ಡಿಸಿ

• ಉದಯವಾಹಿನಿ ಬೀಳಗಿ

ರೈತ ಜಗದ ಒಡೆಯ. ರೈತನಿಲ್ಲದ ಬದುಕನ್ನು ಊಹಿಸಲೂ ಅಸಾಧ್ಯ. ಭೂಮಿ ತಾಯಿಯನ್ನು ಗೌರವಿಸಬೇಕು, ಪ್ರೀತಿಸಬೇಕು' ಎಂದು ಬಾಗಲಕೋಟೆ ಜಿಲ್ಲಾಧಿಕಾರಿ ಸಂಗಪ್ಪ ಎಂ. ಹೇಳಿದರು.

ಬಾಡಗಂಡಿ ಎಸ್.ಆರ್. ಪಾಟೀಲ ಶಿಕ್ಷಣ ಪ್ರತಿಷ್ಠಾನದ ವತಿಯಿಂದ ವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿ ನಡೆದ ದಿ.ರುದ್ರಗೌಡ ಗುರುಸಿದ್ದಪ್ಪಗೌಡ ಪಾಟೀಲ ಸ್ಮರಣಾರ್ಥ 'ಕೃಷಿಕ ಪ್ರಶಸ್ತಿ' ಹಾಗೂ ಈರಮ್ಮತಾಯಿ ರುದ್ರಗೌಡ ಪಾಟೀಲ ಸ್ಮರಣಾರ್ಥ 'ಅಬ್ಬೆ ಪ್ರಶಸ್ತಿ' ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಸತತ ಪರಿಶ್ರಮ, ಆತ್ಮ ವಿಶ್ವಾಸದಿಂದ ಮಾತ್ರ ಯಶಸ್ಸು ಸಾಧಿಸಲು ಸಾಧ್ಯ. ಸೋಲು ಗೆಲುವುಗಳಿಗೆ ತಲೆಕೆಡಿಸಿಕೊಳ್ಳದೆ ನಿರಂತರ ಅಧ್ಯಯನದಿಂದ ಸ್ಪರ್ಧಾತ್ಮಕ ಮನೋಭಾವ ಬೆಳೆಸಿಕೊಳ್ಳಬೇಕು' ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ಮಾತನಾಡಿ, 'ಪಾಲಕರ ತ್ಯಾಗದಿಂದ ಮಕ್ಕಳು ಉನ್ನತ ಸ್ಥಾನ ಪಡೆಯಲು ಸಾಧ್ಯವಾಗುತ್ತದೆ. ಎಲ್ಲರೂ ಪಾಲಕರಿಗೆ ಕೀರ್ತಿ ತರುವಂತೆ ನಡೆದುಕೊಳ್ಳಿ' ಎಂದರು.

ಅಬ್ಬೆ ಪ್ರಶಸ್ತಿ ಪುರಸ್ಕೃತೆ ಮೀನಾಕ್ಷಿ ಬಾಳಿ ಮಾತನಾಡಿ, ಪ್ರಶಸ್ತಿ ಪಡೆಯುವವರಿಗಿಂತ ಕೊಡುವವರ ಯೋಗ್ಯತೆ ಮೇಲೆ ಅದರ ಮೌಲ್ಯ ನಿರ್ಧಾರವಾಗುತ್ತದೆ. ಮೌಲ್ಯಯುತ ಬದುಕು ಸಾಗಿಸಿದ ಎಸ್.ಆರ್. ಪಾಟೀಲ ಅವರು ನನಗೆ ಪ್ರಶಸ್ತಿ ನೀಡಿರುವುದು ಸಂತಸ ತಂದಿದೆ' ಎಂದರು. ನಾಗಣ್ಣ ವೆಂಕಪ್ಪ ಬಡಿಗೇರ ಅವರಿಗೆ 'ಕೃಷಿಕ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಎರಡೂ ಪ್ರಶಸ್ತಿಗಳು ರೂ.1 ಲಕ್ಷ ನಗದು ಹಾಗೂ ಪಾರಿತೋಷಕವನ್ನು ಒಳಗೊಂಡಿವೆ.



ಉದಯವಾಹಿನಿ ಚಿತ್ರ

# ಕದನ ವಿರಾಮದ ನಡುವೆಯೂ ಕಾಂಬೋಡಿಯಾ ಮೇಲೆ ಥೈಲ್ಯಾಂಡ್ ದಾಳಿ



**ಬ್ಯಾಂಕಾಕ್:** ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮಧ್ಯಸ್ಥಿಕೆಯಲ್ಲಿ ಥೈಲ್ಯಾಂಡ್, ಕಾಂಬೋಡಿಯ ನಡುವಿನ ಗಡಿ ಸಂಘರ್ಷಕ್ಕೆ ಕದನ ವಿರಾಮ ಒಪ್ಪಂದಕ್ಕೆ ಸಹಿ ಹಾಕಿದ ಕೆಲವೇ ತಿಂಗಳಲ್ಲಿ ಮತ್ತೆ ಥೈಲ್ಯಾಂಡ್ ಕಾಂಬೋಡಿಯಾ ಮೇಲೆ ವೈಮಾನಿಕ ದಾಳಿ ನಡೆಸಿದೆ. ಇದು ಗಡಿಯಲ್ಲಿ ಮತ್ತೆ ಉದ್ವಿಗ್ನ ವಾತವರಣವನ್ನು ಸೃಷ್ಟಿಮಾಡಿದ್ದು, ಟ್ರಂಪ್ ಮಾತಿಗೆ ಕಿಮ್ಮತ್ತಿಲ್ಲದಂತಾಗಿದೆ.

**ಉಭಯದೇಶಗಳ ಆರೋಪ-ಪ್ರತ್ಯಾರೋಪ ಜೋರು:** ಇನ್ನು, ಗಡಿಯಲ್ಲಿ ವೈಮಾನಿಕ ದಾಳಿಗಳು ನಡೆಯುತ್ತಿದ್ದಂತೆ ಉಭಯ ದೇಶಗಳು ಪರಸ್ಪರ ಆರೋಪ ಪ್ರತ್ಯಾರೋಪ ಮಾಡಿಕೊಳ್ಳುತ್ತಿದ್ದು, ಕಾಂಬೋಡಿಯಾ ಥೈಲ್ಯಾಂಡ್ ದಾಳಿ ನಡೆಸಿದೆ ಎಂದರೆ ಥೈಲ್ಯಾಂಡ್ ಅಧಿಕಾರಿಗಳು ಮಾತ್ರ ಕಾಂಬೋಡಿಯಾ ಸೋಮವಾರ ಮುಂಜಾನೆ ಸುಮಾರು 3 ಗಂಟೆ ಸಮಯದಲ್ಲಿ ನಮ್ಮ ಮೇಲೆ ಮೊದಲು ದಾಳಿ ನಡೆಸಿದ ಇದರಲ್ಲಿ 1 ಥಾಯ್ ಸೈನಿಕ ಸಾವನ್ನಪ್ಪಿದ್ದರೆ, 2 ಗಾಯಗೊಂಡಿದ್ದಾರೆ. ಹಾಗಾಗಿ ನಾವು ಪ್ರತಿಕ್ರಿಯೆಯಾಗಿ ದಾಳಿ ನಡೆಸಿದ್ದೇವೆ ಎಂದು ಸಮರ್ಥಿಸಿಕೊಳ್ಳುತ್ತಿದ್ದಾರೆ. ಇನ್ನೊಂದೆಡೆ, ಸೋಮವಾರ ಮುಂಜಾನೆ 5 ಗಂಟೆ ಸಮಯದಲ್ಲಿ ಕಾಂಬೋಡಿಯಾ ಪಡೆಗಳ ಮೇಲೆ ದಾಳಿ ನಡೆಸಿದೆ ಎಂದು ಆರೋಪಿಸಿದ್ದು, ಥೈಲ್ಯಾಂಡ್ ಪಡೆಗಳು ಹಲವು ದಿನಗಳಿಂದ ಅನೇಕ ಪ್ರಚೋದನಕಾರಿ ಕೃತ್ಯಗಳಲ್ಲಿ ತೊಡಗಿದ್ದವು. ಅದರ ನಂತರ ಈ ದಾಳಿ ನಡೆದಿದೆ ಎಂದು ಕಾಂಬೋಡಿಯಾ ಸೇನೆ ತಿಳಿಸಿದೆ.

**ಗಡಿಯಲ್ಲಿ ಉಭಯ ದೇಶಗಳ ಸಾವಿರಾರು ಪ್ರಜೆಗಳ ಸ್ಥಳಾಂತರ:** ಇನ್ನು, ಈ ಸಂಘರ್ಷದಿಂದಾಗಿ ಗಡಿ ಪ್ರದೇಶದಲ್ಲಿರುವ ಉಭಯ ದೇಶಗಳ ಪ್ರಜೆಗಳು ಸಂಕಷ್ಟದಲ್ಲಿ ಸಿಲುಕಿದ್ದು, ಶೇ.70% ಅಂದರೆ ಸುಮಾರು 35 ಸಾವಿರ ಥಾಯ್ ನಾಗರಿಕರನ್ನು ಗಡಿ ಪಟ್ಟಣಗಳಿಂದ ಸ್ಥಳಾಂತರಿಸಲಾಗಿದ್ದು, ಅವರನ್ನು ಆಶ್ರಯ ತಾಣಗಳಲ್ಲಿ ಇರಿಸಲಾಗಿದೆ ಎಂದು ವರದಿಯಾಗಿದೆ. ಅಲ್ಲದೆ, ಇತ್ತ ಕಾಂಬೋಡಿಯಾದ ಮೇಲೆ ನಡೆದಿರುವ ವೈಮಾನಿಕ ದಾಳಿಯಿಂದಾಗಿ ಗಡಿ ಪ್ರದೇಶದಲ್ಲಿನ ಸಾವಿರಾರು ಕಾಂಬೋಡಿಯಾ ಪ್ರಜೆಗಳು ಸ್ಥಳಾಂತರವಾಗಿದ್ದಾರೆ.

**ಕದನ ವಿರಾಮ ಉಲ್ಲಂಘನೆ:** ಕಾಂಬೋಡಿಯಾ, ಥೈಲ್ಯಾಂಡ್ ನಡುವೆ ಪುರಾತನ ದೇವಾಲಯಗಳ ಹಕ್ಕಿಗಾಗಿ ಯುದ್ಧ ನಡೆಯುತ್ತಿದೆ ಸಾಂಪ್ರದಾಯಿಕ ಗಡಿ ಪ್ರದೇಶದಲ್ಲಿ ಆಗಾಗ ಈ ರೀತಿದಾಳಿಗಳು ನಡೆಯುತ್ತಿರುತ್ತವೆ.


**ಟ್ರಂಪ್ ಮಾತಿಗೆ ಇಲ್ಲದಾಯ್ತಾ ಕಿಮ್ಮತ್ತು**

ಇನ್ನೂ, ಇತ್ತೀಚೆಗೆ ಈ ವರ್ಷದ ಜುಲೈ ತಿಂಗಳಿನಲ್ಲಿ 5 ದಿನಗಳು ನಡೆದ ಗಡಿ ಸಂಘರ್ಷದಿಂದಾಗಿ ಹತ್ತಾರು ಜನ ಬಲಿಯಾಗಿದ್ದು, ಉಭಯ ದೇಶಗಳ ಸುಮಾರು 200,000 ಜನರನ್ನು ಸ್ಥಳಾಂತರಿಸಲಾಗಿದ್ದು, ನಂತರ ಟ್ರಂಪ್ ಸುಂಕ ಬೆದರಿಕೆಯ ನಂತರ ಉಭಯದೇಶಗಳು ಯುದ್ಧವನ್ನು ನಿಲ್ಲಿಸಿದ್ದವು. ಇದಾದ ಬಳಿಕ ಅ. ಅಂತ್ಯದಲ್ಲಿ ಕೌಲಾಲಂಪುರದಲ್ಲಿ ಟ್ರಂಪ್, ಮಲೇಷ್ಯಾದ ಪ್ರಧಾನಿ ಅನ್ವರ್ ಇಬ್ರಾಹಿಂ ಸಾಕ್ಷಿಯಾದ ಸಮಾರಂಭದಲ್ಲಿ ಥೈಲ್ಯಾಂಡ್, ಕಾಂಬೋಡಿಯಾ ಅಂತಿಮವಾಗಿ ವಿಸ್ತೃತ ಕದನ ವಿರಾಮ ಘೋಷಣೆಗೆ ಸಹಿ ಹಾಕಿದ್ದವು. ಆದರೆ ಇದಾದ ಕೆಲವೇ ತಿಂಗಳಿನಲ್ಲಿ ಮತ್ತೆ ಕದನ ವಿರಾಮ ಉಲ್ಲಂಘನೆಯಾಗಿ ಉದ್ವಿಗ್ನತೆ ಭುಗಿಲೆದ್ದಿದ್ದು, ಇದು ಯಾವ ಸ್ವರೂಪವನ್ನು ಪಡೆದುಕೊಳ್ಳಲಿದೆ ಎಂಬ ಆತಂಕ ಎದುರಾಗಿದೆ.

## ಉಕ್ರೇನ್ ಮೇಲೆ ನಿಲ್ಲದ ದಾಳಿ
### ಅಮೆರಿಕ ಕಾರ್ಯತಂತ್ರಕ್ಕೆ ರಷ್ಯಾ ಮೆಚ್ಚುಗೆ

**ಕೀವ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಡಳಿತದ ನೂತನ ರಾಷ್ಟ್ರೀಯ ಭದ್ರತಾ ಕಾರ್ಯತಂತ್ರವನ್ನು ರಷ್ಯಾ ಸ್ವಾಗತಿಸಿದೆ. ರಷ್ಯಾ ಅಧ್ಯಕ್ಷ ಬ್ಲಾದಿಮಿರ್ ಪುಟಿನ್ ಅವರ ವಕ್ತಾರ ಡಿಮಿಟ್ರಿ ಪೆಸ್ಕೋವ್ ಅವರು, ಅಮೆರಿಕದ ಪರಿಷ್ಕೃತ ಕಾರ್ಯತಂತ್ರ ದಾಖಲೆಯು ರಷ್ಯಾದ ವಿಶಾಲ ದೃಷ್ಟಿಕೋನಕ್ಕೆ ತಕ್ಕಂತೆಯೇ ಇದೆ ಎಂದು ನೀಡಿರುವ ಹೇಳಿಕೆ ಆಧರಿಸಿ ರಷ್ಯಾದ ಟಾಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ. 'ಮುಖಾಮುಖಿ, ಮಾತುಕತೆ ಹಾಗೂ ಉತ್ತಮ ಸಂಬಂಧ ಸ್ಥಾಪಿಸುವುದರ ಪರವಾದ ಪ್ರಯತ್ನಗಳ ವಿರುದ್ಧದ ಕೆಲ ಹೇಳಿಕೆಗಳೂ ಅಲ್ಲಿವೆ. ಉಕ್ರೇನ್ ವಿಚಾರವನ್ನು ಇತ್ಯರ್ಥಮಾಡಿಕೊಳ್ಳುವಲ್ಲಿ ಅಮೆರಿಕದ ಜೊತೆ ಮತ್ತಷ್ಟು ರಚನಾತ್ಮಕ ಸಹಕಾರ ಹೊಂದಲು ಇದು ದಾರಿ ಮಾಡಬಹುದು ಎಂದು ರಷ್ಯಾ ಭಾವಿಸುತ್ತದೆ ಎಂದಿದ್ದಾರೆ. ಶ್ವೇತಭವನ ಶುಕ್ರವಾರ ಬಿಡುಗಡೆ ಮಾಡಿದ್ದ ರಾಷ್ಟ್ರೀಯ ಭದ್ರತಾ ಕಾರ್ಯತಂತ್ರದ ದಾಖಲೆಯಲ್ಲಿ 'ಜಾಗತಿಕ ಬಹಿಷ್ಕೃತ' ಎಂದು ಕರೆಸಿಕೊಂಡಿದ್ದ ರಷ್ಯಾದೊಂದಿಗೆ ಬಹಳ ವರ್ಷಗಳ ನಂತರ ಸಂಬಂಧ ಸುಧಾರಣೆಗೆ ಅಮೆರಿಕ ಬಯಸುತ್ತದೆ. ಯುದ್ಧವನ್ನು ಕೊನೆಗಾಣಿಸುವ ಅಮೆರಿಕದ ಪ್ರಮುಖ ಆಸಕ್ತಿಯು ರಷ್ಯಾದೊಂದಿಗೆ ಕಾರ್ಯತಂತ್ರಾತ್ಮಕ ಸ್ಥಿರತೆಯನ್ನು ಮರುಸ್ಥಾಪಿಸುವುದು ಕೂಡ ಆಗಿದೆ ಎಂದು ಹೇಳಿಕೊಂಡಿದೆ.

**ರಷ್ಯಾ ದಾಳಿಗೆ 4 ಸಾವು:** ಯುದ್ಧಕ್ಕೆ ಅಂತ್ಯ ಹಾಡಲು ಅಮೆರಿಕ ಮತ್ತು ಉಕ್ರೇನ್ ಅಧಿಕಾರಿಗಳು ಮೂರನೇ ದಿನ ಮಾತುಕತೆ ನಡೆಸಿದ್ದರು. ಅದೇ ದಿನ ಉಕ್ರೇನ್‌ನ ಮೇಲೆ ರಷ್ಯಾ ಡ್ರೋನ್ ಮತ್ತು ಶೆಲ್‌ಗಳನ್ನು ಬಳಸಿ ನಡೆಸಿದ ದಾಳಿಯಲ್ಲಿ ನಾಲ್ವರು ಮೃತಪಟ್ಟಿದ್ದರು. ಈ ಸಂದರ್ಭದಲ್ಲೇ ರಷ್ಯಾ ವಕ್ತಾರರು ಈ ಹೇಳಿಕೆ ನೀಡಿದ್ದಾರೆ. ರಾತ್ರಿ ಚೆರ್ನಿಹಿವ್‌ನ ಉತ್ತರ ಭಾಗದಲ್ಲಿ ಡ್ರೋನ್ ದಾಳಿಗೆ ವ್ಯಕ್ತಿಯೊಬ್ಬರು ಮೃತಪಟ್ಟಿದ್ದರು. ಕೈಗಾರಿಕಾ ನಗರ ಕ್ರೆಮಿನ್‌ಚುಕ್ ಮೇಲೆ ಕ್ಷಿಪಣಿ ದಾಳಿ ನಡೆಸಿದ್ದರಿಂದ ಉಕ್ರೇನ್‌ನ ಬೃಹತ್ ತೈಲಾಗಾರಕ್ಕೆ ಹಾನಿಯಾಗಿತ್ತು ಖಾರ್ಕಿವ್ ಪ್ರಾಂತ್ಯದ ಮೇಲೆ ರಷ್ಯಾ ಸೇನಾ ಪಡೆಗಳು ಭಾನುವಾರ ಶೆಲ್ ದಾಳಿ ನಡೆಸಿದ್ದು ಮೂವರು ಮೃತಪಟ್ಟು, ಇತರೆ 10 ಮಂದಿ ಗಾಯಗೊಂಡಿದ್ದರು.



ಕದನ ವಿರಾಮ ಯೋಜನೆಯ ಕುರಿತು ಅಮೆರಿಕ ಮತ್ತು ಉಕ್ರೇನ್ ಅಧಿಕಾರಿಗಳ ಮಾತುಕತೆ ಬಗ್ಗೆ ದೂರವಾಣಿಯಲ್ಲಿ ಅಮೆರಿಕದ ಹಿರಿಯ ಅಧಿಕಾರಿಗಳ ಜೊತೆ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝುಲೆನ್‌ಸ್ಕಿ ಮಾಹಿತಿ ನೀಡಿದ ಮಾರನೇ ದಿನವೇ ರಷ್ಯಾ ದಾಳಿ ಮಾಡಿದೆ.

## ಸಿಎಂ ಸ್ಥಾನಕ್ಕೆ 500 ಕೋಟಿ ಕೊಡ್ಬೇಕು ಎಂದ ನವಜೋತ್ ಕೌರ್ ಸಿಧು; ಕೈನಿಂದ ಅಮಾನತು
# ನಮ್ಮ ಪಕ್ಷದ ಬಗ್ಗೆ ನಾನು ಮಾತಾಡಿಲ್ಲ

**ಹೊಸದಿಲ್ಲಿ:** ಕಾಂಗ್ರೆಸ್‌ನಲ್ಲಿ ಸಿಎಂ ಸ್ಥಾನ ಸಿಗಬೇಕು ಎಂದರೆ ಐನೂರು ಕೋಟಿ ಕೊಡಬೇಕು ಎಂದು ಸ್ಫೋಟಕ ಹೇಳಿಕೆ ಕೊಟ್ಟು ಕಾಂಗ್ರೆಸ್ ನಾಯಕಿ ನವಜೋತ್ ಕೌರ್ ಟೀಕೆಗೆ ಗುರಿಯಾಗಿದ್ದರು. ಸದ್ಯ ಅವರನ್ನು ಸೋಮವಾರರಂದು ಪಕ್ಷದಿಂದ ಅಮಾನತುಗೊಳಿಸಲಾಗಿದೆ.

**ನಮ್ಮ ಬಳಿ 500 ಕೋಟಿ ಇಲ್ಲ**

**ಬೇರೆ ಪಕ್ಷಕ್ಕೆ ಆ ಮಾತು ಹೇಳಿದ್ದೆ**

ಪಂಜಾಬ್ ರಾಜ್ಯ ಘಟಕವು ಹೊರಡಿಸಿದ ಅಧಿಕೃತ ಪ್ರಕಟಣೆಯಲ್ಲಿ, ತಕ್ಷಣದಿಂದ ಜಾರಿಗೆ ಬರುವಂತೆ ನವಜೋತ್ ಕೌರ್ ಅವರನ್ನು ಅಮಾನತುಗೊಳಿಸಲಾಗಿದೆ ಎಂದು ತಿಳಿಸಲಾಗಿದೆ. ಆದರೆ, ಈ ಹಠಾತ್ ಕ್ರಮಕ್ಕೆ ಯಾವುದೇ ನಿರ್ದಿಷ್ಟ ಕಾರಣವನ್ನು ಪ್ರಕಟಣೆಯಲ್ಲಿ ಉಲ್ಲೇಖಿಸಿಯೇ ಇಲ್ಲ.

**ಸಿಎಂ ಸ್ಥಾನಕ್ಕಾಗಿ ಹಣ ಕೊಡ್ಬೇಕು:** ಡಿ.7ರಂದು ರಾಜ್ಯಪಾಲ ಗುಲಾಬ್ ಚಂದ್ ಕಟಾರಿಯಾ ಅವರನ್ನು ಭೇಟಿಯಾದ ನಂತರ ಮಾತನಾಡಿದ ಅವರು, ತಮ್ಮ ಪತಿ ನವಜೋತ್ ಸಿಂಗ್ ಸಿಧು ಅವರ ರಾಜಕೀಯ ಭವಿಷ್ಯದ ಬಗ್ಗೆ ಪ್ರಸ್ತಾಪಿಸಿದ್ದರು. ನಾವು ಕೇವಲ ಪಂಜಾಬ್ ವಿಚಾರವಾಗಿ ಮಾತನಾಡುತ್ತೇವೆ. ಮುಖ್ಯಮಂತ್ರಿ ಕುರ್ಚಿಯಲ್ಲಿ ಕುಳಿತುಕೊಳ್ಳಲು ಕೊಡಬೇಕಾದ 500 ಕೋಟಿ ರೂ.ನಮ್ಮ ಬಳಿ ಇಲ್ಲ. ನಮ್ಮನ್ನು ಯಾರೂ ಹಂ ಕೊಡಿ ಎಂದು ಕೇಳಿಕೊಂಡಿಲ್ಲ. ಆದರೆ, ಯಾರು 500 ಕೋಟಿ ರೂ.ಗಳ ಸೂಟ್‌ಕೇಸ್ ಕೊಡುತ್ತಾರೋ ಅವರೇ ಸಿಎಂ ಆಗುತ್ತಾರೆ ಎಂದು ಹೇಳಿದ್ದರು.

**ಸಿಧುರನ್ನು ಬೆಳೆಯಲು ಬಿಡ್ತಿಲ್ಲ:** ಕಾಂಗ್ರೆಸ್ ಪಕ್ಷವು ಅಧಿಕೃತವಾಗಿ ನವಜೋತ್ ಸಿಂಗ್ ಸಿಧು ಅವರನ್ನು ಸಿಎಂ ಅಭ್ಯರ್ಥಿ ಎಂದು ಘೋಷಿಸಿದರೆ, ಅವರು ಮತ್ತೆ ಸಕ್ರಿಯವಾಗಿ ರಾಜಕೀಯದಲ್ಲಿ ತೊಡಗಿಸಿಕೊಳ್ಳುತ್ತಾರೆ. ಇಲ್ಲದಿದ್ದರೆ, ಅವರು ರಾಜಕೀಯದ ಹೊರಗೆ ಉತ್ತಮವಾಗಿ ಸಂಪಾದಿಸುತ್ತಾ ಸಂತೋಷವಾಗಿರುತ್ತಾರೆ ಎಂದು ನವಜೋತ್ ಸಿಂಗ್ ಸ್ಪಷ್ಟಪಡಿಸಿದರು. ಪಂಜಾಬ್ ಕಾಂಗ್ರೆಸ್‌ನಲ್ಲಿ ಆಂತರಿಕ ಕಚ್ಚಾಟ ತೀವ್ರವಾಗಿದ್ದು, ಕನಿಷ್ಠ ಐವರು ನಾಯಕರು ಸಿಎಂ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ ಮತ್ತು ಸಿಧು ಅವರನ್ನು ಬೆಳೆಯಲು ಬಿಡುತ್ತಿಲ್ಲ ಎಂದು ಅವರು ದೂರಿದರು.



**ಕಾಂಗ್ರೆಸ್‌ನಲ್ಲಿ ಸಿಎಂ ಸ್ಥಾನಕ್ಕೇರಲು ಬಯಸಿದ ಸೂಟ್‌ಕೇಸ್‌ನಲ್ಲಿ 500 ಕೋಟಿ ರೂ. ಕೊಡಬೇಕು ಎಂದು ನವಜೋತ್ ಕೌರ್ ಸಿಧು ನೀಡಿದ ಹೇಳಿಕೆ ರಾಜಕೀಯವಾಗಿ ಭಾರೀ ಸಂಚಲನ ಮೂಡಿಸಿದೆ. ಈ ಹೇಳಿಕೆ ವೈರಲ್ ಆಗುತ್ತಿದ್ದಂತೆ ಅವರನ್ನು ಪಂಜಾಬ್ ಕಾಂಗ್ರೆಸ್ ಘಟಕವು ಅವರನ್ನು ಪಕ್ಷದಿಂದ ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಲಾಗಿದೆ. ಪ್ರಕಟಣೆಯಲ್ಲಿ ಯಾವುದೇ ನಿಖರ ಕಾರಣವನ್ನು ವ್ಯಕ್ತಪಡಿಸಿಲ್ಲ. ಈ ಬಗ್ಗೆ ಕೌರ್ ಮಾತನಾಡಿದ್ದು, ನಾನು ನಮ್ಮ ಪಕ್ಷದ ಬಗ್ಗೆ ಮಾತನಾಡಿಲ್ಲ ಎಂದಿದ್ದಾರೆ.**

**ರಾಜಕೀಯದಿಂದ ದೂರ ಉಳಿದ ಸಿಧು**

**ನವಜೋತ್ ಸಿಂಗ್ ಸಿಧು ಅವರು ಕಳೆದ ಕೆಲವು ತಿಂಗಳುಗಳಿಂದ ಪಕ್ಷದಲ್ಲಿ ನಿಷ್ಕ್ರಿಯರಾಗಿದ್ದು, 2024ರ ಲೋಕಸಭಾ ಚುನಾವಣಾ ಪ್ರಚಾರದಿಂದಲೂ ದೂರವಿದ್ದರು. ಪ್ರಸ್ತುತ ಅವರು ಐಪಿಎಲ್ ಕಾಮೆಂಟರಿಯಲ್ಲಿ ತೊಡಗಿಸಿಕೊಂಡಿದ್ದು, ಸ್ವಂತ ಯೂಟ್ಯೂಬ್ ಚಾನೆಲ್ ಕೂಡ ಆರಂಭಿಸಿದ್ದಾರೆ.**

**ಬಿಜೆಪಿ ಟೀಕೆ:** ನವಜೋತ್ ಕೌರ್ ಹೇಳಿಕೆಯನ್ನು ಅಸ್ತ್ರ ಆಗಿಸಿಕೊಂಡಿರುವ ಬಿಜೆಪಿ, ಕಾಂಗ್ರೆಸ್ ವಿರುದ್ಧ ಟೀಕಾ ಪ್ರಹಾರ ಮಾಡುತ್ತಿದೆ. ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ ಮಾತನಾಡಿ, ಕಾಂಗ್ರೆಸ್‌ನಲ್ಲಿ ನಾಯಕರಿಂದ ಹಿಡಿದು ಕಾರ್ಯಕರ್ತರವರೆಗೂ ಭ್ರಷ್ಟಾಚಾರ ವ್ಯಾಪಿಸಿದೆ ಎಂಬುದಕ್ಕೆ ಇದೇ ಸಾಕ್ಷಿ. ಸೂಟ್‌ಕೇಸ್ ಇದ್ದರೆ ಮಾತ್ರ ಸಿಎಂ ಆಗಲು ಸಾಧ್ಯ ಎಂಬ ಸ್ಥಿತಿ ಅಲ್ಲಿ ನಿರ್ಮಾಣವಾಗಿದೆ, ಎಂದು ವಾಗ್ದಾಳಿ ನಡೆಸಿದೆ.

ಕಾಂಗ್ರೆಸ್‌ನ ಈ ಹಿಂದಿನ ಮುಖ್ಯಮಂತ್ರಿಯೊಬ್ಬರು ಹುದ್ದೆ ಉಳಿಸಿಕೊಳ್ಳಲು 350 ಕೋಟಿ ರೂ. ನೀಡಿದ್ದರು ಎಂಬ ಮಾತನ್ನು ತಾನು ಕೇಳಿದ್ದೆ ಎಂದು ಪಂಜಾಬ್ ಬಿಜೆಪಿ ಅಧ್ಯಕ್ಷ ಸುನಿಲ್ ಜಾಖರ್ ಪ್ರತಿಕ್ರಿಯಿಸಿದರು. ಪಂಜಾಬ್‌ನಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು, ಸುಲಿಗೆ, ಭ್ರಷ್ಟಾಚಾರ ಮಿತಿಮೀರಿದೆ. ವ್ಯವಸ್ಥೆಯನ್ನು ಸರಿಪಡಿಸಲು ಪಂಜಾಬಿಗಳು ಬಿಜೆಪಿಗೆ ಒಂದು ಅವಕಾಶ ನೀಡಬೇಕು ಎಂದು ಇದೇ ವೇಳೆ ಪಂಜಾಬ್‌ನ ಎಎಪಿ ಸರ್ಕಾರದ ವಿರುದ್ಧವೂ ಸುನಿಲ್ ಜಾಖರ್ ಕಿಡಿಕಾರಿದರು.

## ಥಾಯ್ಲೆಂಡ್, ಕಾಂಬೋಡಿಯಾ ನಡುವೆ ಮತ್ತೆ ಸಂಘರ್ಷ ಭೀತಿ



**ಬ್ಯಾಂಕಾಕ್ :** ಕಾಂಬೋಡಿಯಾ ಜತೆಗಿನ ವಿವಾದಿತ ಗಡಿ ಪ್ರದೇಶದಲ್ಲಿ ಥಾಯ್ಲೆಂಡ್ ಸೋಮವಾರ ವೈಮಾನಿಕ ದಾಳಿ ಆರಂಭಿಸಿದೆ. ಇದು ಉಭಯ ರಾಷ್ಟ್ರಗಳ ನಡುವಿನ ಸಂಘರ್ಷದ ಕಿಡಿ ಮತ್ತೆ ಭುಗಿಲೇಳುವ ಭೀತಿ ಸೃಷ್ಟಿಸಿದೆ. ದೀರ್ಘಕಾಲದಿಂದ ಬಗೆಹರಿಯದೇ ಉಳಿದಿರುವ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಜುಲೈನಲ್ಲಿ ಈ ಎರಡು ರಾಷ್ಟ್ರಗಳ ನಡುವೆ ಸಂಘರ್ಷ ಏರ್ಪಟ್ಟು ಹಲವು ಸೈನಿಕರು, ನಾಗರಿಕರು ಮೃತಪಟ್ಟಿದ್ದರು.

**ಕದನ ವಿರಾಮ ಉಲ್ಲಂಘನೆ**


ನಂತರ ಅ.ನಲ್ಲಿ ಕದನ ವಿರಾಮ ಒಪ್ಪಂದ ನಡೆದಿತ್ತು. ಇದೀಗ ಒಪ್ಪಂದವನ್ನು ಉಲ್ಲಂಘಿಸಲಾಗಿದೆ ಎಂದು ಎರಡೂ ರಾಷ್ಟ್ರಗಳು ಪರಸ್ಪರ ದೂರಿಕೊಂಡು ದಾಳಿಗೆ ಮುಂದಾಗಿವೆ. ಥಾಯ್ಲೆಂಡ್ ಸೇನೆಯ ವಕ್ತಾರ ಮೇಜರ್ ಜನರಲ್ ವಿಂಥೈ ಸುವಾರಿ ಈ ಬಗ್ಗೆ ಮಾತನಾಡಿ, ಕಾಂಬೋಡಿಯಾ ಪಡೆಗಳು ನಮ್ಮ ಗಡಿ ಭಾಗದ ಪ್ರದೇಶಗಳನ್ನು ಗುರಿಯಾಗಿಸಿ ಮೊದಲಿಗೆ ದಾಳಿ ನಡೆಸಿವೆ.

ಇದರಿಂದಾಗಿ ನಮ್ಮ ಒಬ್ಬ ಯೋಧ ಮೃತಪಟ್ಟಿದ್ದು, ಎಂಟು ಯೋಧರು ಗಾಯಗೊಂಡಿದ್ದಾರೆ. ಗಡಿ ಭಾಗದಲ್ಲಿ ವಾಸಿಸುತ್ತಿರುವ 50 ಸಾವಿರಕ್ಕೂ ಅಧಿಕ ಮಂದಿಯನ್ನು ಸ್ಥಳಾಂತರಿಸಲಾಗಿದೆ. ದಾಳಿಗಳನ್ನು ಹಿಮ್ಮೆಟ್ಟಿಸುವುದಕ್ಕಾಗಿ ನಮ್ಮ ಸೇನಾಪಡೆಯು ಸೋಮವಾರ ಯುದ್ಧ ವಿಮಾನಗಳನ್ನು ಬಳಸಿದೆ ಎಂದಿದ್ದಾರೆ. ಇತ್ತ ಕಾಂಬೋಡಿಯಾದ ರಕ್ಷಣಾ ಸಚಿವಾಲಯದ ವಕ್ತಾರೆ ಮಾಲಿ ಸೂಚೆಟಾ ಪ್ರತಿಕ್ರಿಯಿಸಿ, ಥಾಯ್ಲೆಂಡ್ ಸೇನೆಯೇ ಸೋಮವಾರ ಮೊದಲಿಗೆ ನಮ್ಮ ಮೇಲೆ ದಾಳಿ ನಡೆಸಿದೆ. ಘಟನೆಯಲ್ಲಿ ನಾಲ್ವರು ನಾಗರಿಕರು ಮೃತಪಟ್ಟಿದ್ದು, ಒಂಬತ್ತಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ.

ಆದರೆ, ನಾವು ಪ್ರತಿದಾಳಿ ನಡೆಸಿಲ್ಲ. ಗಡಿ ಪ್ರದೇಶದಲ್ಲಿ ಶಾಂತಿ ಕದಡುವಂತಹ ಯಾವುದೇ ಚಟುವಟಿಕೆಗಳನ್ನು ನಡೆಸಲು ಕಾಂಬೋಡಿಯಾ ಬಯಸುವುದಿಲ್ಲ. ಹೀಗಾಗಿ ತಕ್ಷಣವೇ ದಾಳಿ ನಿಲ್ಲಿಸುವಂತೆ ಥಾಯ್ಲೆಂಡ್ ಅನ್ನು ಆಗ್ರಹಿಸುತ್ತೇವೆ ಎಂದು ಹೇಳಿದ್ದಾರೆ.

ಏತನ್ಮಧ್ಯೆ, ಥಾಯ್ಲೆಂಡ್ ಎಂದಿಗೂ ಸಂಘರ್ಷ ಬಯಸುವುದಿಲ್ಲ. ಆದರೆ, ನಮ್ಮ ಸಾರ್ವಭೌಮತ್ವಕ್ಕೆ ಧಕ್ಕೆಯಾದರೆ ಸಹಿಸಲು ಸಾಧ್ಯವಿಲ್ಲ. ಅಗತ್ಯಬಿದ್ದರೆ ದೇಶದ ರಕ್ಷಣೆಗಾಗಿ ಮಿಲಿಟರಿ ಕಾರ್ಯಾಚರಣೆಗಳನ್ನು ನಡೆಸಲಾಗುವುದು ಎಂದು ಥಾಯ್ಲೆಂಡ್‌ನ ಪ್ರಧಾನಿ ಎಚ್ಚರಿಕೆ ನೀಡಿರುವುದು ಮಹತ್ವ ಪಡೆದಿದೆ.

## ಭಾರತದ ಜತೆ ರಕ್ಷಣಾ ಸಹಕಾರ ವೃದ್ಧಿಗೆ ಅಮೆರಿಕ ಒತ್ತು



**ನ್ಯೂಯಾರ್ಕ್:** ಇಂಡೋ-ಪೆಸಿಫಿಕ್ ಪ್ರದೇಶಕ್ಕೆ ಸಂಬಂಧಿಸಿದಂತೆ ಎರಡೂ ದೇಶಗಳು ಸಮಾನವಾಗಿ ಹೊಂದಿರುವ ಉದ್ದೇಶದ ಈಡೇರಿಕೆಗೆ ಪ್ರಯತ್ನಿಸುವುದು ಮತ್ತು ಚೀನಾ ಒಡ್ಡಿರುವ ಸವಾಲನ್ನು ಎದುರಿಸಲು ಭಾರತದ ಜತೆ ನಿಕಟ ರಕ್ಷಣಾ ಸಹಕಾರ ಮುಂದುವರಿಸಲು ಅಮೆರಿಕ ಬಯಸಿದೆ.

ಬಿಡುಗಡೆ ಮಾಡಿದ 2026ರ ಹಣಕಾಸು ವರ್ಷದ ಅಮೆರಿಕ ರಕ್ಷಣಾ ನೀತಿ ಮಸೂದೆಯಲ್ಲಿ ಈ ಅಂಶಕ್ಕೆ ಒತ್ತು ನೀಡಲಾಗಿದೆ. ಇಂಡೊ ಪೆಸಿಫಿಕ್ ಪ್ರದೇಶದಲ್ಲಿನ ರಕ್ಷಣಾ ಸಹಕಾರ ಮತ್ತು ಪಾಲುದಾರಿಕೆ' ಬಗ್ಗೆ ನೀತಿಯಲ್ಲಿ ವಿವರಿಸಲಾಗಿದೆ. ಇಂಡೊ-ಪೆಸಿಫಿಕ್ ಪ್ರದೇಶದ ಮೇಲೆ ಹಿಡಿತ ಸಾಧಿಸಲು ಚೀನಾದೊಂದಿಗೆ ನಡೆಯುತ್ತಿರುವ ಪೈಪೋಟಿಯಲ್ಲಿ ಅಮೆರಿಕ ಮೇಲುಗೈ ಸಾಧಿಸಲು ಕೈಗೊಳ್ಳಬೇಕಾದ ಕಾರ್ಯತಂತ್ರದ ಬಗ್ಗೆಯೂ ಮಸೂದೆಯಲ್ಲಿ ಹೇಳಲಾಗಿದೆ.

ಈ ಪ್ರದೇಶದಲ್ಲಿ ಅಮೆರಿಕದ ರಕ್ಷಣಾ ಸಹಕಾರ, ಪಾಲುದಾರಿಕೆ ಬಲಪಡಿಸುವ ಪ್ರಯತ್ನಗಳನ್ನು ರಕ್ಷಣಾ ಕಾರ್ಯದರ್ಶಿ ಮುಂದುವರಿಸಬೇಕು ಎಂದು ಹೇಳಿದೆ. ಭಾರತದ ಜತೆ ದ್ವಿಪಕ್ಷೀಯ, ಬಹುಪಕ್ಷೀಯ ಸಹಕಾರದಲ್ಲಿ ತೊಡಗಿಸಿಕೊಳ್ಳುವುದು, ಜಂಟಿ ಸಮರಾಭ್ಯಾಸದಲ್ಲಿ ಪಾಲ್ಗೊಳ್ಳುವುದು, ರಕ್ಷಣಾ ವ್ಯಾಪಾರದ ವಿಸ್ತರಣೆ, ಮಾನವೀಯ ನೆರವು ಮತ್ತು ವಿಪತ್ತು ನಿರ್ವಹಣೆಗೆ ಸಂಬಂಧಿಸಿದ ಪರಸ್ಪರ ಸಹಯೋಗದ ಬಗ್ಗೆಯೂ ವಿವರಿಸಲಾಗಿದೆ. ಕಡಲ ಭದ್ರತೆಗೆ ಸಂಬಂಧಿಸಿದಂತೆ ಭಾರತದ ಜತೆ ಹೆಚ್ಚಿನ ಸಹಕಾರವನ್ನು ಹೊಂದುವುದೂ ಕೂಡಾ ಇದರಲ್ಲಿ ಒಳಗೊಂಡಿದೆ. ಕ್ವಾಡ್ ಮೂಲಕ ಉಭಯ ದೇಶಗಳ ಸೇನಾ ಸಹಕಾರವನ್ನು ಬಲಪಡಿಸುವ ಬಗ್ಗೆಯೂ ಮಸೂದೆಯಲ್ಲಿ ವಿವರಿಸಲಾಗಿದೆ. ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ ಚೀನಾದ ಆಕ್ರಮಣಕಾರಿ ನಡೆಯನ್ನು ಎದುರಿಸಲು ಭಾರತ, ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾವನ್ನು ಒಳಗೊಂಡ ಕ್ವಾಡ್ ಗುಂಪನ್ನು 2017ರಲ್ಲಿ ಸ್ಥಾಪಿಸಲಾಗಿದೆ.

## ಡ್ರೋನ್ ದಾಳಿಯಲ್ಲಿ 114 ಮಂದಿ ಸಾವು




**ಕೈರೊ:** ಸುಡಾನ್‌ನ ಕೊರ್ಡೊಫಾನ್‌ನ ಶಿಶುವಿಹಾರ ಮತ್ತು ಇತರ ಸ್ಥಳಗಳ ಮೇಲೆ ಕಳೆದ ವಾರ ನಡೆದ ಡ್ರೋನ್ ದಾಳಿಯಲ್ಲಿ 63 ಮಕ್ಕಳು ಸೇರಿದಂತೆ 114 ಮಂದಿ ಮೃತಪಟ್ಟಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಮುಖ್ಯಸ್ಥ ಸೋಮವಾರ ತಿಳಿಸಿದ್ದಾರೆ.

ಕಳೆದ ಕಾಗೋಲಿಯಲ್ಲಿ ಪ್ರತ್ಯೇಕ ಡ್ರೋನ್ ದಾಳಿ ನಡೆದಿದೆ. ಮೊದಲು ಶಿಶುವಿಹಾರವನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ. ಬಳಿಕ ಬದುಕುಳಿದವರ ರಕ್ಷಣೆಯಲ್ಲಿ ತೊಡಗಿದ್ದ ವೈದ್ಯರ ಮೇಲೆ ದಾಳಿ ಮಾಡಲಾಗಿದೆ. ಸಂವಹನದ ಕಡಿತದಿಂದ ಆ ವೇಳೆ ಸಾವಿನ ನಿಖರ ಸಂಖ್ಯೆ ದೊರೆತಿರಲಿಲ್ಲ ಎಂದು ಡಬ್ಲ್ಯುಎಚ್‌ಒ ತಿಳಿಸಿದೆ. ನಾಗರಿಕರು ಮತ್ತು ಆರೋಗ್ಯ ಸೌಲಭ್ಯಗಳ ಮೇಲಿನ ಈ ಅರ್ಥಹೀನ ದಾಳಿಯನ್ನು ವಿಶ್ವಸಂಸ್ಥೆ ಖಂಡಿಸುತ್ತದೆ ಮತ್ತು ಹಿಂಸಾಚಾರವನ್ನು ಕೊನೆಗೊಳಿಸಲು ಕರೆ ನೀಡುವ ಜೊತೆಗೆ ಮಾನವೀಯ ನೆರವನ್ನು ಹೆಚ್ಚಿಸುತ್ತದೆ ಎಂದು ಡಬ್ಲ್ಯುಎಚ್‌ಒ ನಿರ್ದೇಶಕ ಟೆಡ್ರೋಸ್ ಅದನೊಮ್ ಗೆಬ್ರಿಯಸಸ್ ಅವರು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ತಿಳಿಸಿದ್ದಾರೆ.

ನಾಗರಿಕರ ಮೇಲಿನ ದಾಳಿಗೆ ಅರೆಸೇನಾ ಪಡೆಯ ಕ್ಷಿಪ್ರ ಕಾರ್ಯಪಡೆ ಕಾರಣ ಎಂದು ವೈದ್ಯರು ಆರೋಪಿಸಿದ್ದಾರೆ. ಸುಡಾನ್‌ನ ಸೇನಾ ಪಡೆ ಮತ್ತು ಅರೆಸೇನಾ ಪಡೆಯ ಕ್ಷಿಪ್ರ ಕಾರ್ಯಪಡೆ ನಡುವೆ ಎರಡು ವರ್ಷಗಳಿಂದ ಆತಂರಿಕ ಸಂಘರ್ಷ ನಡೆಯುತ್ತಿದೆ.

## ಬಿಷ್ಣೋಯಿ ಗ್ಯಾಂಗ್‌ನಿಂದ ಬಿಗ್‌ಬಾಸ್ ಸ್ಪರ್ಧಿಗೂ ಕೊಲೆ ಬೆದರಿಕೆ



**ಮುಂಬೈ:** ಭೋಜಪುರಿ ನಟ ಪವನ್ ಸಿಂಗ್‌ಅವರಿಗೆ ಬಿಷ್ಣೋಯಿ ಗ್ಯಾಂಗ್ ಹೆಸರಿನಲ್ಲಿ ಅಪರಿಚಿತರಿಂದ ಕೊಲೆ ಬೆದರಿಕೆ ಎದುರಾಗಿದೆ. ಈ ಸಂಬಂಧ ಸಿಂಗ್ ಅವರ ಮ್ಯಾನೇಜರ್ ಮುಂಬೈ ಪೊಲೀಸ್ ಠಾಣೆಗೆ ಸೋಮವಾರ ದೂರು ನೀಡಿದ್ದಾರೆ. ಅಪರಿಚಿತ ವ್ಯಕ್ತಿಯು ಲಾರೆನ್ಸ್ ಗ್ಯಾಂಗ್ ಸದಸ್ಯ ಎಂದು ಹೇಳಿಕೊಂಡು ಕರೆ, ಮೆಸೇಜ್ ಮಾಡಿ ಬೆದರಿಕೆ ಹಾಕುತ್ತಿದ್ದಾನೆ. ರಕ್ಷಣೆ ಒದಗಿಸಬೇಕು ಎಂದು ಮನವಿ ಮಾಡಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಡಿಸಿಪಿ ದೀಕ್ಷಿತ್ ಗೆದಂ, ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

**ಬೆದರಿಕೆಗೆ ಕಾರಣವೇನು:** ಬಾಲಿವುಡ್ ನಟ ಸಲ್ಮಾನ್ ಖಾನ್ ಅವರೊಂದಿಗೆ ಪವನ್ ಸಿಂಗ್ ವೇದಿಕೆ ಅಥವಾ ತೆರೆ ಹಂಚಿಕೊಳ್ಳಬಾರದು. ತಪ್ಪಿದರೆ, ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಆರೋಪಿ ಎಚ್ಚರಿಕೆ ನೀಡಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಪವನ್ ಸಿಂಗ್ ಅವರ ತಂಡದ ಮತ್ತೆ ಇಬ್ಬರಿಗೂ ಇದೇ ರೀತಿಯ ಕರೆಗಳು ಬಂದಿವೆ. ಹಣಕ್ಕೆ ಬೇಡಿಕೆ ಇಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪವನ್ ಅವರು, ಸಲ್ಮಾನ್ ಖಾನ್ ನಡೆಸಿಕೊಡುವ ಹಿಂದಿ ಬಿಗ್ ಬಾಸ್ ರಿಯಾಲಿಟಿ ಶೋ ಸ್ಪರ್ಧಿಯಾಗಿದ್ದಾರೆ.

ಪಂಜಾಬಿ ಗಾಯಕ, ರಾಜಕಾರಣಿ ಸಿಧು ಮೂಸೆವಾಲಾ ಹತ್ಯೆ ಆರೋಪಿ ಲಾರೆನ್ಸ್ ಬಿಷ್ಣೋಯಿ, ಮಾದಕವಸ್ತು ಪ್ರಕರಣಕ್ಕೆ ಸಂಬಂಧಿಸಿದಂತೆ ಸದ್ಯ ಗುಜರಾತ್‌ನ ಸಾಬರಮತಿ ಜೈಲಿನಲ್ಲಿದ್ದಾನೆ.

**ಸಲ್ಮಾನ್ ವಿರುದ್ಧ ಹಗೆ ಏಕೆ:** 1998ರಲ್ಲಿ ಹಮ್ ಸಾಥ್ ಸಾಥ್ ಹೈ ಚಿತ್ರದ ಚಿತ್ರೀಕರಣದ ಸಂದರ್ಭ ರಾಜಸ್ಥಾನದ ಹಳ್ಳಿಯೊಂದರಲ್ಲಿ ಕೃಷ್ಣಮೃಗ ಬೇಟೆಯಾಡಿದ ಆರೋಪ ಸಲ್ಮಾನ್ ಖಾನ್ ಮೇಲಿದೆ.ಬಿಷ್ಣೋಯಿ ಸಮುದಾಯವು ಕೃಷ್ಣಮೃಗಗಳನ್ನು ಅತ್ಯಂತ ಪವಿತ್ರವೆಂದು ಎಂದು ಭಾವಿಸುತ್ತದೆ. ಇದೇ ಕಾರಣಕ್ಕೆ ಸಲ್ಮಾನ್ ಅವರನ್ನು ಬಿಷ್ಣೋಯಿ ಹಗೆ ಸಾಧಿಸುತ್ತಿದೆ ಎನ್ನಲಾಗಿದೆ. 2024ರ ಏಪ್ರಿಲ್‌ನಲ್ಲಿ ಸಲ್ಮಾನ್ ನಿವಾಸದ ಹೊರಗೆ ಗುಂಡಿನ ದಾಳಿ ನಡೆದಿತ್ತು. ಸಲ್ಮಾನ್ ಜೊತೆ ಉತ್ತಮ ಒಡನಾಟ ಹೊಂದಿದ್ದ ಮಹಾರಾಷ್ಟ್ರದ ಮಾಜಿ ಸಚಿವ, ಎನ್‌ಸಿಪಿ ನಾಯಕ ಬಾಬಾ ಸಿದ್ದಿಕಿ ಅವರನ್ನು ಅದೇ ವರ್ಷ ಅಕ್ಟೋಬರ್‌ನಲ್ಲಿ ಹತ್ಯೆ ಮಾಡಲಾಗಿತ್ತು. ಲಾರೆನ್ಸ್ ಬಿಷ್ಣೋಯಿ ಆದೇಶದಂತೆ ಕೊಲೆ ನಡೆದಿರಬಹುದೆಂದು ಪೊಲೀಸರು ಶಂಕಿಸಿದ್ದಾರೆ.

## ಮಿನಿ ನ್ಯೂಸ್

### ಗೋವಾ ನೈಟ್‌ಕ್ಲಬ್ ದುರಂತ: ನೋವು ವ್ಯಕ್ತಪಡಿಸಿದ ಲೂತಾ

**ಪಣಜಿ:** ಬರ್ಚ್ ಬೈ ರೋಮಿಯೊ ಲೇನ್ ನೈಟ್‌ಕ್ಲಬ್‌ನಲ್ಲಿ ನಡೆದ ಅನಾಹುತದ ಕುರಿತಂತೆ ಸಂಸ್ಥೆಯ ಮಾಲೀಕ ಸೌರಭ್ ಲೂತ್ರಾ ಬೇಸರ ವ್ಯಕ್ತಪಡಿಸಿದ್ದಾರೆ. ದುರಂತದಲ್ಲಿ ಮೃತಪಟ್ಟ ಕುಟುಂಬದ ಸದಸ್ಯರಿಗೆ ಎಲ್ಲಾ ರೀತಿಯ ನೆರವು, ಅಗತ್ಯ ಸಹಕಾರ ನೀಡಲು ಸಂಸ್ಥೆ ಬದ್ಧವಾಗಿದೆ ಎಂದು ಇನ್‌ಸ್ಟಾಗ್ರಾಮ್‌ನಲ್ಲಿ ಹಾಕಿದ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ದುರಂತದಲ್ಲಿ ಜೀವಗಳ ಪ್ರಾಣಹಾನಿಯಿಂದ ತೀವ್ರವಾದ ಆಘಾತಕ್ಕೆ ಒಳಗಾಗಿದ್ದೇನೆ. ಮೃತರ ಕುಟುಂಬದ ಜೊತೆಗೆ ಸಂಸ್ಥೆಯು ನಿಲ್ಲಲಿದೆ' ಎಂದು ಭರವಸೆ ನೀಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸೌರಬ್ ಲೂತ್ರಾ ವಿರುದ್ಧವೂ ಎಫ್‌ಐಆರ್ ದಾಖಲಾಗಿದೆ.

**ಉದ್ಯೋಗಿ ಬಂಧನ:** ಕ್ಲಬ್‌ನ ದೈನಂದಿನ ಮೇಲುಸ್ತುವಾರಿ ವಹಿಸಿದ್ದ ಭರತ್ ಕೊಹ್ಲಿಯನ್ನು ನವದೆಹಲಿಯ ಸಬ್ಜಿ ಮಂಡಿ ಪ್ರದೇಶದಲ್ಲಿ ಗೋವಾ ಪೊಲೀಸರು ಬಂಧಿಸಿದ್ದಾರೆ. ಹೆಚ್ಚಿನ ವಿಚಾರಣೆಗಾಗಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಪೊಲೀಸರು ವಶಕ್ಕೆ ಪಡೆದು ಗೋವಾಕ್ಕೆ ಕರೆದೊಯ್ದರು.

### ಸ್ವಾಮಿನಾಥನ್ ಪದಚ್ಯುತಗೊಳಿಸುವ ನೋಟಿಸ್ ಸಲ್ಲಿಕೆ ಸಾಧ್ಯತೆ

**ಚೆನ್ನೈ:** ಮದ್ರಾಸ್ ಹೈಕೋರ್ಟ್‌ನ ಮಧುರೈ ಪೀಠದ ನ್ಯಾಯಮೂರ್ತಿ ಜಿ.ಆರ್. ಸ್ವಾಮಿನಾಥನ್ ಅವರನ್ನು ಪದಚ್ಯುತಗೊಳಿಸುವುದಕ್ಕೆ ಸಂಬಂಧಿಸಿದ ನೋಟಿಸ್ ಅನ್ನು ಇಂಡಿಯಾ ಮೈತ್ರಿಕೂಟದ ಸಂಸದರು ಲೋಕಸಭೆಯಲ್ಲಿ ಸಲ್ಲಿಸುವ ಸಾಧ್ಯತೆಯಿದೆ. ಮಧುರೈ ಬಳಿಯ ತಿರುಪರನ್‌ಕುಂಡ್ರಂ ಬೆಟ್ಟದ ಕಲ್ಲಿನ ದೀಪಸ್ತಂಭ ದೀಪಥೋನ್‌ನಲ್ಲಿ ಕಾರ್ತಿಕ ದೀಪ ಬೆಳಗಿಸಲು ಹೈಕೋರ್ಟ್‌ನ ನ್ಯಾಯಮೂರ್ತಿ ಜಿ.ಆರ್.ಸ್ವಾಮಿನಾಥನ್ ಅವರು ಭಕ್ತರಿಗೆ ಅವಕಾಶ ನೀಡಿ ಇತ್ತೀಚೆಗೆ ಆದೇಶ ಹೊರಡಿಸಿದ್ದರು. ಅದೇ ಬೆಟ್ಟದಲ್ಲಿ ಸಿಕಂದರ್ ಬಾದುಶಾ ದರ್ಗಾ ಇದ್ದು, ಈ ಆದೇಶದಿಂದ ಕೋಮು ಸೌಹಾರ್ದಕ್ಕೆ ಧಕ್ಕೆ ಉಂಟಾಗಲಿದೆ ಎಂದು ಡಿಎಂಕೆ ಆತಂಕ ವ್ಯಕ್ತಪಡಿಸಿತ್ತು.

ತಮಿಳುನಾಡು, ಇತರ ರಾಜ್ಯಗಳ ಕಾಂಗ್ರೆಸ್ ಸಂಸದರು ನೋಟಿಸ್‌ಗೆ ಸಹಿ ಹಾಕಿದ್ದಾರೆ ಎಂದು ಮೂಲವೊಂದು ತಿಳಿಸಿದೆ. ನೋಟಿಸ್ ಸಲ್ಲಿಸಲು ಅಗತ್ಯವಿರುವ 100 ಸಂಸದರ ಬೆಂಬಲ ಸುಲಭವಾಗಿ ಸಿಗಲಿದೆ ಎಂಬ ವಿಶ್ವಾಸವನ್ನು ಡಿಎಂಕೆ ವ್ಯಕ್ತಪಡಿಸಿದೆ. ಡಿಎಂಕೆ ಸಂಸದರು ವಿರೋಧ ಪಕ್ಷಗಳ ಸದಸ್ಯರ ಬೆಂಬಲವನ್ನೂ ಕೋರುತ್ತಿದ್ದಾರೆ. ಲೋಕಸಭೆಯಲ್ಲಿ ಮಂಡಿಸಲಿರುವ ನೋಟಿಸ್ ಅನ್ನು ಎಲ್ಲಾ ಪಕ್ಷಗಳು ಬೆಂಬಲಿಸುವ ವಿಶ್ವಾಸವಿದೆ. ನೋಟಿಸ್‌ಗೆ ಸಹಿ ಹಾಕಿರುವ ಸಂಸದರ ನಿಖರ ಸಂಖ್ಯೆಯನ್ನು ಮಂಗಳವಾರ ಬೆಳಿಗ್ಗೆ ಹೇಳಲು ಸಾಧ್ಯ ಎಂದು ಮೂಲಗಳು ಹೇಳಿವೆ.

### ಅಮೆರಿಕದ ವಿರುದ್ಧ ಐರೋಪ್ಯ ಒಕ್ಕೂಟದ ಅಧಿಕಾರಿಗಳು ಕಿಡಿ

**ಬ್ರಸೆಲ್ಸ್:** ಯುರೋಪ್ ದೇಶಗಳ ರಾಜಕೀಯ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವ ಅಮೆರಿಕದ ವಿರುದ್ಧ ಐರೋಪ್ಯ ಒಕ್ಕೂಟದ ಉನ್ನತ ಅಧಿಕಾರಿಯೊಬ್ಬರು ಸೋಮವಾರ ಕಿಡಿಕಾರಿದ್ದಾರೆ. ಯಾವ ಪಕ್ಷ ಆಡಳಿತದ ಚುಕ್ಕಾಣಿ ಹಿಡಿಯಬೇಕೆಂದು ಇಲ್ಲಿನ ಜನರೇ ನಿರ್ಧರಿಸುತ್ತಾರೆ ಎಂದು ಕಟುವಾಗಿ ಹೇಳಿದ್ದಾರೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇತೃತ್ವದ ಆಡಳಿತವು ನೂತನ ರಾಷ್ಟ್ರೀಯ ಭದ್ರತಾ ಕಾರ್ಯತಂತ್ರವನ್ನು ಪ್ರಕಟಿಸಿದೆ. ಅದರಲ್ಲಿ ಯುರೋಪ್‌ನ ಮಿತ್ರ ರಾಷ್ಟ್ರಗಳನ್ನು ದುರ್ಬಲ ಎಂದು ಬಿಂಬಿಸಿ, ಬಲಪಂಥೀಯ ಪಕ್ಷಗಳಿಗೆ ಬೆಂಬಲ ನೀಡಲಾಗಿದೆ. ಈ ಬೆನ್ನಲ್ಲೇ ಯುರೋಪಿಯನ್ ಕೌನ್ಸಿಲ್ ಅಧ್ಯಕ್ಷ ಆ್ಯಂಟೊನಿಯೊ ಕೋಸ್ಟಾ ಅವರು ಈ ಹೇಳಿಕೆ ನೀಡಿದ್ದಾರೆ.

ಕಾರ್ಯತಂತ್ರದಲ್ಲಿ ಯುರೋಪ್ ದೇಶಗಳನ್ನು ಮಿತ್ರ ರಾಷ್ಟ್ರಗಳು ಎಂದು ಹೇಳಲಾಗಿದೆ. ಆದರೆ ಇಲ್ಲಿನ ರಾಜಕೀಯದಲ್ಲಿ ಮಧ್ಯಪ್ರವೇಶಿಸುವ ಅಮೆರಿಕದ ಬೆದರಿಕೆಯನ್ನು ನಾವು ಸ್ವೀಕರಿಸುವುದಿಲ್ಲ. ಯಾವ ಪಕ್ಷ ಒಳ್ಳೆಯದು ಅಥವಾ ಕೆಟ್ಟದ್ದು ಎಂದು ನಿರ್ಧರಿಸುವ ಯುರೋಪ್ ಜನರ ಹಕ್ಕನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆ.

### ಜಗತ್ತಿನ ಶಾಂತಿಗಾಗಿ ಭಾರತ, ರಷ್ಯಾ ಚೀನಾ ಪ್ರಮುಖ ಪಾತ್ರ ವಹಿಸಲಿವೆ

**ಬೀಜಿಂಗ್:** ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದ್ದ ಕುರಿತು ಇದೇ ಮೊದಲ ಬಾರಿಗೆ ಪ್ರತಿಕ್ರಿಯಿಸಿರುವ ಚೀನಾ, ಜಗತ್ತಿನ ಶಾಂತಿ ಮತ್ತು ಸ್ಥಿರತೆಗೆ ರಷ್ಯಾ, ಭಾರತ ಮತ್ತು ಚೀನಾದ ಪರಸ್ಪರ ಸಂಬಂಧಗಳು ಬಹಳ ಮುಖ್ಯ ಪಾತ್ರವಹಿಸಲಿವೆ ಎಂದಿದೆ. ಈ ಮೂರು ದೇಶಗಳು ದಕ್ಷಿಣ ಜಗತ್ತಿನ ಪ್ರಮುಖ ದೇಶಗಳಾಗಿವೆ.

ಈ ದೇಶಗಳು ಸ್ವಹಿತಾಸಕ್ತಿಗಾಗಿ ಮಾತ್ರವಲ್ಲ ಜಗತ್ತಿನ ಶಾಂತಿ, ಭದ್ರತೆ ಅಭಿವೃದ್ಧಿಗೆ ಮುಖ್ಯ ಭೂಮಿಕೆ ವಹಿಸುತ್ತವೆ. ಭಾರತ, ರಷ್ಯಾ ಜೊತೆಗೆ ಕೆಲಸ ಮಾಡುವ ನಾವು ಉತ್ಸುಕವಾಗಿದ್ದೇವೆ ಎಂದು ಚೀನಾ ಹೇಳಿದೆ.

# 32 ವರ್ಷಗಳ ಬಳಿಕ ಭಾರತದ, ಚೀನ ನೂತನ ರಾಯಭಾರ ಕಚೇರಿ
## ಪ್ರಧಾನಿಗಳ ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್ ಪರಿಕಲ್ಪನೆಯಿಂದ ಆರಂಭವಾದ ನೂತನ ಕಟ್ಟಡ, ಉಭಯದೇಶಗಳ ನಡುವೆ ಮಹತ್ವದ ಸುಧಾರಣೆ

**ಶಾಂಘೈ:** ಭಾರತ, ಚೀನಾ ನಡುವಿನ ಸಂಬಂಧ ವೃದ್ಧಿಗೊಳಿಸಲು ಹಲವು ಕ್ರಮಗಳನ್ನು ಉಭಯ ದೇಶಗಳೂ ತೆಗೆದುಕೊಳ್ಳುತ್ತಿದ್ದು, ಇದರ ಮುಂದಿನ ಹಂತವಾಗಿ 32 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ರಾಯಭಾರ ಕಚೇರಿಯನ್ನು ಸ್ಥಳಾಂತರಿಸಲಾಗಿದ್ದು, ಚೀನಾದ ಪ್ರಮುಖ ವ್ಯಾಪಾರ ಕೇಂದ್ರವಾದ ಶಾಂಘೈನಲ್ಲಿ ಭಾರತ ತನ್ನ ನೂತನ, ಅತ್ಯಾಧುನಿಕ ರಾಯಭಾರ ಕಚೇರಿ ಕಟ್ಟಡವನ್ನು ಉದ್ಘಾಟಿಸಿದೆ. ಪೂರ್ವ ಚೀನಾದ ಯಿವೂನಂತಹ ಭಾರತೀಯ ಸಮುದಾಯದ ಪ್ರಮುಖ ವ್ಯಾಪಾರ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದ್ದು, ಭಾರತೀಯ ವ್ಯಾಪಾರಿ ಸಮುದಾಯದ ಬೆಳವಣಿಗೆಗೆ ಉತ್ತೇಜನ ನೀಡುವ ಉದ್ದೇಶದಿಂದಾಗಿ ಈ ನೂತನ ಕಟ್ಟಡವನ್ನು ತೆರೆಯಲಾಗಿದೆ.

**ಚೀನಾದಲ್ಲಿ ಹೊಸ ರಾಯಭಾರ ಕಚೇರಿ ಉದ್ಘಾಟನೆ:** ಈ ಕುರಿತು ಪ್ರತಿಕಾ ಪ್ರಕಟಣೆ ನೀಡಿರುವ ರಾಯಭಾರ ಕಚೇರಿ ಭಾರತದ ರಾಯಭಾರಿ ಪ್ರದೀಪ್ ಕುಮಾರ್ ರಾವತ್ ಅವರು ಚಾಂಗ್ ನಿಂಗ್ ಜಿಲ್ಲೆಯ ಡಾನಿಂಗ್ ಸೆಂಟರ್‌ನಲ್ಲಿರುವ ಈ ವಿಶಾಲವಾದ ನೂತನ ಕಟ್ಟಡವನ್ನು ಉದ್ಘಾಟಿಸಿದ್ದಾರೆ. ಈ ನೂತನ ಕಟ್ಟಡವು 1,436.63 ಚದರ ಮೀಟರ್ ವಿಸ್ತೀರ್ಣವನ್ನು ಹೊಂದಿದ್ದು, ಹಿಂದಿನ ಕಚೇರಿಗಿಂತ ಎರಡೂವರೆ ಪಟ್ಟು ದೊಡ್ಡದಾಗಿದೆ. ಡಿ.8 ರಿಂದ ಈ ನೂತನ ಕಚೇರಿಯಿಂದ ಸಂಪೂರ್ಣ ಕಾರ್ಯಾಚರಣೆಗಳು ಆರಂಭವಾಗಲಿವೆ ಎಂದು ತಿಳಿಸಿದೆ.

**ಪ್ರಧಾನಿಯವರ ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್ ಪರಿಕಲ್ಪನೆಯ ಭಾಗ:** ಈ ವೇಳೆ ಮಾತನಾಡಿದ ಕಾನ್ಸುಲ್ ಜನರಲ್ ಪ್ರತೀಕ್ ಮಾಥುರ್ ಪ್ರಧಾನಿ ನರೇಂದ್ರ ಮೋದಿ ಅವರ ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್




ಎಂಬ ಪರಿಕಲ್ಪನೆಯ ದೃಷ್ಟಿಕೋನಕ್ಕೆ ಅನುಗುಣವಾಗಿ, ಈ ನೂತನ ಕಚೇರಿ ಎಲ್ಲಾ ಭಾರತೀಯ ಸಮುದಾಯದವರಿಗೆ, ರಾಯಭಾರ ಕಚೇರಿಯೊಂದಿಗೆ ತೊಡಗಿಸಿಕೊಳ್ಳುವ ಎಲ್ಲಾ ಪಾಲುದಾರರಿಗೆ ಉತ್ತಮ ಸೇವೆಗಳನ್ನು ಒದಗಿಸಲು ಸಹಕಾರಿ ಆಗಿದೆ. ಈ ವಿಸ್ತರಣೆಯು ರಾಯಭಾರಿ, ವಾಣಿಜ್ಯ, ಸಾಂಸ್ಕೃತಿಕ ಮತ್ತು ಆಡಳಿತಾತ್ಮಕ ಕಾರ್ಯಗಳನ್ನು ಒಂದೇ, ಸುರಕ್ಷಿತ ಮತ್ತು ಆಧುನಿಕ ಸ್ಥಳದಲ್ಲಿ ಕೇಂದ್ರೀಕರಿಸಲು ಸಹಾಯ ಮಾಡುತ್ತದೆ. ಇದರಿಂದಾಗಿ ಕಾರ್ಯಕ್ಷಮತೆ ಹೆಚ್ಚಾಗುತ್ತದೆ, ಸಾರ್ವಜನಿಕ ಸೇವೆಗಳ ಸುಧಾರಣೆಗೆ ಅನುಕೂಲವಾಗಲಿದೆ ಎಂದು ವಿವರಿಸಿದರು.

ಇತ್ತೀಚೆಗೆ ಭಾರತ ಮತ್ತು ಶಾಂಘೈ ನಡುವೆ ಆರಂಭವಾದ ನೇರ ವಿಮಾನಗಳಂತಹ ಉಪಕ್ರಮಗಳು ವ್ಯಾಪಾರ, ಪ್ರಯಾಣ, ವ್ಯವಹಾರ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲಿವೆ. ಈ ಹಿನ್ನೆಲೆಯಲ್ಲಿ ನೂತನ ರಾಯಭಾರ ಕಚೇರಿಯ ಹೆಚ್ಚಿದ ಸಾಮರ್ಥ್ಯವು ಸಮಯೋಚಿತವಾಗಿದೆ. ಈ ಸುಂದರವಾದ ಹೊಸ ಅಧ್ಯಾಯಕ್ಕೆ ಪಾದಾರ್ಪಣೆ ಮಾಡುತ್ತಿರುವಾಗ ಈ ರಾಯಭಾರ ಕಚೇರಿಯನ್ನು ಕೇವಲ ಒಂದು ಕಚೇರಿಯಾಗಿ ಅಲ್ಲದೆ, ಭಾರತ, ಪೂರ್ವ ಚೀನಾ ಪ್ರದೇಶದ ನಡುವಿನ ಸ್ನೇಹ, ವಾಣಿಜ್ಯ, ಸಂಸ್ಕೃತಿ, ಜನರ ನಡುವಿನ ಸಂಬಂಧಗಳ ಒಂದು ರೋಮಾಂಚಕ ಕೇಂದ್ರವನ್ನಾಗಿ ರೂಪಿಸಲಿದೆ ಎಂದು ತಿಳಿಸಿದ್ದಾರೆ. ಶಾಂಘೈ ಒಕ್ಕೂಟದ ಶೃಂಗಸಭೆಯ ನಂತರ ಭಾರತ ಹಾಗೂ ಚೀನಾದ ದ್ವಿಪಕ್ಷೀಯ ಸಂಬಂಧಗಳಲ್ಲಿ ಹಲವು ಸುಧಾರಣೆಗಳು ಕಾಣ ಸಿಗುತ್ತಿದ್ದು, ನೇರ ವಿಮಾನ ಸೇವೆಯಿಂದ ಹಿಡಿದು ಹೊಸ ರಾಯಭಾರ ಕಚೇರಿವರೆಗೂ ಎಲ್ಲಾ ವಲಯಗಳಲ್ಲೂ ಉಭಯದೇಶಗಳು ಸಾಮರಸ್ಯ ಕಂಡುಕೊಳ್ಳುವ ಪ್ರಯತ್ನ ಮಾಡುತ್ತಿವೆ.

**ಮಹತ್ವದ ಹೆಜ್ಜೆ**

**ಭಾರತವು 32 ವರ್ಷಗಳ ಬಳಿಕ ಶಾಂಘೈನಲ್ಲಿ ತನ್ನ ನೂತನ, ಅತ್ಯಾಧುನಿಕ ರಾಯಭಾರ ಕಚೇರಿ ಕಟ್ಟಡವನ್ನು ಉದ್ಘಾಟಿಸಿದೆ. ಇದು ಭಾರತೀಯ ವ್ಯಾಪಾರಿ ಸಮುದಾಯದ ಬೆಳವಣಿಗೆಗೆ ಉತ್ತೇಜನ ನೀಡುವ ಉದ್ದೇಶದಿಂದ ತೆರೆಯಲಾಗಿದ್ದು, ಹಿಂದಿನ ಕಚೇರಿಗಿಂತ ಎರಡೂವರೆ ಪಟ್ಟು ದೊಡ್ಡದಾಗಿದೆ. ಪ್ರಧಾನಿಗಳ ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್ ಪರಿಕಲ್ಪನೆ ಪೂರ್ವ ಚೀನಾದಲ್ಲಿ ಬೆಳೆಯುತ್ತಿರುವ ಭಾರತೀಯ ವ್ಯಾಪಾರ ಸಮುದಾಯದಕ್ಕೆ ಸಹಕಾರಿಯಾಗಲಿದ್ದು, ಭಾರತ-ಚೀನಾ ರಾಜತಾಂತ್ರಿಕ ಸಂಬಂಧಗಳ 75ನೇ ವರ್ಷಾಚರಣೆಯ ಸಂದರ್ಭದಲ್ಲಿ ಮಹತ್ವದ ಹೆಜ್ಜೆಯಾಗಿದೆ. ಅಲ್ಲದೆ, ಈ ರಾಯಭಾರ ಕಚೇರಿ ಭಾರತ ಹಾಗೂ ಚೀನಾದ ದ್ವಿಪಕ್ಷೀಯ ಸಂಬಂಧದಲ್ಲಿನ ಉಂಟಾಗುತ್ತಿರುವ ಸುಧಾರಣೆಗಳ ಪ್ರತೀಕವಾಗಿ ಕಾಣುತ್ತಿದೆ.**

**ಈ ಕುರಿತು ಮಾತನಾಡಿದ ಚೀನಾದಲ್ಲಿನ ಭಾರತದ ರಾಯಭಾರಿ ಪ್ರದೀಪ್ ರಾವತ್ ಈ ವರ್ಷ ಭಾರತ ಮತ್ತು ಚೀನಾ ರಾಜತಾಂತ್ರಿಕ ಸಂಬಂಧಗಳ 75ನೇ ವರ್ಷಾಚರಣೆಯನ್ನು ಆಚರಿಸುತ್ತಿದ್ದು, ಈ ವಿಶೇಷದ ನಡುವೆ 1992ರ ಬಳಿಕ ಇದೇ ಮೊದಲ ಬಾರಿಗೆ ರಾಯಭಾರ ಕಚೇರಿ ಸ್ಥಳಾಂತರಗೊಂಡಿರುವುದು ಮಹತ್ವದ ಸಂಗತಿಯಾಗಿದೆ. ಶಾಂಘೈ ಭಾರತದೊಂದಿಗೆ ವಿಶೇಷ ಸಂಬಂಧವನ್ನು ಹೊಂದಿದೆ. ಈಗ ಇಲ್ಲಿ ವಿಶ್ವದರ್ಜೆಯ ರಾಯಭಾರ ಕಚೇರಿ ಸ್ಥಾಪನೆಯಾಗಿದೆ.**

**-ಪ್ರದೀಪ್ ಕುಮಾರ್ ರಾವತ್,**
**ಭಾರತದ ರಾಯಭಾರಿ**

# ಟಾಕ್ಸಿಕ್‌ಗಾಗಿ ಒಂದಾದ ಎರಡು ದೊಡ್ಡ ಶಕ್ತಿಗಳು



ನಟ ಯಶ್ ನಟನೆಯ 'ಟಾಕ್ಸಿಕ್' ಸಿನಿಮಾ ರಿಲೀಸ್‌ಗೆ ಇನ್ನು ಬಾಕಿ ಇರೋದು ಕೇವಲ 100 ದಿನಗಳು ಮಾತ್ರ. ಈಗಾಗಲೇ ಶೂಟಿಂಗ್ ಮುಗಿಸಿಕೊಂಡಿರೋ ತಂಡದವರು ಭರ್ಜರಿಯಾಗಿ ಸಿನಿಮಾ ಪ್ರಚಾರ ಮಾಡಲು ರೆಡಿ ಆಗಿದ್ದಾರೆ. ಈಗ ಸಿನಿಮಾ ಬಗ್ಗೆ ಒಂದು ಅಚ್ಚರಿಯ ಮಾಹಿತಿ ಕೇಳಿ ಬರುತ್ತಿದೆ. ಈ ಚಿತ್ರಕ್ಕಾಗಿ ಎರಡು ದೊಡ್ಡ ಶಕ್ತಿಗಳು ಒಂದಾಗುತ್ತಿವೆ ಎನ್ನಲಾಗುತ್ತಾ ಇದೆ. 'ಟಾಕ್ಸಿಕ್' ಸಿನಿಮಾದ ಮ್ಯೂಸಿಕ್ ಬಗ್ಗೆ ಸಾಕಷ್ಟು ಕುತೂಹಲ ಇದೆ. ಇದನ್ನು ಕಂಪೋಸ್ ಮಾಡೋದು ಯಾರು ಎಂಬುದು ಇನ್ನೂ ಸ್ಪಷ್ಟ ಆಗಿಲ್ಲ. ಅನಿರುದ್ಧ್ ಅವರು ಇದಕ್ಕೆ ಸಂಗೀತ ಸಂಯೋಜನೆ ಮಾಡುತ್ತಿದ್ದಾರೆ ಎನ್ನಲಾಗಿತ್ತು. ಆದರೆ, ನಂತರ ರವಿ ಬಸ್ರೂರು ಹೆಸರು ಕೇಳಿ ಬಂತು. ಈಗ ಕೇಳಿ ಬರುತ್ತಿರುವ ಲೇಟೆಸ್ಟ್ ಮಾಹಿತಿ ಎಂದರೆ, ಈ ಎರಡೂ ದಿಗ್ಗಜರು ಸಿನಿಮಾದಲ್ಲಿ ಕೆಲಸ ಮಾಡುತ್ತಿದ್ದಾರೆ ಎನ್ನಲಾಗಿದೆ. ರವಿ ಬಸ್ರೂರು ಅವರು ಕನ್ನಡದ ಖ್ಯಾತ ಸಂಗೀತ ಸಂಯೋಜಕರು. ಪರಭಾಷೆಯಲ್ಲೂ ಅವರಿಗೆ ಬೇಡಿಕೆ ಇದೆ. ಎಲ್ಲಕ್ಕಿಂತ ಮುಖ್ಯವಾಗಿ ಯಶ್ ಸಿನಿಮಾಗಳಲ್ಲಿ ಕೆಲಸ ಮಾಡಿದ್ದಾರೆ. ಕೆಲಸದ ವಿಷಯದಲ್ಲಿ ಇಬ್ಬರ ಮಧ್ಯೆ ಒಳ್ಳೆಯ ಹೊಂದಾಣಿಕೆ ಇದೆ. ಇನ್ನು, ಅನಿರುದ್ಧ್ ಅವರ ಜನಪ್ರಿಯತೆ ಸಾಕಷ್ಟು ಹೆಚ್ಚಿದೆ. ಹಲವು ಬಿಗ್ ಬಜೆಟ್ ಚಿತ್ರಗಳಿಗೆ ಅವರು ಮ್ಯೂಸಿಕ್ ಕಂಪೋಸ್ ಮಾಡಿದ್ದಾರೆ.

# ಕೊನೆಗೂ ಅದಿತಿ ರಾವ್ ಹೈದರಿ ಗುಟ್ಟು ರಟ್ಟಾಯ್ತು



ಬಾಲಿವುಡ್ ಹಾಗೂ ದಕ್ಷಿಣ ಭಾರತದ ಚಿತ್ರರಂಗದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿರುವ ಸುಂದರಿ ಅದಿತಿ ರಾವ್ ಹೈದರಿ, ಕೇವಲ ತಮ್ಮ ಸೌಂದರ್ಯಕ್ಕಷ್ಟೇ ಅಲ್ಲ, ಆಳವಾದ ಅಭಿನಯಕ್ಕೂ ಹೆಸರುವಾಸಿ. ಪರದೆಯ ಮೇಲೆ ಅತ್ಯಂತ ಶಾಂತವಾಗಿ, ಮೃದುವಾಗಿ ಕಾಣಿಸಿಕೊಳ್ಳುವ ಈ ನಟಿಯ ಅಂತರಾಳದಲ್ಲಿ, ಸವಾಲುಗಳನ್ನು ಸ್ವೀಕರಿಸುವ ಒಬ್ಬ ಹಠಮಾರಿ ಕಲಾವಿದೆ ಅಡಗಿದ್ದಾಳೆಂದರೆ ನೀವು ನಂಬಲೇಬೇಕು. ಹೌದು,

ಅದಿತಿ ರಾವ್ ಹೈದರಿ ಇತ್ತೀಚೆಗೆ ನೀಡಿದ ಸಂದರ್ಶನವೊಂದರಲ್ಲಿ ತಮ್ಮ ಅದ್ಭುತ ನಟನೆಯ ಹಿಂದಿರುವ ಸೀಕ್ರೆಟ್ ಏನು ಎಂಬುದನ್ನು ಬಹಿರಂಗಪಡಿಸಿದ್ದಾರೆ. ಸಂಗೀತ, ನಟನೆ ಮತ್ತು ಭಾವನೆಗಳನ್ನು ಏಕಕಾಲದಲ್ಲಿ ಸರಿದೂಗಿಸುವ ಕಲೆ ಅದಿತಿಗೆ ಸಿದ್ಧಿಸಿದೆ. ಆದರೆ ಅವರ ಈ ಯಶಸ್ಸಿನ ಹಿಂದಿರುವುದು ಕಂಫರ್ಟ್ ಅಲ್ಲ, ಬದಲಾಗಿ ಭಯ ಡೆಕ್ಕನ್ ಕ್ರಾನಿಕಲ್‌ಗೆ ನೀಡಿದ ಇತ್ತೀಚಿನ ಸಂದರ್ಶನದಲ್ಲಿ ಮಾತನಾಡಿದ ಅದಿತಿ, ನಾನು ಯಾವಾಗಲೂ ನನಗೆ ಭಯ ಹುಟ್ಟಿಸುವ ಪಾತ್ರಗಳನ್ನೇ ಆಯ್ಕೆ ಮಾಡಿಕೊಳ್ಳುತ್ತೇನೆ ಮತ್ತು ನನ್ನ ಮಿತಿಯನ್ನು ಮೀರಿ ಕೆಲಸ ತೆಗೆಯುವ ನಿರ್ದೇಶಕರನ್ನೇ ಹುಡುಕುತ್ತೇನೆ, ಎಂದು ಹೇಳಿಕೊಂಡಿದ್ದಾರೆ.

# ಲೈಂಗಿಕ ದೌರ್ಜನ್ಯ ಪ್ರಕರಣ ಮಲಯಾಳಂ ನಟ ದಿಲೀಪ್ ನಿರ್ದೋಷಿ



ಖ್ಯಾತ ನಟಿ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಪ್ರಕರಣದಲ್ಲಿ ಮಲಯಾಳಂ ನಟ ದಿಲೀಪ್ ನಿರ್ದೋಷಿ ಎಂದು ಕೇರಳ ಕೋರ್ಟ್ ತೀರ್ಪು ನೀಡಿದೆ. 2017ರಲ್ಲಿ ಈ ಪ್ರಕರಣ ನಡೆದಿತ್ತು. ಈ ಕೇಸ್‌ನಲ್ಲಿ ದಿಲೀಪ್ ಅವರು 8ನೇ ಆರೋಪಿ ಆಗಿದ್ದರು. ಅಪರಾಧ ಕೃತ್ಯಕ್ಕೆ ಸಂಚು ರೂಪಿಸಿದ್ದು ಹಾಗೂ ಸಾಕ್ಷಿ ನಾಶದ ಆರೋಪ ಅವರ ಮೇಲಿತ್ತು. ಆದರೆ ಈ ಪ್ರಕರಣದಲ್ಲಿ ದಿಲೀಪ್ ಅವರ ಪಾತ್ರ ಇಲ್ಲ ಎಂದು ನ್ಯಾಯಾಲಯ ತೀರ್ಪು ನೀಡಿದೆ. ಇದರಿಂದಾಗಿ ದಿಲೀಪ್ ಅವರು ನಿಟ್ಟುಸಿರು ಬಿಟ್ಟಿದ್ದಾರೆ. 8 ವರ್ಷಗಳ ಸುದೀರ್ಘ ವಿಚಾರಣೆ ಬಳಿಕ ಕೋರ್ಟ್ ಈ ತೀರ್ಪು ನೀಡಿದೆ. ದಿಲೀಪ್ ಅವರನ್ನು ಖುಲಾಸೆಗೊಳಿಸಿದೆ.

ಇದೇ ಪ್ರಕರಣದಲ್ಲಿ 6 ಆರೋಪಿಗಳು ಅಪರಾಧ ಎಸಗಿರುವುದು ಸಾಬೀತಾಗಿದೆ. ಸಾಮೂಹಿಕ ಅತ್ಯಾಚಾರ, ಅಪಹರಣ, ಅಪರಾಧ ಕೃತ್ಯದ ಸಂಚು, ವಿವಸ್ತ್ರಗೊಳಿಸುವ ಯತ್ನ ಸೇರಿದಂತೆ ಹಲವು ಕೃತ್ಯಗಳಲ್ಲಿ 6 ಜನರು ಅಪರಾಧಿಗಳು ಎಂದು ಕೋರ್ಟ್ ತೀರ್ಪು ನೀಡಿದೆ. ಈ 6 ಮಂದಿಗೆ ಡಿಸೆಂಬರ್ 12ರಂದು ಶಿಕ್ಷೆ ಪ್ರಕಟ ಆಗಲಿದೆ.

ತಮ್ಮ ಮೇಲಿನ ಈ ಪ್ರಕರಣ ಖುಲಾಸೆ ಆಗಿದ್ದಕ್ಕೆ ನಟ ದಿಲೀಪ್ ಕುಮಾರ್ ಅವರು ಧನ್ಯವಾದ ತಿಳಿಸಿದ್ದಾರೆ. ಮಾಧ್ಯಮಗಳಿಗೆ ಅವರು ಪ್ರತಿಕ್ರಿಯೆ ನೀಡಿದ್ದಾರೆ. 'ಪ್ರಮುಖ ಆರೋಪಿ ಪಲ್ಸರ್ ಸುನಿ ಹಾಗೂ ಆತನ ಸಹಚರರ ಜೊತೆ ಪೊಲೀಸರು ಸೇರಿಕೊಂಡು ನನ್ನ ವಿರುದ್ಧ ಕಥೆ ಕಟ್ಟಿದ್ದರು. ಕೆಲವು ಮಾಧ್ಯಮದವರ ಜೊತೆ ಕೈ ಜೋಡಿಸಿ ಸೋಶಿಯಲ್ ಮೀಡಿಯಾದಲ್ಲಿ ಸುಳ್ಳು ಸುದ್ದಿ ಹಬ್ಬಿಸಿದ್ದರು. ಆದರೆ ನ್ಯಾಯಾಲಯದಲ್ಲಿ ಆ ಸುಳ್ಳು ಕಥೆ ನಿಲ್ಲಲಿಲ್ಲ. ನಿಜವಾಗಿ ಸಂಚು ನಡೆದಿದ್ದು ನನ್ನ ವಿರುದ್ಧ. ಈ 9 ವರ್ಷಗಳಲ್ಲಿ ನನ್ನ ಗೌರವ ಮತ್ತು ಜೀವನ ಹಾಳಾಗಿದೆ' ಎಂದು ದಿಲೀಪ್ ಹೇಳಿದ್ದಾರೆ. ಸೆಷನ್ಸ್ ಕೋರ್ಟ್ ನೀಡಿರುವ ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಕೇರಳ ಸರ್ಕಾರ ನಿರ್ಧರಿಸಿದೆ. ಆ ಕುರಿತು ಕಾನೂನು ಸಚಿವ ಪಿ. ರಾಜೀವ್ ಅವರು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಜೊತೆ ಮಾತುಕತೆ ಮಾಡಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿ ಆಗಿದೆ. ಮೇಲ್ಮನವಿ ಸಲ್ಲಿಸಲು ಈಗಾಗಲೇ ಸಿದ್ಧತೆ ಮಾಡಿಕೊಳ್ಳಲಾಗಿದೆ.

# ಗಂಡನ ಜಾಕೆಟ್ ಕದ್ದ ದೀಪಿಕಾ ಪಡುಕೋಣೆ




ಬಾಲಿವುಡ್‌ನ 'ಪವರ್ ಕಪಲ್' ಎಂದೇ ಖ್ಯಾತಿ ಪಡೆದಿರುವ ದೀಪಿಕಾ ಪಡುಕೋಣೆ ಮತ್ತು ರಣವೀರ್ ಸಿಂಗ್ ಮತ್ತೊಮ್ಮೆ ತಮ್ಮ ಫ್ಯಾಷನ್ ಸೆನ್ಸ್ ಮೂಲಕ ಸುದ್ದಿಯಾಗಿದ್ದಾರೆ. ಭಾನುವಾರ ಅಬುಧಾಬಿಯಲ್ಲಿ ನಡೆದ ಪ್ರತಿಷ್ಠಿತ ಫಾರ್ಮುಲಾ 1 ರೇಸ್ ಕಾರ್ಯಕ್ರಮಕ್ಕೆ ಸಾಕ್ಷಿಯಾದ ಈ ತಾರಾ ಜೋಡಿ, ರೇಸ್ ಟ್ರ್ಯಾಕ್ ಅನ್ನು ಫ್ಯಾಷನ್ ರನ್‌ವೇ ಆಗಿ ಪರಿವರ್ತಿಸಿದಂತಿತ್ತು. ವಿಶೇಷವೇನೆಂದರೆ, ದೀಪಿಕಾ ಪಡುಕೋಣೆ ತಮ್ಮ ಲುಕ್ ಪೂರ್ಣಗೊಳಿಸಲು ಪತಿ ರಣವೀರ್ ಅವರ ವಾರ್ಡ್‌ರೋಬ್‌ನಿಂದ ಜಾಕೆಟ್ ಒಂದನ್ನು 'ಕದ್ದು' ಧರಿಸಿರುವುದು ಅಭಿಮಾನಿಗಳ ಕಣ್ಣಿಗೆ ಬಿದ್ದಿದೆ. ಈವೆಂಟ್‌ನಲ್ಲಿ ದೀಪಿಕಾ ಕಂದು ಬಣ್ಣದ ಟರ್ಟಲ್ ನೆಕ್ ಡ್ರೆಸ್ ಧರಿಸಿ ಅತ್ಯಂತ ಆಕರ್ಷಕವಾಗಿ ಕಾಣುತ್ತಿದ್ದರು. ಆದರೆ, ಅವರ ಉಡುಪಿನ ಹೈಲೈಟ್ ಎಂದರೆ ಅವರು ಧರಿಸಿದ್ದ ದೊಡ್ಡದಾದ ಲೆದರ್ ಜಾಕೆಟ್. ಹದ್ದಿನ ಕಣ್ಣಿನ ಅಭಿಮಾನಿಗಳು ತಕ್ಷಣವೇ ಇದು ರಣವೀರ್ ಸಿಂಗ್ ಅವರಿಗೆ ಸೇರಿದ ಓವರ್ ಸೈಜ್ಡ್ ಲೆದರ್ ಜಾಕೆಟ್ ಎಂಬುದನ್ನು ಗುರುತಿಸಿದ್ದಾರೆ. ರಣವೀರ್ ಅವರ ಬಟ್ಟೆಗಳನ್ನು ದೀಪಿಕಾ ಆಗಾಗ ಬಳಸಿಕೊಳ್ಳುವುದು ಹೊಸದೇನಲ್ಲವಾದರೂ, ಈ ಬಾರಿ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಪತಿಯ ಜಾಕೆಟ್ ಧರಿಸಿ 'ಕಪಲ್ ಗೋಲ್ಸ್' ಏನೆಂದು ತೋರಿಸಿಕೊಟ್ಟಿದ್ದಾರೆ. ನ್ಯೂಟ್ರಲ್ ಬಣ್ಣದ ಡ್ರೆಸ್ ಜೊತೆಗೆ ರಣವೀರ್ ಅವರ ಜಾಕೆಟ್ ಧರಿಸಿ ದೀಪಿಕಾ ಕೂಲ್ ಆಗಿ ಪೋಸ್ ನೀಡಿದ್ದಾರೆ.

**ಅಂಥ ಪರಿಸ್ಥಿತಿಗೆ ಬಂದು ತಲುಪಿದ್ರಾ**

**ಬಣ್ಣದ ಲೋಕಕ್ಕೆ ಮರಳಿದ ರಣವೀರ್:** ಇನ್ನೊಂದೆಡೆ, ಕಳೆದ ಸುಮಾರು ಎರಡು ವರ್ಷಗಳಿಂದ ಕೇವಲ ಕಪ್ಪು ಮತ್ತು ಬಿಳಿ ಬಣ್ಣದ ಬಟ್ಟೆಗಳಲ್ಲೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದ ರಣವೀರ್ ಸಿಂಗ್, ಕೊನೆಗೂ ಬಣ್ಣದ ಲೋಕಕ್ಕೆ ಮರಳಿದ್ದಾರೆ. ತಮ್ಮ ಹೊಸ ಸಿನಿಮಾ 'ಧುರಂಧರ್' ಯಶಸ್ಸಿನ ಅಲೆಯಲ್ಲಿ ತೇಲುತ್ತಿರುವ ರಣವೀರ್, ಬೇಬಿ ಪಿಂಕ್ ಬಣ್ಣದ ಜಾಕೆಟ್, ಟ್ಯಾಂಕ್ ಟಾಪ್ ಮತ್ತು ಬೀಜ್ ಬಣ್ಣದ ಪ್ಯಾಂಟ್ ಧರಿಸಿ ಮಿಂಚಿದರು. ಅವರ ಈ ಕಲರ್‌ಫುಲ್ ಅವತಾರ ಅಭಿಮಾನಿಗಳಿಗೆ ಬಹಳ ಇಷ್ಟವಾಗಿದೆ. ರಣವೀರ್ ಸಿಂಗ್ ಅವರ ಈ ಸಂಭ್ರಮಕ್ಕೆ ಪ್ರಮುಖ ಕಾರಣ ಅವರ ಇತ್ತೀಚಿನ ಬಿಡುಗಡೆಯಾದ 'ಧುರಂಧರ್' ಚಿತ್ರದ ಅಭೂತಪೂರ್ವ ಯಶಸ್ಸು. ವರದಿಗಳ ಪ್ರಕಾರ, ಈ ಚಿತ್ರವು ಬಿಡುಗಡೆಯಾದ ಮೊದಲ ವಾರಾಂತ್ಯದಲ್ಲೇ ಭಾರತೀಯ ಬಾಕ್ಸ್ ಆಫೀಸ್‌ನಲ್ಲಿ ಬರೋಬ್ಬರಿ 100 ಕೋಟಿ ರೂ.ಗಳ ಗಡಿ ದಾಟಿದೆ. ಕಲೆಕ್ಷನ್ ಮಾಡಿದೆ.

# ಮಣಿರತ್ನಂ ಸಿನಿಮಾದಲ್ಲಿ ನಟಿಸ್ತಾರಾ ಸಾಯಿಪಲ್ಲವಿ?



ಸಾಯಿ ಪಲ್ಲವಿಯನ್ನು ಇಷ್ಟಪಡದವರು ಯಾರು ಇಲ್ಲ ಅನ್ನಿಸುತ್ತೆ. ಯಾಕಂದ್ರೆ ನಟಿ ಸಾಯಿ ಪಲ್ಲವಿ ತಮ್ಮ ನ್ಯಾಚುರಲ್‌ಬ್ಯೂಟಿಯಿಂದ ಎಲ್ಲರ ಮನಸ್ಸನ್ನು ಗೆದ್ದಿದ್ದಾರೆ. ಅಷ್ಟೇ ಅಲ್ಲದೆ ಸಾಯಿ ಪಲ್ಲವಿಯನ್ನು ಹರೆಯದ ಯುವಕರ ಪಾಲಿನ ಕ್ರಶ್ ಅಂತಲೇ ಹೇಳಬಹುದು. ಜೊತೆಗೆ ತನ್ನ ಅದ್ಭುತವಾದ ನಟನೆಯಿಂದಲೇ ಸಾಕಷ್ಟು ಅಭಿಮಾನಿಗಳನ್ನು ಸಂಪಾದಿಸಿಕೊಂಡಿದ್ದಾರೆ. ಮಲಯಾಳಂ ಇಂಡಸ್ಟ್ರಿಯಿಂದ ಬಂದಿದ್ದರೂ ಸಾಯಿ ಪಲ್ಲವಿ ತನ್ನ ನಟನೆಯಿಂದ ತೆಲುಗು ಪ್ರೇಕ್ಷಕರ ಮನಸ್ಸು ಗೆದ್ದಿದ್ದಾರೆ. ಫಿದಾ ಚಿತ್ರದ ಮೂಲಕ ಅದೆಷ್ಟೋ ಪಡ್ಡೆ ಹುಡುಗರ ಮನಸ್ಸನ್ನು ಕದ್ದಿದ್ದಾರೆ . ಇದಾದ ಬಳಿಕ ಸರಣಿ ಸಿನಿಮಾಗಳ ಮೂಲಕ ಅಲೆಯನ್ನೇ ಸೃಷ್ಟಿಸಿದ್ದಾರೆ .

**ಸೀತೆಯಾಗಿ ಸಾಯಿ ಪಲ್ಲವಿ:** ಇತ್ತೀಚೆಗೆ ಸಾಯಿ ಪಲ್ಲವಿ ತೆಲುಗಿನಲ್ಲಿ ಥಂಡೇಲ್ ಚಿತ್ರದ ಮೂಲಕ ಹಿಟ್ ಗಳಿಸಿದರು. ತಮಿಳಿನಲ್ಲಿ ಅಮರನ್ ಚಿತ್ರದ ಮೂಲಕವೂ ಹಿಟ್ ಗಳಿಸಿದರು. ಪ್ರಸ್ತುತ ಅವರು ಹಿಂದಿಯಲ್ಲಿ ಒಂದು ಸಿನಿಮಾ ಮಾಡುತ್ತಿದ್ದಾರೆ. ಯಶ್ ಜೊತೆ ಪ್ಯಾನ್ ಇಂಡಿಯಾ ಮೂವಿ ರಾಮಾಯಣದಲ್ಲಿ ಸಾಯಿ ಪಲ್ಲವಿ ನಾಯಕಿಯಾಗಿ ನಟಿಸಲಿದ್ದಾರೆ. ಈ ಚಿತ್ರದಲ್ಲಿ ರಣಬೀರ್ ರಾಮನಾಗಿ ಕಾಣಿಸಿಕೊಳ್ಳಲಿದ್ದರೆ.. ಸಾಯಿ ಪಲ್ಲವಿ ಸೀತಾ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಈ ಮಧ್ಯೆ, ಸಾಯಿ ಪಲ್ಲವಿ ಮತ್ತೊಂದು ದೊಡ್ಡ ಸಿನಿಮಾದಲ್ಲಿ ಆಯ್ಕೆಯಾಗಿದ್ದಾರೆ ಎಂದು ಈಗ ತಿಳಿದುಬಂದಿದೆ.

**ಸೇತುಪತಿಗೆ ನಾಯಕಿಯಾಗಿ ಸಾಯಿ ಪಲ್ಲವಿ:** ತಮಿಳಿನಲ್ಲಿ ಮಣಿರತ್ನಂ ನಿರ್ದೇಶನ ಮಾಡುತ್ತಿರುವ ಚಿತ್ರದಲ್ಲಿ ಸಾಯಿ ಪಲ್ಲವಿ ನಾಯಕಿಯಾಗಿ ಆಯ್ಕೆಯಾಗಿದ್ದಾರೆ ಎಂದು ತಿಳಿದುಬಂದಿದೆ. ಈ ಚಿತ್ರದಲ್ಲಿ ವಿಜಯ್ ಸೇತುಪತಿ ನಾಯಕರಾಗಿ ನಟಿಸುತ್ತಿದ್ದಾರೆ. ಈ ಹಿಂದೆ ಮಣಿರತ್ನಂ ನಿರ್ದೇಶನದ ನವಾಬ್ ಚಿತ್ರದಲ್ಲಿ ವಿಜಯ್ ಸೇತುಪತಿ ನಟಿಸಿದ್ದರು. ಈ ಕಾಂಬೊ ಮತ್ತೊಮ್ಮೆ ಪುನರಾವರ್ತನೆಯಾಗಲಿದೆ. ಮಣಿರತ್ನಂ ಈ ಚಿತ್ರವನ್ನು ಒಂದು ಸುಂದರವಾದ ಪ್ರೇಮಕಥೆಯಾಗಿ ನಿರ್ಮಿಸುತ್ತಿದ್ದಾರೆ ಎಂದು ವರದಿಯಾಗಿದೆ. ಮಧ್ಯೆ, ಸಾಯಿ ಪಲ್ಲವಿ ವಿಜಯ್ ಸೇತುಪತಿಗೆ ಜೋಡಿಯಾಗಿ ಸೆಟ್ಟಾಗುತ್ತಾರೆಯೇ ಎಂದು ನೆಟ್ಟಿಗರು ಕಾಮೆಂಟ್ ಮಾಡುತ್ತಿದ್ದಾರೆ. ಇನ್ನೂ ಕೆಲವರು ಸಾಯಿ ಪಲ್ಲವಿ ವಿಜಯ್ ಸೇತುಪತಿಯ ಮಗಳ ಹಾಗೆ ಕಾಣಿಸುತ್ತಾರೆ ಎಂದು ಕೆಲವರು ಕಾಲೆಳೆದಿದ್ದಾರೆ.

# ಟಿ20 ಸರಣಿ ಆರಂಭಕ್ಕೂ ಮುನ್ನವೇ ಟೀಂ ಇಂಡಿಯಾಗೆ ಬಿಗ್ ಶಾಕ್



**ಓವರ್ ದರ ನಿಯಮ ಉಲ್ಲಂಘನೆ**

ದಕ್ಷಿಣ ಆಫ್ರಿಕಾ ವಿರುದ್ಧದ ಏಕದಿನ ಸರಣಿಯನ್ನು ಗೆದ್ದ ಖುಷಿಯಲ್ಲಿದ್ದ ಭಾರತ ಕ್ರಿಕೆಟ್ ತಂಡಕ್ಕೆ ದೊಡ್ಡ ಆಘಾತ ಎದುರಾಗಿದೆ. ವಾಸ್ತವವಾಗಿ ಐಸಿಸಿ, ನಿಧಾನಗತಿಯ ಓವರ್ ದರ ನಿಯಮವನ್ನು ಉಲ್ಲಂಘಿಸಿರುವ ಟೀಂ ಇಂಡಿಯಾಕ್ಕೆ ಶಿಕ್ಷೆ ವಿಧಿಸಿದೆ. ಏಕದಿನ ಸರಣಿಯ ಎರಡನೇ ಪಂದ್ಯದಲ್ಲಿ ಟೀಂ ಇಂಡಿಯಾ ಸ್ಲೋ ಓವರ್ ರೇಟ್ ನಿಯಮವನ್ನು ಮುರಿದಿದ್ದು, ಈ ತಪ್ಪಿಗಾಗಿ ಐಸಿಸಿ ಶಿಕ್ಷೆ ವಿಧಿಸಿದೆ. ರಾಯ್‌ಪುರದಲ್ಲಿ ನಡೆದ ಎರಡನೇ ಏಕದಿನ ಪಂದ್ಯದಲ್ಲಿ ಟೀಂ ಇಂಡಿಯಾ358 ರನ್ ಬಾರಿಸಿಯೂ ಸೋತಿತ್ತು. ಇದೇ ಪಂದ್ಯದಲ್ಲಿ ಟೀಂ ಇಂಡಿಯಾ ನಿಗಧಿತ ಸಮಯಕ್ಕೆ ಓವರ್‌ಗಳನ್ನು ಪೂರ್ಣಗೊಳಿಸಿರಲಿಲ್ಲ. ಪರಿಣಾಮವಾಗಿ, ಐಸಿಸಿ ಈಗ ಟೀಂ ಇಂಡಿಯಾಗೆ ದಂಡ ವಿಧಿಸಿದ್ದು, ಪಂದ್ಯ ಶುಲ್ಕದ ಶೇಕಡಾ 10 ರಷ್ಟು ಮೊತ್ತವನ್ನು ಕಡಿತಗೊಳಿಸಿದೆ.

**ನಿಗಧಿತ ಸಮಯಕ್ಕೆ ಮುಗಿಯದ ಓವರ್‌ಗಳು**

ಟೀಂ ಇಂಡಿಯಾ ನಿಗಧಿತ ಸಮಯಕ್ಕಿಂತ ಎರಡು ಓವರ್ ಕಡಿಮೆ ಬೌಲಿಂಗ್ ಮಾಡಿದ್ದಕ್ಕಾಗಿ ತಪ್ಪಿತಸ್ಥರೆಂದು ಕಂಡುಬಂದ ಕಾರಣ, ಮ್ಯಾಚ್ ರೆಫರಿ ರಿಚಿ ರಿಚರ್ಡ್ಸನ್ ಟೀಂ ಇಂಡಿಯಾಕ್ಕೆ ಈ ದಂಡ ವಿಧಿಸಿದ್ದಾರೆ. ಐಸಿಸಿ ನೀತಿ ಸಂಹಿತೆಯ ಆರ್ಟಿಕಲ್ 2.22 ರ ಅಡಿಯಲ್ಲಿ ಭಾರತೀಯ ಆಟಗಾರರು ಮತ್ತು ಸಹಾಯಕ ಸಿಬ್ಬಂದಿಯನ್ನು ತಪ್ಪಿತಸ್ಥರೆಂದು ಪರಿಗಣಿಸಲಾಗಿದೆ. ಐಸಿಸಿ ನಿಯಮಗಳ ಪ್ರಕಾರ, ಆಟಗಾರನು ನಿಗದಿತ ಸಮಯದೊಳಗೆ ಬೌಲಿಂಗ್ ಮಾಡಲು ವಿಫಲವಾದರೆ, ಪ್ರತಿ ಓವರ್‌ಗೆ ಅವರ ಪಂದ್ಯ ಶುಲ್ಕದ ಐದು ಪ್ರತಿಶತದಷ್ಟು ದಂಡ ವಿಧಿಸಲಾಗುತ್ತದೆ. ನಾಯಕ ಕೆ.ಎಲ್. ರಾಹುಲ್ ಆರೋಪ ಮತ್ತು ದಂಡವನ್ನು ಒಪ್ಪಿಕೊಂಡಿರುವುದರಿಂದ ವಿಚಾರಣೆಯ ಅಗತ್ಯವಿಲ್ಲ ಎಂದು ಐಸಿಸಿ ತಿಳಿಸಿದೆ.

**ಟಿ20 ಸರಣಿ ಆರಂಭ:** ರಾಂಚಿಯಲ್ಲಿ ನಡೆದ ಏಕದಿನ ಪಂದ್ಯದಲ್ಲಿ ಭಾರತ ತಂಡವು ಮಾಡಿದ ತಪ್ಪಿಗೆ ಪ್ರತಿಯಾಗಿ, ನಿಧಾನಗತಿಯ ಓವರ್ ದರಕ್ಕೂ ಪರಿಹಾರ ಕಂಡುಕೊಳ್ಳಬೇಕಾಗುತ್ತದೆ. ನಿಧಾನಗತಿಯ ಓವರ್ ದರದಿಂದಾಗಿ, ಅಂತಿಮ ಓವರ್‌ನಲ್ಲಿ ಭಾರತ ತಂಡವು ಹೆಚ್ಚುವರಿ ಫೀಲ್ಡರ್ ಅನ್ನು ಒಳಕ್ಕೆ ತರಬೇಕಾಯಿತು. ಟಿ20 ಸರಣಿಯಲ್ಲಿ ಇದು ಮತ್ತೆ ಸಂಭವಿಸಿದರೆ, ಅದು ದುಬಾರಿಯಾಗಬಹುದು. ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಟಿ20 ಸರಣಿಯ ಮೊದಲ ಪಂದ್ಯ ಕಟಕ್‌ನಲ್ಲಿ ನಡೆಯಲಿದೆ. ಸರಣಿಯು ಐದು ಪಂದ್ಯಗಳ ಸರಣಿಯಾಗಿದೆ. ಕಳೆದ ಸರಣಿಯಲ್ಲಿ ಭಾರತವು ದಕ್ಷಿಣ ಆಫ್ರಿಕಾವನ್ನು ತಮ್ಮ ತವರು ನೆಲದಲ್ಲಿ 3-1 ಅಂತರದಿಂದ ಸೋಲಿಸಿತು. ಇದಕ್ಕೆ ಅದೇ ಪ್ರದರ್ಶನವನ್ನು ಮುಂದುವರೆಸುವ ಗುರಿಯೊಂದಿಗೆ ಸೂರ್ಯಕುಮಾರ್ ಯಾದವ್ ಪಡೆ ಕಣಕ್ಕಿಳಿಯಲಿದೆ.

# ಪೂರನ್ ಭರ್ಜರಿ ದಾಖಲೆ: ಬಾಬರ್ ಆಝಂ ವಿಶ್ವ ದಾಖಲೆ ಸೇಫ್



**ವೆಸ್ಟ್ ಇಂಡೀಸ್‌ನ ಮೂರನೇ ಬ್ಯಾಟರ್**

ಟಿ20 ಕ್ರಿಕೆಟ್‌ನಲ್ಲಿ ವೆಸ್ಟ್ ಇಂಡೀಸ್‌ನ ಸ್ಫೋಟಕ ದಾಂಡಿಗ ನಿಕೋಲಸ್ ಪೂರನ್ ಹೊಸ ಮೈಲುಗಲ್ಲು ದಾಟಿದ್ದಾರೆ. ಅದು ಕೂಡ ಬರೋಬ್ಬರಿ 10000 ರನ್ ಕಲೆಹಾಕುವ ಮೂಲಕ. ಇತ್ತ ಹತ್ತು ಸಾವಿರ ರನ್ ಕಲೆಹಾಕಿದರೂ ಪಾಕ್ ಬ್ಯಾಟರ್ ಬಾಬರ್ ಆಝಂ ಅವರ ವಿಶ್ವದಾಖಲೆಯನ್ನು ಮುರಿಯಲು ಸಾಧ್ಯವಾಗಿಲ್ಲ ಎಂಬುದು ವಿಶೇಷ.

ಯುಎಇನಲ್ಲಿ ನಡೆಯುತ್ತಿರುವ ಇಂಟರ್ ನ್ಯಾಷನಲ್ ಲೀಗ್ ಟಿ20 ಟೂರ್ನಿಯಲ್ಲಿ ಎಂಐ ಎಮಿರೇಟ್ಸ್ ಪರ ಕಣಕ್ಕಿಳಿಯುತ್ತಿರುವ ಪೂರನ್ ಶಾರ್ಜಾ ವಾರಿಯರ್ಸ್ ವಿರುದ್ಧದ ಪಂದ್ಯದಲ್ಲಿ 5 ರನ್ ಕಲೆಹಾಕಿದ್ದರು. ಈ ಐದು ರನ್‌ಗಳೊಂದಿಗೆ ಟಿ20 ಕ್ರಿಕೆಟ್‌ನಲ್ಲಿ 10000 ರನ್‌ಗಳನ್ನು ಪೂರೈಸಿದ್ದಾರೆ. ಈ ಮೂಲಕ ಟಿ20 ಕ್ರಿಕೆಟ್‌ನಲ್ಲಿ 10000 ರನ್ ಕಲೆಹಾಕಿದ ವಿಶ್ವದ ವಿಶ್ವದ 19ನೇ ಬ್ಯಾಟರ್ ಎನಿಸಿಕೊಂಡಿದ್ದಾರೆ. ಹಾಗೆಯೇ ಈ ಸಾಧನೆ ಮಾಡಿದ ವೆಸ್ಟ್ ಇಂಡೀಸ್‌ನ ಮೂರನೇ ಬ್ಯಾಟರ್ ಎಂಬ ಹೆಗ್ಗಳಿಕೆಯನ್ನು ಕೂಡ ತಮ್ಮದಾಗಿಸಿಕೊಂಡಿದ್ದಾರೆ. ಇದಕ್ಕೂ ಮುನ್ನ ಕ್ರಿಸ್ ಗೇಲ್ ಹಾಗೂ ಕೀರನ್ ಪೊಲಾರ್ಡ್ ಈ ಸಾಧನೆ ಮಾಡಿದ್ದರು. ಪೂರನ್ ಅವರ ಈ ಸಾಧನೆಯ ಹೊರತಾಗಿಯೂ ಟಿ20 ಕ್ರಿಕೆಟ್‌ನಲ್ಲಿ ಅತೀ ವೇಗವಾಗಿ 10000 ರನ್ ಕಲೆಹಾಕಿದ ವಿಶ್ವದಾಖಲೆ ಪಾಕಿಸ್ತಾನ್ ಬ್ಯಾಟರ್ ಬಾಬರ್ ಆಝಂ ಹೆಸರಿನಲ್ಲಿಯೇ ಉಳಿದಿದೆ. ಬಾಬರ್ ಕೇವಲ 271 ಇನಿಂಗ್ಸ್‌ಗಳ ಮೂಲಕ ಟಿ20 ಕ್ರಿಕೆಟ್‌ನಲ್ಲಿ ಹತ್ತು ಸಾವಿರ ರನ್ ಕಲೆಹಾಕಿದ್ದಾರೆ. ಇತ್ತ 10 ಸಾವಿರ ರನ್ ಕಲೆಹಾಕಲು ನಿಕೋಲಸ್ ಪೂರನ್ ತೆಗೆದುಕೊಂಡಿರುವುದು ಬರೋಬ್ಬರಿ 400 ಇನಿಂಗ್ಸ್‌ಗಳನ್ನು. ಇನ್ನು ವಿರಾಟ್ ಕೊಹ್ಲಿ ಈ ಸಾಧನೆ ಮಾಡಲು 299 ಇನಿಂಗ್ಸ್‌ಗಳನ್ನು ತೆಗೆದುಕೊಂಡಿದ್ದರು. ಹಾಗೆಯೇ ಕ್ರಿಸ್ ಗೇಲ್ 285 ಇನಿಂಗ್ಸ್‌ಗಳ ಮೂಲಕ 10000 ರನ್‌ಗಳ ಗಡಿಮುಟ್ಟಿದ್ದರು.

ಅಂದರೆ ಪೂರನ್ 10000 ಕ್ಲಬ್‌ಗೆ ಸೇರಿದರೂ ಬಾಬರ್ ಆಝಂ ಹೆಸರಿನಲ್ಲಿರುವ ದಾಖಲೆಯನ್ನು ಮುರಿಯಲು ಸಾಧ್ಯವಾಗಿಲ್ಲ ಎಂಬುದು ಇಲ್ಲಿ ಉಲ್ಲೇಖಾರ್ಹ.

# ನಿವೃತ್ತಿ ಘೋಷಿಸಿದ ಮಿಚೆಲ್ ಮಾರ್ಷ್



ಆಸ್ಟ್ರೇಲಿಯಾ ಕ್ರಿಕೆಟ್ ತಂಡವು ಪ್ರಸ್ತುತ ಇಂಗ್ಲೆಂಡ್ ವಿರುದ್ಧ ತವರಿನಲ್ಲಿ ಆಶಸ್ (ಟೆಸ್ಟ್ ಸರಣಿಯನ್ನು ಆಡುತ್ತಿದೆ. ಈ ಸರಣಿಯ ನಡುವೆ, ಆಸ್ಟ್ರೇಲಿಯಾದ ಸ್ಟಾರ್ ಆಟಗಾರ ಅಚ್ಚರಿಯ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ಆಸ್ಟ್ರೇಲಿಯಾದ ಆಲ್‌ರೌಂಡರ್ ಮಿಚೆಲ್ ಮಾರ್ಷ್ ರಾಜ್ಯ ಮಟ್ಟದ ರೆಡ್-ಬಾಲ್ ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸಿದ್ದಾರೆ. ಪರಿಣಾಮವಾಗಿ, ಅವರು ಇನ್ನು ಮುಂದೆ ಶೆಫೀಲ್ಡ್ ಶೀಲ್ಡ್ ಟೂರ್ನಮೆಂಟ್‌ನಲ್ಲಿ ಪಶ್ಚಿಮ ಆಸ್ಟ್ರೇಲಿಯಾ ಪರ ಆಡುವುದಿಲ್ಲ. ಈ ನಿರ್ಧಾರವು ಮಾರ್ಷ್ ಅವರ ಟೆಸ್ಟ್ ಕ್ರಿಕೆಟ್ ಭವಿಷ್ಯದ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಏಕೆಂದರೆ ಆಶಸ್ ಸರಣಿಗೆ ಆಯ್ಕೆಯಾಗುವ ನಿರೀಕ್ಷೆಯಲಿದ್ದ ಮಾರ್ಷ್ ಈ ನಿರ್ಧಾರ ತೆಗೆದುಕೊಂಡಿರುವುದು ಸಾಕಷ್ಟು ಅನುಮಾನಗಳನ್ನು ಮೂಡಿಸಿದೆ.

**ಅಚ್ಚರಿಯ ನಿರ್ಧಾರ ತೆಗೆದುಕೊಂಡ ಮಾರ್ಷ್**

ಮೆಲ್ಬೋರ್ನ್ ಕ್ರಿಕೆಟ್ ಮೈದಾನದಲ್ಲಿ ನಡೆದ ಇತ್ತೀಚಿನ ಪಂದ್ಯಗಳಲ್ಲಿ ಕಳಪೆ ಪ್ರದರ್ಶನ ನೀಡಿದ್ದ ಮಾರ್ಷ್, ತಮ್ಮ ತಂಡದ ಆಟಗಾರರಿಗೆ ತಮ್ಮ ನಿರ್ಧಾರವನ್ನು ತಿಳಿಸಿದ್ದಾರೆ. 2019 ರಿಂದ, ಅವರು ಕಾರ್ಯನಿರತ ಅಂತರರಾಷ್ಟ್ರೀಯ ವೇಳಾಪಟ್ಟಿಯಿಂದಾಗಿ ರಾಜ್ಯ ಮಟ್ಟದಲ್ಲಿ ಕೇವಲ ಒಂಬತ್ತು ಪಂದ್ಯಗಳನ್ನು ಆಡಿದ್ದಾರೆ. 2009 ರಲ್ಲಿ ಪಶ್ಚಿಮ ಆಸ್ಟ್ರೇಲಿಯಾ ಪರ ಪಾದಾರ್ಪಣೆ ಮಾಡಿದ ಮಾರ್ಷ್, ಈಗ ರೆಡ್-ಬಾಲ್ ಕ್ರಿಕೆಟ್‌ನಿಂದ ದೂರ ಸರಿಯಲು ನಿರ್ಧರಿಸಿದ್ದಾರೆ. ಆದರೆ ರಾಷ್ಟ್ರೀಯ ತಂಡಕ್ಕಾಗಿ ಟೆಸ್ಟ್ ಪಂದ್ಯಗಳನ್ನು ಆಡುವ ಬಾಗಿಲನ್ನು ಸಂಪೂರ್ಣವಾಗಿ ಮುಚ್ಚಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

# ಪಾಕಿಸ್ತಾನದಲ್ಲಿ ಅಭಿಷೇಕ್ ಶರ್ಮಾ ನಂಬರ್ 1



ಟೀಮ್ ಇಂಡಿಯಾದ ಯಂಗ್ ಸೆನ್ಸೇಷನ್ ಅಭಿಷೇಕ್ ಶರ್ಮಾ ಸೌತ್ ಆಫ್ರಿಕಾ ವಿರುದ್ಧದ ಟಿ20 ಸರಣಿಗಾಗಿ ಸಜ್ಜಾಗುತ್ತಿದ್ದಾರೆ. ಈ ಸರಣಿಯ ಮೊದಲ ಪಂದ್ಯವು ನಾಳೆ (ಡಿ.9) ಕಟಕ್‌ನಲ್ಲಿ ನಡೆಯಲಿದೆ. ಈ ಪಂದ್ಯಕ್ಕೂ ಮುನ್ನವೇ ಅಭಿಷೇಕ್ ಶರ್ಮಾಗೆ ಗೂಗಲ್ ಕಡೆಯಿಂದ ಗುಡ್ ನ್ಯೂಸ್‌ವೊಂದು ಸಿಕ್ಕಿದೆ.

ಗೂಗಲ್ 2025 ರ ಅತ್ಯಂತ ಟ್ರೆಂಡಿಂಗ್ ಆಟಗಾರರ ಪಟ್ಟಿಯನ್ನು ಪ್ರಕಟಿಸಿದೆ. ಅಂದರೆ ಯಾವ ದೇಶದಲ್ಲಿ ಯಾವ ಆಟಗಾರನನ್ನು ಗೂಗಲ್‌ನಲ್ಲಿ ಹೆಚ್ಚು ಸರ್ಚ್ ಮಾಡಿದ್ದಾರೆ ಎಂಬ ಪಟ್ಟಿಯನ್ನು ಬಿಡುಗಡೆ ಮಾಡಿದ್ದಾರೆ. ಹೀಗೆ ಬಿಡುಗಡೆ ಮಾಡಿದ ಪಾಕಿಸ್ತಾನದ ಗೂಗಲ್ ಟ್ರೆಂಡಿಂಗ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಕಾಣಿಸಿಕೊಂಡಿರುವುದು ಟೀಮ್ ಇಂಡಿಯಾ ಆಟಗಾರ ಅಭಿಷೇಕ್ ಶರ್ಮಾ ಎಂಬುದು ವಿಶೇಷ. ಈ ವರ್ಷ ಪಾಕಿಸ್ತಾನದಲ್ಲಿ ಗೂಗಲ್‌ನಲ್ಲಿ ಹೆಚ್ಚು ಟ್ರೆಂಡಿಂಗ್ ಆದ ಆಟಗಾರರ ಪಟ್ಟಿಯಲ್ಲಿ ಭಾರತೀಯ ಬ್ಯಾಟ್ಸ್‌ಮನ್ ಅಭಿಷೇಕ್ ಶರ್ಮಾ ನಂಬರ್-1 ಸ್ಥಾನ ಪಡೆದಿದ್ದಾರೆ. ಪಾಕ್ ಆಟಗಾರರಾದ ಬಾಬರ್ ಆಝಂ, ಶಾಹೀನ್ ಶಾ ಅಫ್ರಿದಿ, ಮೊಹಮ್ಮದ್ ರಿಝ್ವಾನ್ ನಂತಹ ಆಟಗಾರರನ್ನೇ ಹಿಂದಿಕ್ಕಿ ಅಭಿಷೇಕ್ ಶರ್ಮಾ ಪಾಕಿಸ್ತಾನದಲ್ಲಿ ಸಂಚಲನ ಸೃಷ್ಟಿಸಿದ್ದಾರೆ. ಕುತೂಹಲಕಾರಿ ವಿಷಯ ಎಂದರೆ ಪಾಕಿಸ್ತಾನದ ಗೂಗಲ್ ಸರ್ಚ್ ಟ್ರೆಂಡಿಂಗ್ ಪಟ್ಟಿಯ ಟಾಪ್-10 ನಲ್ಲಿ ಅಲ್ಲಿನ ಸ್ಟಾರ್ ಆಟಗಾರರಾದ ಬಾಬರ್ ಆಝಂ, ಶಾಹೀನ್ ಶಾ ಅಫ್ರಿದಿ ಕಾಣಿಸಿಕೊಂಡಿಲ್ಲ. ಅಲ್ಲದೆ ಹೊಸ ಸೆನ್ಸೇಷನ್ ಸೃಷ್ಟಿಸಿದ್ದ ಯುವ ದಾಂಡಿಗ ಸೈಮ್ ಅಯ್ಯೂಬ್ ಆರನೇ ಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966